ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 20

ಮೇ 11-17, 1998 ರೂ. 2.00

ರಾಜ್ಯದಲ್ಲಿ ಅಧಿಕಾರಗಿಟ್ಟಿಸುವ ಬಿಜೆಪಿ ಹವಣಿಕೆಯನ್ನು ವಿಫಲಗೊಳಿಸಬೇಕು

ಚೀಣಾ ದೂಷಣೆ ಕೇವಲ ಫರ್ನಾಂಡೀಸ್ ಅಜೆಂಡಾವೋ ಜನಗಳ ಗಮನವನ್ನು ಬೇರೆಡೆಗೆ ಸೆಳೆಯುವ ತಂತ್ರವೋ?

ವಿಶ್ವಾಸ ಠರಾವಿನ ಮೇಲೆ ಮಾತನಾಡುತ್ತಾ ಪ್ರಧಾನಮಂತ್ರಿ ವಾಜಪೇಯಿಯವರು ವಿದೇಶಿ ಧೋರಣೆಯ ಎಲ್ಲರೂ ಸ್ವೀಕರಿಸುವ ಅಂಶಗಳನ್ನು ಕುರಿತಂತೆ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಸಾರಿದ್ದರು. ಆದರೆ ಅವರ ರಕ್ಷಣಾ ಮಂತ್ರಿಗಳ ಮಟ್ಟಿಗೆ ಈ ಮಾತಿಗೆ ಏನೂ ಅರ್ಥವಿದ್ದಂತೆ ಕಾಣುವುದಿಲ್ಲ. ಒಂದೆಡೆ ಫರ್ನಾಂಡೀಸ್ ಚೀಣಾ ದೂಷಣೆಯನ್ನು ಮುಂದುವರಿಸುತ್ತಿದ್ದರೆ ಇನ್ನೊಂದೆಡೆ ಬಿಜೆಪಿ ನೇತೃತ್ವದ ಸರಕಾರ ನಮ್ಮ ವಿದೇಶಾಂಗ ನೀತಿಯ ಸಾಮ್ರಾಜ್ಯಶಾಹಿ-ವಿರೋಧಿ ಮೊನಚನ್ನು ಮೊಟಕು ಮಾಡುವ ಪ್ರಯತ್ನದಲ್ಲಿರುವಂತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್ ಹೇಳಿದ್ದಾರೆ. ನಮ್ಮ ಉಪಖಂಡದಲ್ಲಿ ಅಫಘಾನಿಸ್ತಾನ ಮತ್ತು ಪಾಕಿಸ್ತಾನದಲ್ಲಿ ಅಮೆರಿಕಾದ ಶಾಮೀಲು ತಂದಿರುವ ಅಪಾಯವನ್ನು ನಿರ್ಲಕ್ಷಿಸಿ, ಸಮಸ್ಯೆಯೇ ಇಲ್ಲದಲ್ಲಿ ಸಮಸ್ಯೆಯನ್ನು ಸೃಷ್ಟಿಸಲಾಗುತ್ತಿದೆ ಎಂದು ಸುರ್ಜಿತ್ ಖೇದ ವ್ಯಕ್ತಪಡಿಸಿದ್ದಾರೆ.

ರಕ್ಷಣಾ ಮಂತ್ರಿಗಳು ಮೊದಲು ಪಾಕಿಸ್ತಾನ ಘೋರಿ ಕ್ಷಿಪಣಿ ತಯಾರಿಸಿದ ಸುದ್ದಿ ಬಂದಾಗ ಅದಕ್ಕೆ ಚೀಣಾದ ತಾಂತ್ರಿಕ ಸಹಾಯವಿದೆ ಎಂದರು. ಆದರೆ ಅಮೆರಿಕಾ ಕೂಡಾ ಈ ತಾಂತ್ರಿಕ ಸಹಾಯ ಬೇರೆಡೆಯಿಂದ ಬಂದಿದೆ ಎಂದಾಗ ಅದನ್ನು ಬಿಟ್ಟರು. ಅರುಣಾಚಲ ಪ್ರದೇಶದಲ್ಲಿ ಚೀಣಾ ಹೆಲಿಪ್ಯಾಡ್ ತಯಾರಿಸಿದೆ ಯೆಂದರು. ನಮ್ಮ ಪ್ರಧಾನ ಮಂತ್ರಿಗಳು ಮತ್ತು ಚೀಣಾ ಅಧಿಕಾರಿಗಳು ಈ ಆಪಾದನೆಯನ್ನು ತಳ್ಳಿಹಾಕಿದರು. ಆದರೆ ಫರ್ನಾಂಡೀಸರು ತಮ್ಮ ಮಿತಿಮೀರದಂತೆ ಪ್ರಧಾನಿಗಳು ತಾಕೀತು ಮಾಡಲಿಲ್ಲ.

ಮೇ 3 ರಂದು ಮತ್ತೆ ಫರ್ನಾಂಡೀಸ್ ಉತ್ತರ ಪ್ರದೇಶ ಗಡಿಯಲ್ಲಿ ಚೀಣಾ ವಿಮಾನ ಪಟ್ಟಿ ತಯಾರಿಸುತ್ತಿದೆ ಎಂದರು. ಎರಡು ದಿನಗಳ ನಂತರ ಚೀಣಾ ನಮ್ಮ ನಂಬರ್ ಒಂದು ಶತ್ರು ಎಂದರು. ಮ್ಯಾನ್ಮರ್‌ನ ಕೋಕೋ ದ್ವೀಪದಲ್ಲಿ ರಾಡರ್ ವ್ಯವಸ್ಥೆ ನಿರ್ಮಿಸಿದೆ ಎಂದೂ ಆಪಾದಿಸಿದರು. ಮ್ಯಾನ್ಮರ್ ಸರಕಾರ ಇದನ್ನು ಬಲವಾಗಿ ನಿರಾಕರಿಸಿದರೆ ಚೀಣಾ ಈ ಹೇಳಿಕೆಗಳ ಬಗ್ಗೆ 'ಬಲವಾದ ಖೇದ ಹಾಗೂ ಅಸಂತೃಪ್ತಿ'ಯನ್ನು ವ್ಯಕ್ತಪಡಿಸುತ್ತಾ ಫರ್ನಾಂಡೀಸ್ ಎರಡು ದೇಶಗಳ ನಡುವಿನ ಸಂಬಂಧಗಳನ್ನು ಉತ್ತಮ ಪಡಿಸುವ ಅನುಕೂಲಕರ ವಾತಾವರಣ ವನ್ನು 'ಗಂಭೀರವಾಗಿ ಬುಡಮೇಲು ಮಾಡುತ್ತಿದ್ದಾರೆ' ಎಂದು ಆಪಾದಿಸಿತು. ಫರ್ನಾಂಡೀಸರ ಆಪಾದನೆಗಳು ಅತ್ಯಂತ ಹಾಸ್ಯಾಸ್ಪದ, ತಳ್ಳಿಹಾಕುವ ಅರ್ಹತೆಯೂ ಅವಕ್ಕಿಲ್ಲ ಎಂದು ಬಲವಾದ ಮಾತುಗಳಲ್ಲಿ ಅದು ಹೇಳಿದೆ.

ಆದರೆ ಬಿಜೆಪಿ ನೇತೃತ್ವದ ಸರಕಾರ ಇದಕ್ಕಿನ್ನೂ ಪ್ರತಿಕ್ರಿಯಿಸಿಲ್ಲ, ಚೀಣೀ ಹೇಳಿಕೆಯನ್ನು ಗಮನಿಸಲಾಗಿದೆ ಎಂದಷ್ಟೇ ಹೇಳಿದೆ.

ಇಲ್ಲಿರುವ ಪ್ರಶ್ನೆ, ಚೀಣಾ ದೂಷಣೆ ಕೇವಲ ಫರ್ನಾಂಡೀಸ್‌ರವರ ವೈಯಕ್ತಿಕ ಅಜೆಂಡಾವೇ ಅಥವಾ ಇದರ ಹಿಂದೆ ಇನ್ನೇನಾದರೂ ಇದೆಯೇ? ಎಂದು ಸುರ್ಜಿತ್ ಪ್ರಶ್ನಿಸಿದ್ದಾರೆ. ಫರ್ನಾಂಡೀಸ್ ಆರ್ಭಟಗಳಿಗೆ ಕಡಿವಾಣ ಹಾಕದೆ ಅವರ ಹೇಳಿಕೆಗಳನ್ನು ನಿರಾಕರಿಸುವ ಹೇಳಿಕೆ ಗಳನ್ನೂ ನೀಡದೆ ನಿಜವಾದ ಶತ್ರುವಿನಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಬಿಜೆಪಿ ನೇತೃತ್ವದ ಸರಕಾರದ ತಂತ್ರವೇ ಎಂಬ ಸಂದೇಹವನ್ನು ಉಂಟು ಮಾಡಿದೆ ಎಂದು ಸುರ್ಜಿತ್ ಹೇಳಿದ್ದಾರೆ.

ಬಿಜೆಪಿ ಉದಾರೀಕರಣ, ಜಾಗತೀಕರಣ ನೀತಿಗಳನ್ನು ತನ್ನ ಶಕ್ತಿ ಮೀರಿ ಜಾರಿಗೆ ತರುತ್ತಿರುವುದರಿಂದ ಜನಗಳ ಗಮನವನ್ನು ಬೇರೆಡೆಗೆ ಸೆಳೆದು, ಈ ಮೂಲಕ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ಕೋಪದ ತೀವ್ರತೆಯನ್ನು ಮೊಟಕುಗೊಳಿಸುವ ದುರುದ್ದೇಶ ಇದರ ಹಿಂದೆ ಇದ್ದಂತಿದೆ.

ವಸ್ತುಸ್ಥಿತಿಗೆ ವ್ಯತಿರಿಕ್ತವಾದ ಇಂತಹ ಹೇಳಿಕೆಗಳನ್ನು ನೀಡದಂತೆ ಫರ್ನಾಂಡೀಸರಿಗೆ ಹೇಳಬೇಕು, ಸಂಕುಚಿತ ದುರಭಿಮಾನಗಳನ್ನು ಉದ್ರೇಕಿಸದೆ ಎರಡೂ ದೇಶಗಳ ಜನಗಳಲ್ಲಿ ಇರುವ ಪರಸ್ಪರ ಸಹಕಾರದ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು ಎಂದು ಸುರ್ಜಿತ್ ಹೇಳಿದ್ದಾರೆ.

ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವ ಮೂಲಕ ದಕ್ಷಿಣ ಭಾರತದಲ್ಲಿ ನೆಲೆಯೊಂದನ್ನು ಭದ್ರಪಡಿಸಲು ಹವಣಿಸುತ್ತಿರುವ ಬಿ.ಜೆ.ಪಿಯ ಪ್ರಯತ್ನವನ್ನು ವಿಫಲಗೊಳಿಸುವುದು ಪಕ್ಷದ ತಕ್ಷಣದ ಪ್ರಮುಖ ಆದ್ಯತೆಯಾಗಬೇಕೆಂದು ಮೇ 3 ಹಾಗೂ 4 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನಿರ್ಧರಿಸಿದೆ.

ಕಾಂಗ್ರೆಸ್ ಸರ್ಕಾರದಿಂದ ಆರಂಭಿಸಲ್ಪಟ್ಟು ಸಂಯುಕ್ತ ರಂಗ ಸರ್ಕಾರದಿಂದ ಮುಂದುವರೆಸಲ್ಪಟ್ಟ ಹೊಸ ಆರ್ಥಿಕ ನೀತಿಗಳ ದುಷ್ಪರಿಣಾಮಗಳಿಂದ ಜನತೆಯಲ್ಲಿ ಉಂಟಾದ ಅಸಂತೃಪ್ತಿಯ ಲಾಭಪಡೆದು, ಭ್ರಷ್ಟಾಚಾರಿಗಳೊಂದಿಗೆ ಕ್ರಿಮಿನಲ್ಸ್ ಗಳೊಂದಿಗೆ ಸಂಕೋಚವಿಲ್ಲದೆ ನೆಂಟಸ್ಥಿಕೆಮಾಡಿ, ಅಧಿಕಾರಲಾಲಸಿ ಪಕ್ಷಗಳೊಂದಿಗೆ ಸಮಯಸಾಧಕ ಮೈತ್ರಿಯನ್ನು ಸಾಧಿಸಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಂತಾಗಿದೆ. ರಾಜ್ಯದಿಂದ 13 ಲೋಕಸಭಾ ಸ್ಥಾನಗಳನ್ನು ಗೆದ್ದಿರುವ ಬಿಜೆಪಿ ಕರ್ನಾಟಕದ ಮೂವರನ್ನು ಮಂತ್ರಿಗಳಾಗಿಸಿದೆ. ಇವರ ಮೂಲಕ ರಾಜ್ಯದ ಆಡಳಿತದ ಮೇಲೆ ಪ್ರಭಾವ ಬೀರಲು ಒಂದು ಕಡೆ ಬಿಜೆಪಿ ಪ್ರಯತ್ನ ಮಾಡುತ್ತಿರುವಾಗ ಇನ್ನೊಂದು ಕಡೆಯಿಂದ ಆರ್.ಎಸ್.ಎಸ್ ಮೂಲಕ ವಿವಿಧ ಜನ ವಿಭಾಗಗಳ ನಡುವೆ ತನ್ನ ಬಲವನ್ನು ವಿಸ್ತರಿಸಲು ಕೆಲಸಮಾಡುತ್ತಿದೆ.

ಏಕೆ ನಿಷ್ಫಲ ಗೊಳಿಸಬೇಕು?

ಇಲ್ಲಿಯವರೆಗೆ ಬಾಯಲ್ಲಿ ಸ್ವದೇಶೀ ಮಂತ್ರವನ್ನು ಪಠಿಸುತ್ತಿದ್ದ ಬಿಜೆಪಿಯ ನಿಜ ಬಣ್ಣ ಬಯಲಾಗತೊಡಗಿದೆ. ಈಗಾಗಲೇ ಸಾವಿರಾರು ಕೈಗಾರಿಕೆಗಳ ಬಾಗಿಲು ಮುಚ್ಚಿಸಿ ಲಕ್ಷಾಂತರ ಕಾರ್ಮಿಕರನ್ನು ಬೀದಿಪಾಲಾಗುವಂತೆ ಮಾಡಿರುವ ಕೃಷಿ ಕ್ಷೇತ್ರವನ್ನು ವಿನಾಶದ ಅಂಚಿಗೆ ತಳ್ಳಿ ರೈತರು ಆತ್ಮಹತ್ಯೆಗೆ ಶರಣಾಗುವಂತೆ ಬಲವಂತಪಡಿಸಿದ ಉದಾರೀಕರಣದ ನೀತಿಯನ್ನು ಇನ್ನಷ್ಟು ರಭಸದಿಂದ ಮುಂದುವರೆಸುವ ಅಂಗವಾಗಿ ಬಿಜೆಪಿ ಸರ್ಕಾರದ ಹೊಸ ಆಮದು ರಫ್ತು ನೀತಿ ಹೊರಬಿದ್ದಿದೆ. 320 ಬಗೆಯ ಉತ್ಪನ್ನಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಲು ಅವಕಾಶ ನೀಡುವ ಸರ್ಕಾರದ ತೀರ್ಮಾನದ ಮೂಲಕ ದೇಶದ ಕೃಷಿ ಹಾಗೂ ಕೈಗಾರಿಕಾ ವಲಯಗಳನ್ನು ಮರುಭೂಮಿಗಳಾಗಿಸುವ ದಿಕ್ಕಿನಲ್ಲಿ ಬಿಜೆಪಿ ದೃಢವಾದ ಹೆಜ್ಜೆಯಿಟ್ಟಂತಾಗಿದೆ.

ಬಿಜೆಪಿಯ ಬಲವರ್ಧನೆಯ ಕುರಿತಾದ ಆತಂಕ ಇಷ್ಟಕ್ಕೆ ಸೀಮಿತವಾಗಿಲ್ಲ. ಅದರ 'ಒಂದೇ ರಾಷ್ಟ್ರ, ಒಂದೇ ಸಂಸ್ಕೃತಿ, ಒಂದೇ ಜನಾಂಗ' ಪ್ರತಿಪಾದನೆ ದೇಶವನ್ನು ತುಂಡು ತುಂಡಾಗಿಸುವ ದುರಂತಕ್ಕೆ ಆಹ್ವಾನವಾಗಿದೆ. ಭಾರತೀಯರಲ್ಲಿ ಹಾಸುಹೊಕ್ಕಾಗಿರುವ ಧಾರ್ಮಿಕ ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯತೆಗಳನ್ನು ನಾಶಮಾಡುವ ಅದರ ಕರಾಳ ಯೋಜನೆಯ ಅನುಷ್ಠಾನಕ್ಕೆ ಅದು ಹೊಂಚುಹಾಕುತ್ತಿದೆ. ದೇಶಕ್ಕೆ ಹಿಟ್ಲರ್‌ಶಾಹಿ ಪ್ರಭುತ್ವವನ್ನು ಒದಗಿಸಲು ಬದ್ಧವಾಗಿರುವ ಆರ್.ಎಸ್.ಎಸ್. ಬಿ.ಜೆ.ಪಿ.ಯ ಮೆದುಳಾಗಿ ಕಾರ್ಯ ನಿರ್ವಹಿಸುತ್ತಿರುವುದು ಆತಂಕವನ್ನು ಹೆಚ್ಚಿಸುತ್ತದೆ.

ಭಾರತವು ನೆರೆಯ ರಾಷ್ಟ್ರಗಳೊಂದಿಗೆ ತನ್ನ ಸಂಬಂಧವನ್ನು ಸುಧಾರಿಸಿಕೊಳ್ಳುವ ದಿಕ್ಕಿನಲ್ಲಿ ಇಲ್ಲಿಯ ವರೆಗಿನ ಸಾಧನೆಗಳು ಬಿ.ಜೆ.ಪಿ. ಸರ್ಕಾರದ ಕೈಯಲ್ಲಿ ಅಳಿದು ಹೋಗುವ ಅಪಾಯವಿದೆ. ಪಾಕಿಸ್ತಾನ ಹಾಗೂ ಚೀನಾ ದೇಶಗಳ ಕುರಿತಾಗಿ ಬಿಜೆಪಿ ಸರ್ಕಾರದ ಮಂತ್ರಿಗಳ ಬೇಜವಾಬ್ದಾರಿಯುತ ಹೇಳಿಕೆಗಳು ಭಾರತದ ಉಪಖಂಡದಲ್ಲಿ ಅನಾವಶ್ಯಕ ದ್ವೇಷವನ್ನು ಹೆಚ್ಚಿಸಲಿದೆ. **ಸಾಮ್ರಾಜ್ಯಶಾಹಿ ಅಮೇರಿಕವು ಡಿಯಾಗೊ ಗಾರ್ಸಿಯಾದಲ್ಲಿ ಸ್ಥಾಪಿಸಿರುವ ಮಿಲಿಟರಿ ನೆಲೆಯ ವಿರುದ್ಧಧ್ವನಿ ಎತ್ತಲು ಸಹ ಧೈರ್ಯವಿಲ್ಲದೆ ಚೀನಾದ ವಿರುದ್ಧ ಸುಳ್ಳು ಆರೋಪ ಮಾಡುತ್ತಿರುವುದು ಜನತೆಯ ದಾರಿತಪ್ಪಿಸುವ ಬಿ.ಜೆ.ಪಿ.ಯ ತಂತ್ರವಾಗಿದೆ.**

ಬಿ.ಜೆಪಿ. ಸರ್ಕಾರ ಎಷ್ಟು ಕಾಲ ಅಧಿಕಾರದಲ್ಲಿ ಇರುತ್ತದೊ ಅಷ್ಟು ಹೆಚ್ಚು ದೇಶದ ಹಿತಕ್ಕೆ ಅಪಾಯ. ಉನ್ನತ ಸರ್ಕಾರಿ ಹುದ್ದೆಗಳಿಗೆ ಪೋಲೀಸ್, ಸೈನ್ಯ ಮೊದಲಾದ ಪ್ರಮುಖ ರಂಗಗಳಲ್ಲಿ ಕಡು ಹಿಂದುತ್ವವಾದಿ ವ್ಯಕ್ತಿಗಳನ್ನು ಸೇರಿಸುವ, ಶೈಕ್ಷಣಿಕ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳನ್ನು ಬದಲಾಯಿಸುವ ಬಿ.ಜೆ.ಪಿ. ಸರ್ಕಾರದ ಕ್ರಮಗಳಿಂದ ಆಗಬಹುದಾದ ಅನಾಹುತ ಅಂದಾಜು ಮಾಡಲಾಗದು.

ಜನತಾ ದಳದ ನಿಷ್ಕ್ರಿಯತೆ

ಅಂತಹ ಪ್ರತಿಗಾಮಿ ಪಕ್ಷಕ್ಕೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಅವಕಾಶವಾಗದಂತೆ ನೋಡಿಕೊಳ್ಳಬೇಕಾದುದು ಎಲ್ಲ ಎಡ, ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯವಾಗಿದೆ. ದೇಶವನ್ನು 40ಕ್ಕೂ ಹೆಚ್ಚು ವರ್ಷಗಳ ಕಾಲ ಆಳಿದ ಕಾಂಗ್ರೆಸ್ ಪಕ್ಷ ಕೊನೆಗೆ ದೇಶವನ್ನು ಬಿಜೆಪಿ ಕೈಯಲ್ಲಿ ಕೊಟ್ಟಿರುವುದು ಅದರ ದೊಡ್ಡ ದುರಂತವಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ಸನ್ನು ತಿರಸ್ಕರಿಸಿದ ಜನತೆ ಜನತಾದಳಕ್ಕೆ ಅಧಿಕಾರ ನೀಡಿದಾಗ್ಯೂ ಜನತಾದಳ ಸರ್ಕಾರಕ್ಕೆ ಜನತೆಯ ವಿಶ್ವಾಸವನ್ನು ಉಳಿಸಿಕೊಳ್ಳಲಾಗದಿರುವುದು ಮತ್ತು ಬಿ.ಜೆ.ಪಿ.ಯು ಜನತೆಯ ಅತೃಪ್ತಿಯ ಲಾಭ ಪಡೆಯುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳಿಂದ ಬಂದಿರುವ ಸವಾಲನ್ನು ದೃಢವಾಗಿ ಎದುರಿಸುವ ವಿಷಯದಲ್ಲಿಯೂ ಜನತಾದಳ ಸರ್ಕಾರದ ಮುತುವರ್ಜಿ ಏನೇನೂ ಸಾಲದು. ಈಗಲಾದರೂ ಎಚ್ಚೆತ್ತುಕೊಂಡು ಬಿಜೆಪಿ ಮೂಲಕ ರಾಜ್ಯಕ್ಕೆ ಎದುರಾಗಿರುವ ಕೋಮುವಾದಿ ಶಕ್ತಿಗಳ ಸವಾಲನ್ನು ಎದುರಿಸಲು ಎಲ್ಲಾ ಜಾತ್ಯಾತೀತ ಶಕ್ತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ರಾಜ್ಯ ಜನತಾದಳವನ್ನು ಒತ್ತಾಯಿಸಿದೆ.


ಕೇವಲ ವ್ಯಕ್ತಿಗಳ ನಡುವಿನ ದ್ವೇಷ ಸಾಧನೆಗಾಗಿ ರಾಜ್ಯ ಜನತಾದಳದಲ್ಲಿ ಒಡಕು ತಂದು ಲೋಕಶಕ್ತಿ ನವ ನಿರ್ಮಾಣ ವೇದಿಕೆಯ ಹೆಸರಿನಲ್ಲಿ ರಾಜ್ಯದಲ್ಲಿ ಬಿ.ಜೆ.ಪಿ ಬೆಳವಣಿಗೆಗೆ ರಾಮಕೃಷ್ಣ ಹೆಗಡೆಯವರಂತಹ ಹಿರಿಯ ರಾಜಕಾರಣಿ ನೆರವಾಗುತ್ತಿರುವುದು ಇನ್ನೊಂದು ದುರಂತವಾಗಿದೆ. ರಾಮಕೃಷ್ಣ ಹೆಗಡೆಯವರನ್ನು ವ್ಯಕ್ತಿಗತ ನೆಲೆಯಲ್ಲಿ ಬೆಂಬಲಿಸಿರುವ ಕನ್ನಡಿಗರು ರಾಜ್ಯದ ಹಿತದೃಷ್ಟಿಯಿಂದ ಬಿ.ಜೆ.ಪಿ. ಯೊಂದಿಗಿನ ಅವರ ಸಖ್ಯತೆಯ ಬಗ್ಗೆ ಮರುಪರಿಶೀಲನೆ ಮಾಡಬೇಕು.

ಬಿಜೆಪಿಯ ನಿಜ ಸ್ವರೂಪವನ್ನು ರಾಜ್ಯದ ಜನತೆಗೆ ಮನವರಿಕೆ ಮಾಡಲು ಅದರ ಸೈದ್ಧಾಂತಿಕ ಘೋಷಣೆಗಳ ಪೊಳ್ಳುತನವನ್ನು ಬಯಲಿಗೆಳೆಯಲು ಮೇ 1 ರಿಂದ 3 ತಿಂಗಳಕಾಲ ವ್ಯಾಪಕ ಪ್ರಚಾರಾಂದೋಲನ ನಡೆಸಲು ಪಕ್ಷದ ಕೇಂದ್ರ ಸಮಿತಿಯು ಕೈಗೊಂಡಿರುವ ತೀರ್ಮಾನಕ್ಕೆ ಅನುಗುಣವಾಗಿ ರಾಜ್ಯಾದ್ಯಂತ ಸುಮಾರು 300 ಸಭೆಗಳನ್ನು ನಡೆಸಲು ಆಯಾ ಜಿಲ್ಲಾ ಮಟ್ಟಗಳಲ್ಲಿ ಅವಶ್ಯಕ ಕರಪತ್ರಗಳನ್ನು ಮುದ್ರಿಸಿ ವಿತರಣೆಮಾಡಲು ರಾಜ್ಯ ಸಮಿತಿ ನಿರ್ಧರಿಸಿದೆ. ಹಿಂದುತ್ವ ಶಕ್ತಿಗಳ ಮುನ್ನಡೆಯನ್ನು ತಡೆಯುವ ಜೊತೆಯಲ್ಲಿ ಎಲ್ಲಾ ವಿಧದ ಮತಾಂಧತೆ, ಮೂಲಭೂತವಾದದ ವಿರುದ್ಧ ಪ್ರಜಾಪ್ರಭುತ್ವವಾದಿಗಳ ಹೋರಾಟ ಇನ್ನಷ್ಟು ಹರಿತಗೊಳಿಸಿ ನಿರಂತರವಾಗಿ ನಡೆಸಬೇಕಾಗಿದೆ.

- ನಿತ್ಯಾನಂದ ಸ್ವಾಮಿ

ದೇ ಮೇ 1 ರಂದು ಕರ್ನಾಟಕ ರಾಜ್ಯಾದ್ಯಂತ ಕಾರ್ಮಿಕರು ವಿವಿಧ ರೀತಿಗಳಲ್ಲಿ ಅಂತರ್ರಾಷ್ಟ್ರೀಯ ಕಾರ್ಮಿಕ ದಿನವಾದ ಮೇ ದಿನವನ್ನು ಜೃಂಭಣೆಯಿಂದ ಆಚರಿಸಿದರು. ಕುಂದಾಪುರದಲ್ಲಿ ಈ ಸಂದರ್ಭದಲ್ಲಿ ನಡೆದ ಒಂದು ಭವ್ಯ ಮೆರವಣಿಗೆಯ ಒಂದು ನೋಟ ಇಲ್ಲಿದೆ. ಳಿದ ವಿವರಗಳಿಗೆ ಪುಟ 3 ನೋಡಿ.





ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ. ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಆಗಸ್ಟ್ 14-15ರ ಮಧ್ಯರಾತ್ರಿ ಭಾರತ ಸಂಘ ಮತ್ತು ಪಾಕಿಸ್ತಾನ ಎಂದು ಎರಡು ದೇಶಗಳಾಗಿ ವಿಭಜನೆ ಹೊಂದಿ ಸ್ವಾತಂತ್ರ್ಯ ಪಡೆದವು. ಹೆಚ್ಚಿನ ಸಂಸ್ಥಾನಗಳು ಸ್ವತಂತ್ರ ಭಾರತವನ್ನಾಗಲೀ, ಪಾಕಿಸ್ತಾನವನ್ನಾಗಲೀ ಸೇರಲು ನಿರ್ಧರಿಸಿದವು. ಆದರೆ ಮೂರು ಸಂಸ್ಥಾನಗಳು ಸಮಸ್ಯೆಗಳನ್ನುಂಟು ಮಾಡಲು ಪ್ರಯತ್ನಿಸಿದವು.


ಇವುಗಳಲ್ಲಿ ಅತಿ ಸಣ್ಣ ಸಂಸ್ಥಾನವೆಂದರೆ ಈಗಿನ ಗುಜರಾತಿನಲ್ಲಿರುವ ಜುನಾಗಢ್. ಅಲ್ಲಿಯ ನವಾಬ ಪಾಕಿಸ್ತಾನದೊಡನೆ ಸೇರಲು ಪ್ರಯತ್ನಿಸುತ್ತಿದ್ದ. ಆದರೆ ಜನ ಅದಕ್ಕೆ ವಿರುದ್ಧವಾಗಿದ್ದರು. ಪಕ್ಕದ ಸೌರಾಷ್ಟ್ರದಲ್ಲಿ ಒಂದು ತಾತ್ಕಾಲಿಕ ಸರ್ಕಾರ ರಚಿಸಿ ಜುನಾಗಢ್ ಅನ್ನು ಉಳಿಸುವ ದೊಡ್ಡ ಆಂದೋಲನ ನಡೆಸಿದರು. ಸೆಪ್ಟಂಬರ್ 1947 ರಲ್ಲಿ ಭಾರತೀಯ ಸೇನೆಯ ಒಂದು ಸಣ್ಣ ತುಕಡಿ ಅಲ್ಲಿಗೆ ಹೋಯಿತು. ನವಾಬ ಪಾಕಿಸ್ತಾನಕ್ಕೆ ಓಡಿಹೋದ. ಅಕ್ಟೋಬರ್ 1947 ರಲ್ಲಿ ಜುನಾಗಢ್ ಭಾರತ ಸಂಘದ ಭಾಗವಾಯಿತು.

ಕಾಶ್ಮೀರದ ಮಹಾರಾಜ ಹರಿಸಿಂಗ್ ಭಾರತ ಅಥವಾ ಪಾಕಿಸ್ತಾನವನ್ನು ಸೇರಲು ಹಿಂದೇಟು ಹಾಕುತ್ತಿದ್ದ. ಆತನ ಬೆನ್ನಹಿಂದಿದ್ದ ಕೆಲವು ಶಕ್ತಿಗಳು ಕಾಶ್ಮೀರ ಈ ಎರಡು ದೇಶಗಳಲ್ಲಿ ಯಾವುದನ್ನೂ ಸೇರದೆ ಸ್ವತಂತ್ರ ಸಂಸ್ಥಾನವಾಗಿ ಮುಂದುವರೆಯ ಬಯಸುತ್ತಿದ್ದವು. ಕಾಶ್ಮೀರದಲ್ಲಿ ಜವಾಬ್ದಾರಿ ಆಡಳಿತಕ್ಕಾಗಿ ಹೋರಾಡುತ್ತಿದ್ದ ನ್ಯಾಶನಲ್ ಕಾನ್ಫರೆನ್ಸ್‌ನ ಮುಖಂಡ ಶೇಖ್ ಅಬ್ದುಲ್ಲಾರನ್ನು ಮಹಾರಾಜ ಜೈಲಿಗಟ್ಟಿದ್ದ.

ಅಕ್ಟೋಬರ್ 1947ರಲ್ಲಿ ಪಾಕಿಸ್ತಾನದಲ್ಲಿ ತರಬೇತಿ ಪಡೆದ ಸಶಸ್ತ್ರ ಪಠಾಣರು ಬ್ರಿಟಿಶ್ ಅಧಿಕಾರಿಗಳ ನೇತೃತ್ವದಲ್ಲಿ ಕಾಶ್ಮೀರವನ್ನು ಹೊಕ್ಕು ಲೂಟಿ ಮಾಡಿ, ಕೊಲೆ-ಸುಲಿಗೆ ಆರಂಭಿಸಿದರು. ನ್ಯಾಶನಲ್ ಕಾನ್ಫರೆನ್ಸ್‌ನ ಧೀರ ಮುಖಂಡ ಮಹಮ್ಮದ್ ಶೇರ್‌ವಾನಿಯನ್ನು ನಿರ್ದಯವಾಗಿ ಹತ್ಯೆ ಮಾಡಲಾಯಿತು. ಈ ಆಕ್ರಮಣಕೋರರು ಶ್ರೀನಗರವನ್ನು ವಶಪಡಿಸಿಕೊಳ್ಳಲು ಝೇಲಂ ನದಿಯವರೆಗೂ ಬಂದರು.



ಆಗ ಮಹಾರಾಜ ಶೇಖ್ ಅಬ್ದುಲ್ಲಾರವರನ್ನು ಬಿಡುಗಡೆ ಮಾಡಲೇಬೇಕಾಯಿತು. ಅದೇ ರೀತಿ ಭಾರತವನ್ನು ಸೇರಲೇಬೇಕಾಗಿ ಬಂತು. ಹೀಗೆ ಕಾಶ್ಮೀರ ಭಾರತಕ್ಕೆ ಸೇರಿದಾಗ ಭಾರತೀಯ ಸೇನಾ ತುಕಡಿಗಳು ಅಕ್ಟೋಬರ್ 27, 1947ರಿಂದ ಬರಲಾರಂಭಿಸಿದವು. ಶೇಖ್ ಅಬ್ದುಲ್ಲಾ ನೇತೃತ್ವದಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಭಾರತೀಯ ಸೈನಿಕರೊಂದಿಗೆ ಭುಜಕ್ಕೆ ಭುಜ ಕೊಟ್ಟು ಅತಿಕ್ರಮಣಕೋರರನ್ನು ಹಿಂದಕ್ಕೆ ತಳ್ಳುತ್ತಾ ಹೋದರು. ಒಂದು ಸಣ್ಣ ಪ್ರದೇಶ ಬಿಟ್ಟು ಉಳಿದೆಲ್ಲಾ ನೆಲದಿಂದ ಅತಿಕ್ರಮಣಕೋರರನ್ನು ತೆರವು ಮಾಡಲಾಯಿತು. ಮಾರ್ಚ್ 1948ರಲ್ಲಿ ಶೇಖ್ ಅಬ್ದುಲ್ಲಾ ಕಾಶ್ಮೀರದಲ್ಲಿ ಒಂದು ಜನಪ್ರಿಯ ಮಂತ್ರಿಮಂಡಲ ರಚಿಸಿದರು. ಆದರೆ ಪಾಕಿಸ್ತಾನ, ಬ್ರಿಟನ್ ಹಾಗೂ ಅಮೇರಿಕಾದ ಪಿತೂರಿಗಳು ಮುಂದುವರಿದವು, ಈಗಲೂ ಮುಂದುವರೆಯುತ್ತಿವೆ.




ಭಾರತಕ್ಕೆ ಸೇರ್ಪಡೆಯನ್ನು ಹರ್ಷೋಲ್ಲಾಸದಿಂದ ಆಚರಿಸುತ್ತಿರುವ ಕಾಶ್ಮೀರಿಗಳು.

ಹೈದಾರಾಬಾದಿನಲ್ಲೂ ಇಂತಹದೇ ಒಂದು ಪಿತೂರಿ ಇತ್ತು. ಅಕ್ಟೋಬರ್ 1947ರಲ್ಲಿ ನವಾಬ ಒಂದು ವರ್ಷದೊಳಗೆ ಚುನಾವಣೆ ನಡೆಸಿ ಜನಪ್ರಿಯ ಸರಕಾರ ರಚಿಸುವುದಾಗಿ ಆಶ್ವಾಸನೆ ನೀಡಿದ. ಹೈದರಾಬಾದ್ ಸ್ವತಂತ್ರ ದೇಶವೆಂದು ಸಾರಲು, ಪಾಕಿಸ್ತಾನ ಸೇರಲು ಪ್ರಯತ್ನ ನಡೆಸಿದ. ಧರ್ಮಾಂಧ ರಜಾಕಾರರನ್ನು ಪಾಕಿಸ್ತಾನ ಮತ್ತಿತರ ಕಡೆಗಳಿಂದ ಶಸ್ತ್ರಾಸ್ತ್ರಗಳನ್ನು ಗುಪ್ತವಾಗಿ ತರಿಸಿ ಸಜ್ಜುಗೊಳಿಸಿ ಜನಗಳ ಮೇಲೆ ಹರಿಯ ಬಿಡಲಾಯಿತು. ಆದರೆ ಅವರ ಅತ್ಯಾಚಾರಗಳಿಗೆ ಜನರೂ ಸರಿಯಾದ ಉತ್ತರ ಕೊಟ್ಟರು. ಈ ಹಿಂದೆ ಹೇಳಿದ ತೆಲಂಗಾಣಾ ವೀರ ಹೋರಾಟದಿಂದಾಗಿ ನಿಜಾಮನ ಆಟ ಸಾಗಲಿಲ್ಲ. ಸೆಪ್ಟೆಂಬರ್ 13, 1948ರಂದು ಭಾರತೀಯ ಸೇನೆ ಹೈದರಾಬಾದ್ ಪ್ರವೇಶಿಸಿತು. ನಾಲ್ಕೇ ದಿನಗಳಲ್ಲಿ ನಿಜಾಮಶಾಹಿ ಅಂತ್ಯಗೊಂಡಿತು.

ಈ ಸಂಸ್ಥಾನಗಳಲ್ಲದೆ ಫ್ರೆಂಚ್ ಹಾಗೂ ಪೋರ್ಚುಗೀಸ್ ಸಾಮ್ರಾಜ್ಯಶಾಹಿಗಳ ಅಡಿಯಿದ್ದ ಕೆಲವು ಭಾರತೀಯ ಪ್ರದೇಶಗಳು ಬಿಡುಗಡೆಯಾಗಬೇಕಿತ್ತು. ಫ್ರೆಂಚ್ ಅಧೀನದಲ್ಲಿ ಐದು ಚಿಕ್ಕ ಪ್ರದೇಶಗಳಿದ್ದವು. ಚಂದನ್‌ನಗರ್, ಪಾಂಡಿಚೇರಿ, ಕಾರೇಕಲ್, ಯಾನಂ ಮತ್ತು ಮಾಹೆ. ಇವುಗಳಲ್ಲಿ ಚಂದನ್‌ನಗರ್ ಮತ್ತು ಪಾಂಡಿಚೇರಿ ಭಾರತೀಯ ಸ್ವತಂತ್ರ ಹೋರಾಟದಲ್ಲಿ ವಿಶಿಷ್ಟ ಸ್ಥಾನ ಪಡೆದ ಸ್ಥಳಗಳು. ಏಕೆಂದರೆ ಬ್ರಿಟಿಶರ ವಿರುದ್ಧ ಹೋರಾಟದಲ್ಲಿ ಹಲವು ಕ್ರಾಂತಿಕಾರಿಗಳಿಗೆ ಆಶ್ರಯ ಕೊಟ್ಟ ಸ್ಥಳಗಳಿವು. ಗಣೇಶ್ ಘೋಷ್, ಅರವಿಂದ ಘೋಷ್, ಸುಬ್ರಮಣ್ಯ ಭಾರತಿ ಇಂತಹ ಕೆಲವು ಮುಖ್ಯ ಹೆಸರುಗಳು.

ಬ್ರಿಟಿಶರ ವಿರುದ್ಧ ಭಾರತೀಯ ಸ್ವಾತಂತ್ರ್ಯ ಹೋರಾಟದೊಂದಿಗೇ ಫ್ರೆಂಚ್ ವಸಾಹತುಗಳಲ್ಲಿಯೂ ಅದರ ಆಳ್ವಿಕೆಯ ವಿರುದ್ಧ ಹೋರಾಟಗಳು ನಡೆಯುತ್ತಿದ್ದವು. ಅಕ್ಟೋಬರ್ 1948ರಲ್ಲಿ ಮಾಹೆಯ ಜನ ಬಂಡೆದ್ದರು. ಫ್ರೆಂಚ್ ಸೇನೆ ಶರಣಾಯಿತು. 1949ರಲ್ಲಿ ಚಂದನ್‌ನಗರ್‌ನ ಜನ ಮತಸಂಗ್ರಹಣೆಯ ಮೂಲಕ ಅದು ಭಾರತದ ಭಾಗವಾಗಿರಲು ನಿರ್ಧರಿಸಿದರು. ಭಾರತ ಸರಕಾರ ಅಲ್ಲಿಯ ಆಡಳಿತ ವಹಿಸಿಕೊಂಡಿತು.

ಪಾಂಡಿಚೇರಿಯಲ್ಲಿ ಫ್ರೆಂಚ್ ವಸಾಹತುಶಾಹಿಗಳು ಭಯದ ವಾತಾವರಣ ನಿರ್ಮಿಸಲು ಪ್ರಯತ್ನಿಸಿದರು. ಕಮ್ಯುನಿಸ್ಟ್ ಮುಖಂಡ ವಿ. ಸುಬ್ಬಯ್ಯ ಫ್ರಾನ್ಸಿನ ಪ್ರತಿನಿಧಿಸಭೆಗೆ ಪಾಂಡಿಚೇರಿಯಿಂದ ಚುನಾಯಿತರಾದರು. ಪ್ರತಿನಿಧಿಸಭೆಯಲ್ಲಿ ಅವರು ಭಾರತದೊಂದಿಗೆ ಸೇರುವ ಬೇಡಿಕೆಯನ್ನೆತ್ತಿದರು. ಕೊನೆಗೆ ಫ್ರೆಂಚ್ ಭಾರತದ 178 ಪ್ರತಿನಿಧಿಗಳಲ್ಲಿ 170 ಮಂದಿ ಭಾರತದೊಂದಿಗೆ ಸೇರಿಕೊಳ್ಳಲು ಮತ ನೀಡಿದರು.



ಭಾರತದಲ್ಲಿ ಫ್ರೆಂಚ್ ವಸಾಹತುಗಳು: ವಿಲೀನದ ಆಚರಣೆ-ಪಾಂಡಿಚೇರಿಯಲ್ಲಿ.

ಇದರ ನಂತರ ಭಾರತ ಮತ್ತು ಫ್ರೆಂಚ್ ಸರಕಾರಗಳ ನಡುವೆ ಒಂದು ಒಪ್ಪಂದವಾಯಿತು. ಇದರ ಪ್ರಕಾರ ನವೆಂಬರ್ 1, 1954 ರಿಂದ ಭಾರತದಲ್ಲಿ ಫ್ರೆಂಚ್ ಆಳ್ವಿಕೆಯು ಕೊನೆಗೊಂಡಿತು.

ಈಗ ಪೋರ್ಚುಗೀಸ್ ವಸಾಹತುಶಾಹಿ ಮಾತ್ರ ಉಳಿದುಕೊಂಡಿತು. (ಮುಂದುವರಿಯುವುದು)

ಹಣವಂತರಿಗಾಗಿ ಹಣಕಾಸು ನೀತಿ

ಆರ್ಥಿಕ ಟಿಪ್ಪಣಿ

ಜಿ.ಎಸ್.ಮಣಿ

ಹಣಕಾಸು ನೀತಿ ಹಣವಂತರಿಗಾಗಿ ಅಲ್ಲದೆ ಇನ್ನಾರಿಗೆ ಎಂದು ಕೇಳಬಹುದು. ಹೌದು. ಹಣಕಾಸು ನೀತಿ ಹಣವಂತರಿಗಾಗಿಯೇ ಎಂಬುದು ನಿಜ. ಆದರೆ ಹಣವಿಲ್ಲದವರಿಗೆ ಹಣ ಹರಿದು ಬರುವಂತೆಯೂ ಈ ಹಣಕಾಸು ನೀತಿ ಮಾಡಬಲ್ಲದು. ಆದರೆ ಉದಾರೀಕರಣದ ಈ ದಿನಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ನೀತಿ ಹೆಸರಿಗೆ ತಕ್ಕಂತೆ ಹಣವಂತರಿಗಾಗಿಯೇ ಇದೆ.

1998-99ನೇ ಸಾಲಿನ ಮೊದಲರ್ಧದ ಹಣಕಾಸು ನೀತಿಯನ್ನು ಏಪ್ರಿಲ್ ಮೊದಲ ಭಾಗದಲ್ಲೇ ಘೋಷಿಸಬೇಕಿತ್ತು. ಆದರೆ ಹೊಸ ಬಿ.ಜೆ.ಪಿ. ನೇತೃತ್ವದ ಸರ್ಕಾರ ಅಧಿಕಾರ ವಹಿಸಿಕೊಂಡು ಇನ್ನೂ ಕೆಲವೇ ದಿನಗಳಾಗಿದ್ದರಿಂದ ಅದನ್ನು ಮುಂದೂಡಿ ಮೊನ್ನೆ ಅಂದರೆ, ಏಪ್ರಿಲ್ 29ರಂದು ಭಾರತೀಯ ರಿಸರ್ವ್ ಬ್ಯಾಂಕ್ ಘೋಷಿಸಿತು.

ಹಾಗೆ ಹಣಕಾಸು ನೀತಿ ಬ್ಯಾಂಕುಗಳು ಯಾವ ದಿಸೆಯಲ್ಲಿ ಕೆಲಸ ಮಾಡಬೇಕು ಎಂಬುದನ್ನು ನಿರ್ಧರಿಸುತ್ತದೆ. ಯಾವ ವಲಯಗಳಿಗೆ ಸಾಲ ನೀಡಬೇಕು, ಬಡ್ಡಿ ದರಗಳು ಎಷ್ಟಿರಬೇಕು, ಇಡೀ ವ್ಯವಸ್ಥೆಯಲ್ಲಿ ಹಣಕಾಸಿನ ಸಮತೋಲನ ಹೇಗೆ ಮತ್ತು ಯಾವ ಮುಖವಾಗಿ ಹರಿಯಬೇಕು ಎಂಬುದನ್ನು ಅದು ನಿರ್ಧರಿಸುತ್ತದೆ. ಆಡಳಿತದಲ್ಲಿರುವ ಸರ್ಕಾರಗಳ ಧೋರಣೆಯನ್ನು ಅದು ಪ್ರತಿಫಲಿಸುತ್ತದೆ. ಬಂಡವಾಳಿಗರು ಈ ದಿಸೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿಗೆ ಅಹವಾಲನ್ನು ಮಾಡುವುದು ಮತ್ತು ಈ ನೀತಿಗಾಗಿ ಕಾಯುವುದು ಇದೇ ಕಾರಣಕ್ಕಾಗಿ. ದೇಶದ ಬಡಜನರು ಈ ನೀತಿಗಾಗಿ ಕಾಯಬಹುದು ಅದು ಬಡವರತ್ತ ಗಮನ ಹರಿಸುವುದಾದರೆ. ರೈತರಿಗೆ, ಸಣ್ಣ ಕೈಗಾರಿಕೆಗಳಿಗೆ, ಗುಡಿಕೈಗಾರಿಕೆ ಕುಶಲ ಕರ್ಮಿಗಳಿಗೆ ಇವರಿಗೆಲ್ಲ ಹೇಗೆ, ಎಷ್ಟು ಮತ್ತು ಎಷ್ಟು 'ಬಡ್ಡಿ'ದರದಲ್ಲಿ ಸಾಲ ನೀಡಬೇಕೆಂಬ ಬಗ್ಗೆ ಈ ನೀತಿ ಹೇಳುವುದಾಗಿದ್ದರೆ, ಹೆಚ್ಚೆಚ್ಚು ಉದ್ಯೋಗ ಸೃಷ್ಟಿಸುವತ್ತ ಈ ನೀತಿ ಕಾರ್ಯತತ್ಪರವಾಗುವುದಿದ್ದರೆ ಬಡಜನರೂ ಇದಕ್ಕಾಗಿ ಕಾಯುತ್ತಿದ್ದರು. ಆದರೆ ಉದಾರೀಕರಣದ ನೀತಿಗಳ ಈ ದಿನಗಳಲ್ಲಿ ಹಣಕಾಸು ನೀತಿ ಹಣವಂತರಿಗಾಗಿ ಮಾತ್ರ.

ಈ ಹಣವಂತರಿಗಾಗಿನ ನೀತಿ ಏನು ಹೇಳುತ್ತದೆ? 1998-99ರ ಮೊದಲರ್ಧದ ಹಣಕಾಸು ನೀತಿಯ ಮುಖ್ಯಾಂಶಗಳು ಕೆಳಗಿನಂತಿವೆ.

- ಬ್ಯಾಂಕ್ ಬಡ್ಡಿದರವನ್ನು ಶೇ. 9ಕ್ಕೆ ಇಳಿಸಲಾಗಿದೆ.
- ನಗದು ಶಿಲ್ಕು ಅನುಪಾತವನ್ನು ಈಗ ಇರುವ ಮಟ್ಟದಲ್ಲೇ ಬಿಡಲಾಗಿದೆ.
- ಬ್ಯಾಂಕುಗಳು ತಮ್ಮ ಗಿರಾಕಿಗಳು ವ್ಯವಹಾರದಲ್ಲಿ ತಕ್ಕ ರಕ್ಷಣೆ ಹೊಂದದೇ ಇದ್ದ ಪಕ್ಷದಲ್ಲಿ ಎಚ್ಚರದಿಂದ ಇರುವಂತೆ ಸೂಚನೆ.
- ವಿದೇಶೀ ವಿನಿಮಯ ಕಾರ್ಯದ ಮೇಲಿನ ನಿರ್ಬಂಧಗಳು ಮುಂದುವರಿಯಲಿವೆ.
- ಬ್ಯಾಂಕುಗಳು ಸಾಲ ನೀಡುವ ಬಗ್ಗೆ ಹೊಸ ಎಚ್ಚರಿಕೆಯ ಕ್ರಮಗಳು.
- ಬ್ಯಾಂಕುಗಳು ಠೇವಣಿಗಳ ಮೇಲೆ ಬಡ್ಡಿ ನೀಡುವಲ್ಲಿ ಸ್ವಾತಂತ್ರ್ಯ.
- ಶೇರುಗಳ ಮೇಲಿನ ಸಾಲದ ಮಿತಿಯನ್ನು ದ್ವಿಗುಣಗೊಳಿಸಲಾಗಿದೆ.
- ಅವಧಿ ಠೇವಣಿಗಳ ಕನಿಷ್ಠ ಅವಧಿಯನ್ನು 15 ದಿನಗಳಿಗೆ ಇಳಿಸಲಾಗಿದೆ.

ಇತ್ಯಾದಿ.

ಈ ಹಣಕಾಸು ನೀತಿಯ ಬಗ್ಗೆ ಬಂಡವಾಳಿಗರು ಅಂತಹ ಖುಶಿಯನ್ನೇನು ತೋರಿಸಿಲ್ಲ. ಬದಲಿಗೆ ಆರ್ಥಿಕವನ್ನು ಬೆಳವಣಿಗೆಯ ಪಥದಲ್ಲಿಡಲು ಈ ನೀತಿ ಸಾಕಷ್ಟು ಕ್ರಮಗಳನ್ನು ಕೈಗೊಂಡಿಲ್ಲ ಎಂದಿದ್ದಾರೆ ಅವರು.

ಬ್ಯಾಂಕ್ ದರ (ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕುಗಳಿಗೆ ನೀಡುವ ಸಾಲದ ಮೇಲಿನ ಮೂಲ ಬಡ್ಡಿದರ) ಕಡಿಮೆ ಮಾಡಿರುವುದರಿಂದ ಆಗಲೇ ಹಲವು ಬ್ಯಾಂಕುಗಳಲ್ಲಿ ಸಾಲದ ಮೇಲಿನ ಬಡ್ಡಿ ದರವನ್ನು ಕೆಳಗಿಳಿಸಿವೆ.

ಬಂಡವಾಳಿಗರು ಬಡ್ಡಿದರದಲ್ಲಿ ಅಪಾರ ಕಡಿತ, ಸಾಲದ ವಿಷಯದಲ್ಲಿ ಅಪಾರ ಉದಾರೀಕರಣವನ್ನು ನಿರೀಕ್ಷಿಸಿದ್ದರೆಂದು ಕಾಣುತ್ತದೆ. ಆದರೆ ಒಟ್ಟಾರೆ ಆರ್ಥಿಕವನ್ನು ಗಣನೆಗೆ ತೆಗೆದುಕೊಂಡು ಘೋಷಿಸಿದ ಈ ನೀತಿ ಅವರಿಗೆ ಖುಷಿ ತರದೆ ಹೋಗಿದೆ. ಇರಲಿ.

ಈ ಮೇಲಿನ ನೀತಿಗಳನ್ನು ನೋಡಿದರೆ ಇದರಲ್ಲಿ ಹಣವಿಲ್ಲದವರಿಗೆ ಹಣ ಹರಿದು ಬರುವ ಅಂಶಗಳೇನಾದರು ಕಾಣುತ್ತದೆಯೇ! ಖಂಡಿತವಾಗಿಯೂ ಇಲ್ಲ. ಆದ್ದರಿಂದಲೇ ಇದು ಹಣವಂತರಿಗಾಗಿನ ಹಣಕಾಸು ನೀತಿ.

ಸಣ್ಣ ಕೈಗಾರಿಕೆಗಳ ಫಜೀತಿ

ಹಿಂದಿನ ಸಂಯುಕ್ತರಂಗ ಸರ್ಕಾರ ಸಣ್ಣ ಕೈಗಾರಿಕೆಗಳ ವರ್ಗೀಕರಣದ ಬಗೆಗಿನ ನೀತಿಗಳನ್ನು ಬದಲಾಯಿಸಿತ್ತು. ಈ ವರ್ಗೀಕರಣಕ್ಕೆ ಇರುವ ಮಾನದಂಡ ಯಂತ್ರೋಪಕರಣ ಸ್ಥಾವರಗಳಲ್ಲಿನ ಹೂಡಿಕೆ ಪ್ರಮಾಣ ಈ ಹಿಂದೆ ಅಂದರೆ 1990ರಿಂದ ಈ ಹೂಡಿಕೆಯ ಪ್ರಮಾಣ ಸಣ್ಣ ಕೈಗಾರಿಕೆಗೆ 60 ಲಕ್ಷ ರೂಪಾಯಿಗಳಾಗಿದ್ದರೆ, ಅವಲಂಬಿತ ಕೈಗಾರಿಕೆಗೆ 75 ಲಕ್ಷ ರೂಪಾಯಿಗಳಾಗಿತ್ತು. ಸಂಯುಕ್ತರಂಗ ಸರ್ಕಾರ ಈ ಎರಡೂ ಗುಂಪಿನ ಸಣ್ಣ ಕೈಗಾರಿಕೆಗಳಿಗೆ ಈ ಹೂಡಿಕೆ ಮಿತಿಯನ್ನು 300 ಲಕ್ಷಕ್ಕೇರಿಸಿತ್ತು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ಹಿಂದಿನ ಮಧ್ಯಮ ಗಾತ್ರದ ಕೈಗಾರಿಕೆಗಳೆಲ್ಲ ಈಗ ಸಣ್ಣ ಕೈಗಾರಿಕೆಗಳೆಂದು ಪರಿಗಣಿತವಾಗುವ ಸ್ಥಿತಿ ಉಂಟಾಗಿತ್ತು.

ಇದು ಸಣ್ಣ ಕೈಗಾರಿಕೆಗಳಿಗೆ ಅನ್ಯಾಯ ಮಾಡುತ್ತದೆಂದು ಸಣ್ಣ ಕೈಗಾರಿಕೆಗಳು ಪ್ರತಿಭಟನೆ ಸೂಚಿಸಿದ್ದವು. ಈ ಹೂಡಿಕೆ ಮಿತಿಯನ್ನು ಕೆಳಗಿಳಿಸಬೇಕೆಂದು ಅವು ಕೇಳಿಕೊಂಡಿದ್ದವು. ಈ ಒತ್ತಾಯಕ್ಕೆ ಮಣಿದೊ ಎಂಬಂತೆ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಈ ಹೂಡಿಕೆ ಮಿತಿಯನ್ನು 100 ಲಕ್ಷ ರೂಪಾಯಿಗಳಿಗೆ(ಅಂದರೆ ಒಂದು ಕೋಟಿ ರೂಪಾಯಿಗಳು) ಇಳಿಸುವ ವಿಚಾರ ಮಾಡಲಾಗುವುದು ಎಂದು ಘೋಷಿಸಿದ್ದಾರೆ.

ಇದು ಬರೀ ಭರವಸೆಯೋ ಅಥವಾ ಪ್ರಾಮಾಣಿಕ ಕಾಳಜಿಯಿಂದ ಬಂದದ್ದೋ ಎಂಬುದನ್ನು ಕಾದು ನೋಡಬೇಕು.

ಇದೇ ಸಮಯದಲ್ಲಿ ಕೇಂದ್ರ ಸರ್ಕಾರದ ಉದ್ದಿಮೆಗಳ ಮಂತ್ರಿಗಳಾದ ಸಿಖಂದರ್ ಭಖ್ತ್‌ರವರು ಸಣ್ಣ ಕೈಗಾರಿಕೆಗಳಿಗೆ ಸಾಲ ಹರಿದು ಬರುತ್ತಿಲ್ಲ, ಭಾರತೀಯ ರಸರ್ವ್ ಬ್ಯಾಂಕ್ ಇತ್ತ ಕಡೆ ಗಮನ ನೀಡಬೇಕು ಎಂದೆಲ್ಲ ಹೇಳಿದ್ದಾರೆ. ಇಲ್ಲೂ ನಿಜವಾದ ಕಾಳಜಿಯಿರುವಂತಿಲ್ಲ. ಯಾಕೆಂದರೆ ಅಂತಹ ಕಾಳಜಿ ಇದ್ದರೆ ಭಾರತೀಯ ರಿಸರ್ವ್ ಬ್ಯಾಂಕಿನ ಗೌವರ್ನರ್ ಜೊತೆಗೆ ಮಾತನಾಡಿ ಹಣಕಾಸು ನೀತಿಯಲ್ಲಿ ಈ ಅಂಶವನ್ನು ಸೇರಿಸಬಹುದಾಗಿತ್ತು.

ಇದಲ್ಲದೆ ಬಿ.ಜೆ.ಪಿ. ಸರ್ಕಾರ ಸಣ್ಣ ಕೈಗಾರಿಕೆಗಳ ಉತ್ಪಾದನೆಗಾಗಿ ಮೀಸಲಾಗಿರುವ ವಸ್ತುಗಳ ಬಗ್ಗೆಯೂ ಮಾತನಾಡಿದೆ. ಈ ಹಿಂದೆ ಅಭಿದ್ ಹುಸೇನರ ನೇತೃತ್ವದ ಸಮಿತಿ ಸಣ್ಣ ಕೈಗಾರಿಕೆಗಳ ಉತ್ಪಾದನೆಗಾಗಿ ಇರುವ ಮೀಸಲಾತಿಯನ್ನು ತೆಗೆದು ಹಾಕ ಬೇಕೆಂದು ಶಿಫಾರಸ್ಸು ಮಾಡಿತ್ತು. ಹಿಂದಿನ ಸಂಯುಕ್ತ ರಂಗ ಸರ್ಕಾರ ಆಗಲೇ 14 ಸರಕುಗಳನ್ನು ಮೀಸಲಾತಿ ಪಟ್ಟಿಯಿಂದ ಹೊರ ತಂದಿತ್ತು. ಈಗ ಬಿ.ಜೆ.ಪಿ. ಸರ್ಕಾರ ಉಳಿದಿರುವ ಮೀಸಲಾತಿಯನ್ನು ಮುಂದುವರೆಸುವ ಮಾತನ್ನೂ ಆಡಿಲ್ಲ. ಬದಲಿಗೆ ಹಂತ ಹಂತವಾಗಿ ಮೀಸಲಾತಿ ಯನ್ನು ತೆಗೆದು ಹಾಕುವ ಮಾತನಾಡಿದೆ.

'ಸ್ವದೇಶೀ'ಯ ಮೂಲಕ ಸ್ವಾವಲಂಬನೆ ಸಾಧಿಸುವ ನಿಜವಾದ ಕಾಳಜಿ ಸರ್ಕಾರಕ್ಕಿದ್ದರೆ ಸಣ್ಣ ಮತ್ತು ಗುಡಿ ಕೈಗಾರಿಕೆಗಳಿಗೆ ಸೂಕ್ತ ರಕ್ಷಣೆ ನೀಡುತ್ತದೆ. ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸುವ ವಿಚಾರವನ್ನು ಅದು ಮಾಡಬೇಕಾಗಿತ್ತು.

ಆದರೆ ಸರ್ಕಾರಿ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರುತ್ತಾ ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಕತ್ತು ಹಿಸುಕುವ ಉದಾರೀಕರಣದ ಕ್ರಮಗಳನ್ನು ಬಿ.ಜೆ.ಪಿ. ಸರ್ಕಾರ ಮುಂದುವರೆಸುತ್ತಿದೆ. 'ಪುರಾಣ ಹೇಳೋಕ್ಕೆ, ಬದನೇಕಾಯಿ ತಿನ್ನೋಕ್ಕೆ' ಎಂಬ ಗಾದೆಯಂತಿದೆಯಲ್ಲವೆ ಬಿ.ಜೆ.ಪಿ.ಯ ಸ್ವದೇಶಿ?

ವಿದೇಶೀ ಹೂಡಿಕೆ: ಸ್ವದೇಶಿಗಳ ಹೊಸ ವೇದಿಕೆ

ವಿದೇಶಿ ಹೂಡಿಕೆಗಳಿಗೆ ಅನುಮತಿ ನೀಡಲು ಸ್ವದೇಶಿ ಮಾತನಾಡುವ ಬಿ.ಜೆ.ಪಿ. ಸರ್ಕಾರ ಹೊಸದೊಂದು ವೇದಿಕೆಯನ್ನು ಪ್ರಾರಂಭಿಸಿದೆ. ಈಗಾಗಲೇ ಈ ಕೈಗಾರಿಕೆ ಖಾತೆ ಸಚಿವರ ನೇತೃತ್ವದಲ್ಲಿ 'ವಿದೇಶೀ ಹೂಡಿಕೆ ಅಭಿವೃದ್ಧಿ ಮಂಡಳಿ' ಅಸ್ತಿತ್ವದಲ್ಲಿದೆ. ಇದಲ್ಲದೆ ಇನ್ನೊಂದು ವೇದಿಕೆಯನ್ನು ಪ್ರಧಾನ ಮಂತ್ರಿಗಳು ತೆರೆದಿದ್ದಾರೆ.

ಈ ಹೊಸ ವೇದಿಕೆ 'ವಿದೇಶಿ ಹೂಡಿಕೆಗಾಗಿನ ಮಂತ್ರಿ ಮಂಡಳ ಸಮಿತಿ'. ಈ ಸಮಿತಿಯ ನೇತೃತ್ವವನ್ನು ಸ್ವತಃ ಪ್ರಧಾನ ಮಂತ್ರಿಗಳೇ ವಹಿಸುತ್ತಾರೆ. ಅಂದರೆ ವಿದೇಶಿ ಹೂಡಿಕೆಗೆ ಎಷ್ಟು ಪ್ರಾಮುಖ್ಯತೆ ನೀಡಲಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ.

ಈ ಸಮಿತಿ ವಿದೇಶೀ ಹೂಡಿಕೆಯ ಮೊತ್ತ 600 ಕೋಟಿ ರೂಪಾಯಿಗಳಿಗೂ ಹೆಚ್ಚಾಗಿದ್ದರೆ ಅಂತಹ ಪ್ರಸ್ತಾಪಗಳನ್ನು ಪರಿಶೀಲಿಸಿ ಅನುಮೋದನೆ ನೀಡುತ್ತದೆ.

ಅರವತ್ತು ದಿನಗಳಲ್ಲಿ ವಿದೇಶೀ ಹೂಡಿಕೆ ಪ್ರಸ್ತಾಪಗಳಿಗೆ ಅನುಮೋದನೆ ನೀಡುವ ಭರವಸೆಯನ್ನು ಪ್ರಧಾನ ಮಂತ್ರಿಗಳು ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್‌ನ ವಾರ್ಷಿಕ ಸಭೆಯಲ್ಲಿ ನೀಡಿದ್ದರು. ಈ ಭರವಸೆ ಈಡೇರಿಸುವ ಭಾಗವಾಗಿ ಈಗ ಸಮಿತಿಯ ರಚನೆ. ಎಂತಹ ಅರ್ಥಪೂರ್ಣ ಸ್ವದೇಶಿ!

ಬರಲಿದೆ ವಿದ್ಯುತ್ ದರದ ಶಾಕ್

ಉದಾರೀಕರಣ ತನ್ನ ಬಲೆಯೊಳಗೆ ಹೇಗೆ ಸೆರೆಮನೆಗಳನ್ನೇ ಸೃಷ್ಟಿಸುತ್ತದೆ ಎಂಬುದಕ್ಕೆ ಇದು ಒಳ್ಳೆಯ ಉದಾಹರಣೆ.

ರಾಷ್ಟ್ರಪತಿಗಳು ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ವಿದ್ಯುತ್ ದರ ನಿರ್ಧರಿಸುವ ಮಂಡಳಿಗಳ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ. ಇದರ ಅರ್ಥವೇನೆಂದರೆ ಈ ಮಂಡಳಿಗಳ ರಚನೆ ಅನಿವಾರ್ಯ. ಮತ್ತು ವಿದ್ಯುತ್ ದರವನ್ನು ಈ ಮಂಡಳಿಗಳೇ ನಿರ್ಧರಿಸುತ್ತವೆ. ಸುಗ್ರೀವಾಜ್ಞೆಯ ಮುಖ್ಯ ಅಂಶಗಳೆಂದರೆ

- ಇನ್ನು ಮೂರು ತಿಂಗಳುಗಳಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ವಿದ್ಯುತ್ ದರ ನಿರ್ಧರಿಸುವ ಮಂಡಳಿಗಳ ರಚನೆ
- ಕೃಷಿಯನ್ನು ಹೊರತುಪಡಿಸಿ ಬೇರೆಲ್ಲ ವಲಯಗಳಿಗೆ ನೀಡುವ ಸಹಾಯ ಧನವನ್ನು ವಿದ್ಯುತ್ ಉತ್ಪಾದನಾ ಬೆಲೆಯ ಶೇ. 50ಕ್ಕೆ ಇಳಿಸುವುದು.
- ಕೃಷಿ ವಲಯಕ್ಕೆ ಮೂರು ವರ್ಷಗಳ ಅವಧಿ. ಈ ಅವಧಿಯಲ್ಲಿ ಸಹಾಯ ಧನವನ್ನು ಕಡಿತಗೊಳಿಸಬೇಕು.
- ವಿದ್ಯುತ್ ಶುಲ್ಕದ ಪೂರ್ಣ ಪ್ರಮಾಣದ ಮೊತ್ತಕ್ಕೆ ಭರವಸೆ ನೀಡದ ರಾಜ್ಯಗಳಿಗೆ ವಿದ್ಯುತ್ ಪೂರೈಕೆ ಇಲ್ಲ.

ಹೀಗೆ ವಿದ್ಯುತ್ ದರಗಳ ನಿರ್ಧಾರಕ್ಕೆ ಮಂಡಳಿಗಳು ಬಂದಿರುವುದರಿಂದ ವಿದ್ಯುತ್ತಿನ ದರಗಳು ಏರತೊಡಗಲಿವೆ. ಉದಾರೀಕರಣದಿಂದಾಗಿ ಬಂದಿರುವ ಏನ್ರಾನ್‌ನಂತಹ ವಿದ್ಯುತ್ ಯೋಜನೆಗಳಿಗೆ ಸರ್ಕಾರ ಪ್ರತಿ ಗ್ಯಾರಂಟಿ ನೀಡಿದೆ. ಅಲ್ಲದೆ ವಿಶ್ವ ಬ್ಯಾಂಕ್, ಐ.ಎಂ.ಎಫ್.ಗಳೂ ವಿದ್ಯುತ್ ದರಗಳನ್ನು ಏರಿಸಬೇಕು ಮತ್ತು ಸಹಾಯಧನಗಳನ್ನು ನೀಡುವುದನ್ನು ನಿಲ್ಲಿಸಬೇಕೆಂದು ಒತ್ತಡ ಹೇರುತ್ತಲೇ ಬಂದಿವೆ.

ಈಗ ಬಿ.ಜೆ.ಪಿ. ಸರ್ಕಾರ ಇಂತಹ ಒತ್ತಡಗಳಿಗೆ ಮಣಿದು ಜನಸಾಮಾನ್ಯರ ಹೆಗಲಿಗೆ ಹೆಚ್ಚಿನ ಹೊರೆಗಳನ್ನು ವರ್ಗಾಯಿಸಹೊರಟಿದೆ. ಉತ್ತಮ ಆಡಳಿತ ನೀಡುವ ಬಿ.ಜೆ.ಪಿ. ಸರ್ಕಾರದ ಪರಿ ಇದಿರಬಹುದು ಅಲ್ಲವೆ?

ಕರ್ನಾಟಕದಲ್ಲಿ ಕಳೆದವಾರ

ಮೇ 1, 1998

➠ 760 ಕಿ.ಮಿ ಉದ್ದದ ಕೊಂಕಣ ರೈಲ್ವೆ ಮಾರ್ಗ ಪ್ರಧಾನ ಮಂತ್ರಿಗಳಿಂದ ರಾಷ್ಟ್ರಕ್ಕೆ ಸಮರ್ಪಣೆ. ಜೂನ್ 1 ರಿಂದ ಮುಂಬೈ-ಮಂಗಳೂರು ಹೊಸ ರೈಲು ಆರಂಭಿಸುವುದಾಗಿ ಪ್ರಕಟಣೆ.

➠ ಕಾರವಾರದ ಸೀಬರ್ಡ್ ನಿರಾಶ್ರಿತರ ಮತ್ತು ಯೋಜನೆಯ ಕಾಮಗಾರಿ ಆರಂಭಿಸುವ ಕುರಿತು ರಕ್ಷಣಾ ಇಲಾಖೆಗೆ ವರದಿ ನೀಡಲು ಯೋಜನಾ ಪ್ರದೇಶಕ್ಕೆ ರಕ್ಷಣಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯ ಭೇಟಿ.

ಮೇ 2, 1998

➠ ಬೀದರ್, ಗುಲ್ಬರ್ಗ ರೈತರಿಗೆ ಬೆಳೆ ವಿಫಲತೆಯ ಪರಿಹಾರದ ಬಗ್ಗೆ ನಿರ್ಧರಿಸಲು ಮುಖ್ಯಮಂತ್ರಿಗಳಿಗೆ ಸಚಿವ ಸಂಪುಟದಿಂದ ಅಧಿಕಾರ ನೀಡಿಕೆ.

➠ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಯ ತುಂಡು ಗುತ್ತಿಗೆಗಳಲ್ಲಿ 300-400 ಕೋಟಿ ರೂ. ಅವ್ಯವಹಾರ ನಡೆದಿದೆಯೆಂದು ಮಾಜಿ ಕೇಂದ್ರ ಸಚಿವ ಜಾಲಪ್ಪನವರ ಆರೋಪ.

ಮೇ 4, 1998

➠ ಕಲ್ಬುರ್ಗಿಯಲ್ಲಿ ಜಾಲ ಹೊಂದಿರುವ 33 ಕಳಪೆ ಕ್ರಿಮಿನಾಶಕ ಕಂಪನಿಗಳ ಪತ್ತೆ. ಇವುಗಳ ವಿರುದ್ಧ ನ್ಯಾಯಾಲಯದಲ್ಲಿ 50 ಮೊಕದ್ದಮೆಗಳ ಹೂಡಿಕೆ.

ಮೇ 5, 1998

➠ ಕರ್ನಾಟಕದ ಪಶ್ಚಿಮ ಘಟ್ಟದ ಸುರಕ್ಷಿತ ಅರಣ್ಯ ಪ್ರದೇಶದಲ್ಲಿ ಭೂಕಬಳಿಕೆಯಾಗುತ್ತಿರುವುದನ್ನು ತಡೆಯಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ಸರಕಾರಕ್ಕೆ ಸುಪ್ರೀಂಕೋರ್ಟ್ ಆದೇಶ.

➠ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಭಾವೀ ವ್ಯಕ್ತಿಗಳಿಂದ ಅರಣ್ಯ ಒತ್ತುವರಿ, ರಾಜ್ಯ ಜನತಾದಳ ಅಧ್ಯಕ್ಷ ಶಂಕರ್ ಸೇರಿದಂತೆ 500 ಜನರ ವಿರುದ್ಧ ಮೊಕದ್ದಮೆ ಹೂಡಿರುವುದಾಗಿ ಅರಣ್ಯ ಸಚಿವರು.

ಮೇ 6, 1998

➠ ಬೀದರ್, ಕಲ್ಬುರ್ಗಿ ರೈತರು ಬೆಳೆಹಾನಿ ಪರಿಹಾರ ಪ್ರತಿ ಹೆಕ್ಟೇರಿಗೆ 750 ರೂ.ನಂತೆ ಗರಿಷ್ಠ 3000 ರೂ. ಹಾಗೂ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂ. ಪರಿಹಾರದ ಘೋಷಣೆ.

➠ 'ವಾಸ್ತವ ಸಂಗತಿಗಳನ್ನು ಅರಿಯದೇ ಸರ್ಕಾರದ ವಿರುದ್ಧ ಬೇಜವಾಬ್ದಾರಿ ಮತ್ತು ಅಪ್ರಬುದ್ಧ ಹೇಳಿಕೆಗಳನ್ನು ಏಕೆ ನೀಡುತ್ತೀರಿ? ಎಂದು ಕೇಂದ್ರ ವಾಣಿಜ್ಯ ಮಂತ್ರಿ ಹೆಗಡೆಯವರಿಗೆ ಮುಖ್ಯಮಂತ್ರಿ ತರಾಟೆ.

ಕೋಮುವಾದ ಮತ್ತು ಜಾಗತೀಕರಣದ ವಿರುದ್ಧ ರಾಜ್ಯಾದ್ಯಂತ ಮೇ ದಿನಾಚರಣೆ

112ನೇ ವಿಶ್ವಕಾರ್ಮಿಕರ ದಿನಾಚರಣೆಯನ್ನು ಬಂಡವಾಳಶಾಹಿಗಳ ಕೂಸು ಖಾಸಗೀಕರಣ, ಜಾಗತೀಕರಣ ಮತ್ತು ಮಾನವ ಕುಲದ ಕಡು ವೈರಿ ಕೋಮುವಾದದ ವಿರುದ್ಧ ಆಚರಿಸುವುದರ ಜೊತೆಗೆ, 1886ರ ಮೇ ಘೋಷಣೆ '8 ಗಂಟೆ ಕೆಲಸ, 8 ಗಂಟೆ ಮನರಂಜನೆ ಹಾಗೂ 8 ಗಂಟೆ ವಿಶ್ರಾಂತಿ' ಇಡೀ ದುಡಿಯುವ ವರ್ಗಕ್ಕೆ ಲಭಿಸುವ ತನಕ ಹೋರಾಡುವ ಪಣದೊಂದಿಗೆ ರಾಜ್ಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಂಗಳೂರು :

ನಗರದಲ್ಲಿ ಕಾರ್ಮಿಕರು ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ. ಮತ್ತಿತರ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಜಂಟಿಯಾಗಿ ಮೇ ದಿನವನ್ನು ಆಚರಿಸ ಲಾಯಿತು. ಕಾರ್ಮಿಕರು ನಾನಾ ಭಾಗಗಳಿಂದ ವರ್ಣರಂಜಿತ ಮೆರವಣಿಗೆ ಮೂಲಕ ಬನ್ನಪ್ಪ ಪಾರ್ಕಿನಲ್ಲಿ ಸಮಾವೇಶಗೊಂಡರು.

ಸಿ.ಐ.ಟಿ.ಯು. ಮುಖಂಡ ಕೆ.ಎಸ್. ಸುಬ್ರಮಣ್ಯಂ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಕಾಂ|| ಸೂರ್ಯನಾರಾಯಣ ರಾವ್ ಮಾತನಾಡಿ, ಇಂದು ಕರ್ನಾಟಕ ರಾಜ್ಯೋತ್ಸವದ ಹಾಗೇ ಮೇ ದಿನಾಚರಣೆ ಆಚರಿಸಬೇಕು. ಧಾರ್ಮಿಕ ಆಧಾರದಲ್ಲಿ ಕಾರ್ಮಿಕರನ್ನು ಒಡೆಯುವ ಯತ್ನದಲ್ಲಿ ಕೆಲವು ಕೋಮುವಾದಿಗಳು ಯತ್ನಿಸುತ್ತಿದ್ದಾರೆ, ಕಾರ್ಮಿಕರ ಒಗ್ಗಟ್ಟನ್ನು ಬಲಪಡಿಸುವ ನಿಟ್ಟಿನಲ್ಲಿ ಅಸಂಖ್ಯಾತ ಅಸಂಘಟಿತ ಕಾರ್ಮಿಕರನ್ನು, ಕೃಷಿ ಕೂಲಿಕಾರರನ್ನು ಸಂಘಟಿಸಬೇಕಾಗಿದೆ ಎಂದರು.

ಜಾಗತೀಕರಣದ ಭಾಗವಾಗಿ ಸಾರ್ವಜನಿಕ ಉದ್ದಿಮೆಗಳು, ಬಟ್ಟೆ ಗಿರಣಿಗಳು, ಗಾರ್ಮೆಂಟ್ಸ್, ಪವರ್ ಲೂಂ ಜೊತೆಗೆ ಸಣ್ಣ ಕೈಗಾರಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಮುಚ್ಚಲಾಗುತ್ತಿದೆ ಎಂದ ಕಾಂ|| ಸೂರಿ ಇಂತಹ ತೀರ್ಮಾನಗಳು ರಾಜಕೀಯದಿಂದ ಕೂಡಿದ್ದಾಗಿದೆ. ಒಂದು ರಾಜಕೀಯ ತೀರ್ಮಾನ ಬದಲಾಯಿಸಬೇಕಾದರೆ ಕಾರ್ಮಿಕರಲ್ಲಿ ಐಕ್ಯ ಹೋರಾಟದ ಅಗತ್ಯವಿದೆ. ಇಂತಹ ಐಕ್ಯ ಹೋರಾಟದಿಂದ ಕಾರ್ಮಿಕರಿಗೆ ರೈತರಿಗೆ ಮಾರಕವಾಗುತ್ತಿರುವ ಜಾಗತೀಕರಣವನ್ನು ಹಿಮ್ಮೆಟ್ಟಿಸಲು ಸಾಧ್ಯವೆಂದರು. ಈ ನಿಟ್ಟಿನಲ್ಲಿ ದ.ಕೊರಿಯಾದಲ್ಲಿ 36 ಲಕ್ಷ ಕಾರ್ಮಿಕರು, ಫ್ರಾನ್ಸ್, ಇಟಲಿ, ಇಂಗ್ಲೆಂಡ್, ಹಲವು 65 ರಾಷ್ಟ್ರಗಳಲ್ಲಿ ಲಕ್ಷಾಂತರ ಕಾರ್ಮಿಕರು ಪ್ರಬಲ ಹೋರಾಟ ನಡೆಸುತ್ತಿದ್ದಾರೆ ಎಂದರು.

ಎ.ಐ.ಟಿ.ಯು.ಸಿ.ಯ ಬಾಲಕೃಷ್ಣ ಮಾತನಾಡಿ ಕೆಂಬಾವುಟದಲ್ಲಿ ನಂಬಿಕೆ ಇರುವ ಕಾರ್ಮಿಕರು, ಮಾಲಿಕರ ಆಕ್ರಮಣ ಎದುರಿಸಲು ಒಂದು ಐಕ್ಯತೆಯ ಅವಶ್ಯವಿದೆ. ಕೇವಲ ಸವಲತ್ತುಗಳಿಗಾಗಿ ಮಾತ್ರವಲ್ಲದೆ ಇಡೀ ಮಾನವ ಕುಲದ ಬಿಡುಗಡೆಗಾಗಿ ಹೋರಾಡಬೇಕಾಗಿದೆ ಎಂದರು.

ಸಭೆಯಲ್ಲಿ ಸಿ.ಐ.ಟಿ.ಯು.ವಿನ ಆರ್. ಶ್ರೀನಿವಾಸ್, ಮೀನಾಕ್ಷಿ ಸುಂದರಂ, ದುಡಿಯುವ ಮಹಿಳೆಯರ ಪರವಾಗಿ ಕೆ.ಎಸ್. ವಿಮಲ, ಎ.ಐ.ಟಿ.ಯು.ಸಿ.ಯ ಹರಿ ಗೋವಿಂದ್ ಹಾಗೂ ವಿವಿಧ ಕಾರ್ಮಿಕ ಸಂಘಗಳ ಮುಖಂಡರಲ್ಲದೆ ಸಾವಿರಾರು ಕಾರ್ಮಿಕರು ಪಾಲ್ಗೊಂಡಿದ್ದರು.

ಬೆಂಗಳೂರು 'ಸಮುದಾಯ' ತಂಡವು ಜಾಗತೀಕರಣದ ಪರಿಣಾಮ ಕಾರ್ಮಿಕರ ಹಾಗೂ ರೈತರಿಗೆ ಮಾರಕವಾಗಿರುವುದನ್ನು ಬೀದಿ ನಾಟಕದ ಮೂಲಕ ವಿವರಿಸಿದರು.

ಇದೇ ಸಂದರ್ಭದಲ್ಲಿ ಕಾರ್ಮಿಕರು ಹಲವು ನಿರ್ಣಯಗಳನ್ನು ಕೈಗೊಂಡರು.

- ಕೋಮುವಾದ ಮತ್ತು ಮೂಲಭೂತವಾದದ ವಿರುದ್ಧ
- ಜಾಗತೀಕರಣ - ಖಾಸಗೀಕರಣ - ಉದಾರೀಕರಣ ವಿರೋಧಿಸಿ.
- ಗುತ್ತಿಗೆ ಪದ್ಧತಿ ಪ್ರತಿಭಟಿಸಿ ಹಾಗೂ ಬಿನ್ನಿ ಮಿಲ್ ಕಾರ್ಮಿಕರಿಗೆ ಬೆಂಬಲ ಸೂಚಿಸುವ ಹಲವು ನಿರ್ಣಯಗಳು ಅಂಗೀಕಾರವಾದವು.

ಚಿಕ್ಕಮಗಳೂರು : ಕಾಂ|| ಎಂ.ವಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಿ.ಐ.ಟಿ.ಯು.ವಿನ ವಿ. ಸುಕುಮಾರ್, ಜೆ.ಎಂ.ಎಸ್.ನ ಎನ್. ಪ್ರಭಾವತಿ ಹಾಗೂ ಎಲ್.ಐ.ಸಿ.ಯ ನಾಯಕ್ ಮಾತನಾಡಿ ಕೋಮುವಾದ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ಕಾರ್ಮಿಕರಲ್ಲಿ ಅರಿವು ಹೆಚ್ಚಬೇಕೆಂದರು. ವಿಠಲ ಸ್ವಾಗತಿಸಿದರೆ ಎ.ಕೆ. ವಿಶ್ವನಾಥ್ ವಂದಿಸಿದರು.

ಉಡುಪಿ : ಕಲ್ಯಾಣಪುರ ಸಂತೆಕಟ್ಟೆಯಿಂದ ಹೆಂಚು ಕಾರ್ಮಿಕರ ಬೃಹತ್ ಮೆರವಣಿಗೆ, ಉಡುಪಿ ಬೈ ಪಾಸ್‌ನಿಂದ ಬೀಡಿ ಹಾಗೂ ಗೋಡಂಬಿಯ ಮಹಿಳಾ ಕಾರ್ಮಿಕರ ಆಕರ್ಷಣೀಯ ಮೆರವಣಿಗೆ ನಡೆಸಲಾಯಿತು. ಕೆ. ಗುರುರಾಜ್ ಶೆಟ್ಟಿಗಾರ್ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಜಿಲ್ಲಾ ಕಾರ್ಮಿಕ ಮುಖಂಡ ಕೆ.ಆರ್. ಶ್ರೀಯಾನ್ ಮಾತನಾಡಿ ಶ್ರಮಿಕರ ಶ್ರಮವನ್ನು ದೇಶದ ಉದ್ಧಾರಕ್ಕಾಗಿ ವಿನಿಯೋಗಿಸುವ ಸರ್ಕಾರದ ಅವಶ್ಯಕತೆ ಇದೆ ಎಂದರು. ಪಿ. ವಿಶ್ವನಾಥ್‌ರು ಸ್ವಾಗತಿಸಿದರೆ ಎನ್. ಸಾಧು ಅಮೀನ್ ವಂದನೆ ಸಲ್ಲಿಸಿದರು.

ಕುಂದಾಪುರ : ಸಿ.ಐ.ಟಿ.ಯು.ವಿಗೆ ಸೇರಿದ ಹೆಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು, ಆಟೋ ರಿಕ್ಷಾ ಚಾಲಕರು, ರೈತ, ಕೃಷಿಕೂಲಿಕಾರರು ಮತ್ತು ಪೈಪ್ ಕಾರ್ಮಿಕರು ಆಕರ್ಷಣೀಯವಾದ, ಸಮವಸ್ತ್ರಧಾರಿ ಸ್ವಯಂಸೇವಕರು, ಹಾಗೂ ಬ್ಯಾಂಡ್ ತಂಡದವರ ಪಥ ಸಂಚಲನವು ಕುಂದಾಪುರದ ನಾಗರೀಕರು ನಿಬ್ಬೆರಗಾಗುವಂತಿತ್ತು.

ಗಾಂಧಿ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಿ.ಐ.ಟಿ.ಯು ರಾಜ್ಯ ಮುಖಂಡ ಸಿ. ನಂಜುಂಡಪ್ಪ ಮಾತನಾಡಿ, ಕೋಮುವಾದಿ ಹಾಗೂ ಪ್ರತಿಗಾಮಿ ಶಕ್ತಿಗಳ ಹಿಡಿತದಲ್ಲಿರುವ ಹೊಸ ಸರ್ಕಾರದಿಂದ ದೇಶದ ಜಾತ್ಯಾತೀತ ಹಾಗೂ ಕಾರ್ಮಿಕ ವರ್ಗದ ಹಿತಾಸಕ್ತಿಗೆ ಗಂಭೀರ ಅಪಾಯ ಎದುರಾಗಲಿದೆ ಎಂದರು. ಕೆ. ಶಂಕರ್, ಪುರಸಭಾಧ್ಯಕ್ಷ ವಿ. ನರಸಿಂಹ ಕಾರ್ಮಿಕರಿಗೆ ಮೇ ದಿನದ ಮಹತ್ವ ವಿವರಿಸಿದರು. ಅಬ್ರಹಾಂ ಕರ್ಕಡ್ ಅಧ್ಯಕ್ಷತೆ ವಹಿಸಿದರೆ, ಮಹಾಬಲ ಒಡೇರ ಹೋಬಳಿಯವರು ಸ್ವಾಗತಿಸಿ, ಸಿ. ನಾರಾಯಣ ಧನ್ಯವಾದ ಹೇಳಿದರು.

ಉತ್ತರ ಕನ್ನಡ

ಭಟ್ಕಳ: ಹಂಚಿನ ಕಾರ್ಮಿಕರು ಅಂಗನವಾಡಿ ಕಾರ್ಯಕರ್ತೆಯರು ಕಮುನಿಸ್ಟ್ ಪಕ್ಷದ ಸದಸ್ಯರನ್ನೊಳಗೊಂಡ ಬೃಹತ್ ಮೆರವಣಿಗೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಬಿಟ್ಕೊ ಕಾರ್ಖಾನೆಯಿಂದ ಪ್ರಾರಂಭವಾಗಿ ಶಿರಾಲಿ ನಗರದ ಬೀದಿಯಲ್ಲಿ ಸಂಚರಿಸಿ ಸಭೆ ಸೇರಿದಾಗ ಅವರನ್ನುದ್ದೇಶಿಸಿ ಎಸ್.ಎಫ್.ಐನ ಕೇಂದ್ರ ಸಮಿತಿಯ ಕಾರ್ಯದರ್ಶಿಮಂಡಳಿಯ ಸದಸ್ಯರಾದ ಕೆ. ಪ್ರಕಾಶ್ ಮಾತನಾಡಿ ನಮ್ಮ ವಿರೋಧಿಗಳು ಯಾರು ಎಂದು ತಿಳಿಯದೆ ನಾವು ಯಾರ ವಿರುದ್ಧ ಹೋರಾಡಲು ಸಾಧ್ಯ. ನಮ್ಮ ವಿರೋಧಿಗಳು ಯಾರು ಮತ್ತು ನಾವು ಯಾರೆಲ್ಲ ಒಂದು ಎನ್ನುವುದನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ ಎಂದರು. ಕಾರ್ಮಿಕ ಚಳುವಳಿಗೆ ದೊಡ್ಡ ಇತಿಹಾಸ ಇದೆ. ಇಂದು ಇಡೀ ಜಗತ್ತಿನಲ್ಲಿ ದೊಡ್ಡ ಶಕ್ತಿ ಯಾಗಿ ನಾವು ಬೆಳೆದಿದ್ದೇವೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡ ವಿಠ್ಠಲ ಭಂಡಾರಿ ಮಾತನಾಡಿ ಪೂರ್ಣ ಸ್ವರಾಜ್ಯ ಕಲ್ಪನೆಯನ್ನು ಮುಂದಿಟ್ಟು ಸ್ವಾತಂತ್ರಕ್ಕಾಗಿ ಧೀರ ಹೋರಾಟ ಮಾಡಿದ ಕಾರ್ಮಿಕ ವರ್ಗ ಸ್ವಾತಂತ್ರ್ಯ ಬಂದು 50 ವರ್ಷದ ನಂತರ ಕೂಡ ನಮ್ಮ ಬಿಡುಗಡೆಗೆ ಹೋರಾಟ ಮಾಡ ಬೇಕಾದ ದುಸ್ಥಿತಿ ಬಂದಿರುವುದು ವಿಷಾದನೀಯ ಎಂದರು.

ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು ಮುಖಂಡ ಸುಭಾಶ ಕೊಪ್ಪಿಕರ ವಹಿಸಿದ್ದರು. ಅಂಗನವಾಡಿ ಸಂಘದ ನಾಗರತ್ನ ಪಡಿಯಾರ, ಮೆಡಿಸಿನ್ ಕಾರ್ಮಿಕ ಸಂಘದ ಸುನಿಲ ಭಟ್ಕಾಳಕರ, ಹಂಚುಕಾರ್ಮಿಕ ಸಂಘದ ಈಶ್ವರ ನಾಯ್ಕ ಮುನ್ಸೇಲ್ ಡಿ ಕೋಬಾ, ನಾಗಪ್ಪದೇವಾಡಿಗ, ಚಂದ್ರ ಗಣಪತಿ ದೇವಾಡಿಗ, ವೆಂಕಟೇಶ್, ಮಾಸ್ತಿ, ಶಕುಂತಲಾ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಅಂಕೋಲಾ: ಚಿಂತಕ ಕಾರ್ಲ್‌ಮಾರ್ಕ್ಸ್ ವಿಶ್ವದ ಕಾರ್ಮಿಕರೇ ಒಗ್ಗಟ್ಟಾಗಿ ಎಂದು ಹೇಳಿರುವ ಮಾತು ಈ ದಿನ ಬಹಳ ಪ್ರಸ್ತುತವಾಗಿದೆ. ಸಿ.ಐ.ಟಿ.ಯು ವಿಶಾಲ ತಳಹದಿಯಲ್ಲಿ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದೆ ಎಂದು ಡಿ.ವೈ.ಎಫ್.ಐ ರಾಜ್ಯಾಧ್ಯಕ್ಷ ಶಾಂತರಾಮ್ ನಾಯಕ್ ಹೇಳಿದರು. ಅವರು ಅಂಕೋಲದ ಸತ್ಯಾಗ್ರಹ ಸ್ಮಾರಕ ಸಭಾಭವನದಲ್ಲಿ ನಡೆದ ಮೇ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾದ ವಿ.ಜೆ. ನಾಯಕ ಮಾತನಾಡಿ ಮನುಷ್ಯ ಜೀವನಕ್ಕೆ ಹೊಸತಿರುವು ನೀಡಿದ ದಿನ ಮೇ ದಿನ. ಮಾನವ ಅಂತಃಕರಣ ಹೊಂದಿದ ಹೊಸ ದೃಷ್ಟಿ ನಿರ್ಮಿಸಲು ಮೇದಿನ ಕಾರಣವಾಯ್ತು ಎಂದರು ಇನ್ನೊರ್ವ ಅತಿಥಿ ಅವ್ಮೆಂಬಳ ಆನಂದ ಮಾತನಾಡಿ ಸಿ.ಐ.ಟಿ.ಯು ಜಿಲ್ಲಾ ಅಧ್ಯಕ್ಷ ಎಂ.ಬಿ. ನಾಯ್ಕ ಕಾರವಾರದ ವಿಮಾನೌಕರರ ಸಂಘದ ಅಧ್ಯಕ್ಷ ಪಿ.ಆರ್ ನಾಯ್ಕ ಮಾತನಾಡಿದರು. ಕವಿ ಶಾಂತರಾಮ್ ನಾಯಕ ಹಚ್ಚಡ, ಶಂಕರ ಕೇಣಿ ಆರ್. ಎಸ್. ನಾಯ್ಕ ಹಂಚುಕಾರ್ಮಿಕ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.

ಬೀರಣ್ಣನಾಯ್ಕ ಸ್ವಾಗತಿಸಿದರೆ, ದಾಮೋದರ ನಾಯ್ಕ ವಂದಿಸಿದರು.

ಶಿರಸಿ: ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದಂತೆ ಈಗ ಬಹುರಾಷ್ಟ್ರೀಯ ಕಂಪನಿಯಿಂದ ದೇಶದ ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡಲು ನಮ್ಮ ಕಾರ್ಮಿಕ ಸಂಘಟನೆಯು ಹೋರಾಟ ನಡೆಸಬೇಕೆಂದು ಕರ್ನಾಟಕ ಅಂಗನವಾಡಿ ನೌಕರರ ಸಂಘದ ಕಾರ್ಯದರ್ಶಿ ಕೆ.ಎಸ್. ವರಲಕ್ಷ್ಮಿ ಹೇಳಿದರು. ಅವರು ಶಿರಸಿ ನಗರದ ಬಿಡ್ಕಿಬೈಲಿನಲ್ಲಿ ಕಾರ್ಮಿಕ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ರೈತ ಸಂಘದ ಪ್ರತಿನಿಧಿ ಬಂಗಾರೇಶ್ವರ ಮಾತನಾಡಿ ಎಲ್ಲಾ ಶೋಷಿತ ಜನರನ್ನು ಒಂದುಗೂಡಿಸಿ ಹೋರಾಟ ನಡೆಸುವ ಪ್ರತಿಜ್ಞೆ ಮಾಡಬೇಕು ಎಂದು ಹೇಳಿದರು.

ರಸ್ತೆ ಸಾರಿಗೆ ನೌಕರರ ಸಂಘದ ಪ್ರತಿನಿಧಿ ಶಾಂತರಾವ್ ನಾಯಕ ಮಾತನಾಡಿ ಕಾರ್ಮಿಕರ ಏಕತೆಯ ಬಗ್ಗೆ ಪ್ರಸ್ತಾಪಿಸಿದರು. ದೂರವಾಣಿ ಇಲಾಖೆಯ ಡಿ.ಜಿ.ಹೆಗಡೆ, ಸ್ಟೇಟ್ ಬ್ಯಾಂಕಿನ ಆರ್.ಎಂ.ನಾಯ್ಕ, ಅಂಗನವಾಡಿ ಕಾರ್ಯಕರ್ತೆ ಪದ್ಮಾ ಭಟ್ ಸಿಪಿಐ(ಎಂ) ನ ಪಿ.ಜಿ ಮಶಾಲ್ದಿ, ಎಲ್.ಐ.ಸಿ. ಸಂಘಟನೆಯ ನಾಯಕರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಮಿಕ ಸಮನ್ವಯ ಸಮಿತಿಯ ಸಂಚಾಲಕ ಸಿ.ಆರ್. ಶ್ಯಾನಭಾಗ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಸಭೆಗೆ ಮುನ್ನ ನೂರಾರು ಅಂಗನವಾಡಿ ಕಾರ್ಯಕರ್ತೆಯರನ್ನೊಳಗೊಂಡ ಮೆರವಣಿಗೆ ಘೋಷಣೆಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ದಾಂಡೇಲಿ: ನೂರಾರು ಕಾರ್ಮಿಕರು ಕೆಂಬಾವುಟ ಹಿಡಿದು ಮೆರವಣಿಗೆ ನಡೆಸಿದರು. ಬಹಿರಂಗ ಸಭೆಯಲ್ಲಿ ಜಿಲ್ಲಾ ಕಾರ್ಮಿಕ ಮುಖಂಡ ಟಿ.ಎಸ್.ನಾಯ್ಕ ಮಾತನಾಡಿ ಕಾರ್ಮಿಕರಲ್ಲಿ ರಾಜಕೀಯ ಅರಿವು ಮೂಡಬೇಕಾಗಿದೆ ಎಂದರು. ಪೇಪರ್ ಮಿಲ್‌ನ. ಎಸ್.ಪಿ ಸಾವಂತ, ಮಾಧವ ಸೇರೆಗಾರ್, ಭೀಮರಾವ್ ಜಿರಟಗಿ ಮುಂತಾದವರು ಮಾತನಾಡಿ, ಕೇಂದ್ರ ಸರ್ಕಾರದ ಕಾರ್ಮಿಕ-ರೈತ ವಿರೋಧಿ ನೀತಿಗಳನ್ನು ಖಂಡಿಸಿದರು.

ಹೊನ್ನಾವರ :- 350ಕ್ಕೂ ಹೆಚ್ಚು ಕಾರ್ಮಿಕರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಘೋಷಣೆ ಮುಖಾಂತರ ಮೇ ದಿನದ ಮಹತ್ವ ಸಾರಿದರು.

ಬಹಿರಂಗ ಸಭೆಯಲ್ಲಿ ಸಿ.ಐ.ಟಿ.ಯು. ರಾಜ್ಯ ಮುಖಂಡ ಕೆ. ಶಂಕರ್ ಮಾತನಾಡಿ ಕಾರ್ಮಿಕರ ಭವಿಷ್ಯದ ಬಗ್ಗೆ ವಿವರಿಸಿದರು. ಹೆಂಚು ಕಾರ್ಮಿಕರ ಸಂಘದ ತಿಲಕಗೌಡ, ಕಾರ್ಮಿಕರ ಐಕ್ಯತೆಯ ಮಹತ್ವದ ಬಗ್ಗೆ ವಿವರಿಸಿ, ಬಿ.ಎಂ.ಎಸ್. ನಂತಹ ಸಂಘಗಳು ಕಾರ್ಮಿಕರ ನಡುವೆ ಜಾತಿ-ಧರ್ಮ ತಂದು ಒಗ್ಗಟ್ಟನ್ನು ಒಡೆಯುತ್ತಿರುವುದನ್ನು ಖಂಡಿಸಿದರು.

ಕೋಲಾರದ ಕೈಗಾರಿಕಾ ಪ್ರಾಂಗಣದ ಉಷಾ ಟೆಲಿಹಾಯಿಸ್ಟ್ ಕಾರ್ಖಾನೆಯಲ್ಲಿ ಮೇ ದಿನಾಚರಣೆ ದಿನ ಸಿಐಟಿಯು ಧ್ವಜಾರೋಹಣವನ್ನು ಸಂಘದ ಗೌರವ ಅಧ್ಯಕ್ಷರಾದ ಗಾಂಧಿನಗರ ನಾರಾಯಣ ಸ್ವಾಮಿ ನೆರವೇರಿಸಿದರು.



ಕಿರ್ಲೋಸ್ಕರ್ ಬ್ಯಾಟರೀಸ್ ಕಾರ್ಮಿಕರಿಗೆ ಜಯ

88 ದಿನಗಳಿಂದ ಮುಷ್ಕರ ಹಾಗೂ ಹತ್ತು ದಿನಗಳ ಉಪವಾಸ ಮುಷ್ಕರದ ನಂತರ ಬೆಂಗಳೂರಿನ ಕಿರ್ಲೋಸ್ಕರ್ ಬ್ಯಾಟರೀಸ್ ಕಾರ್ಮಿಕರು ನಾಲ್ವರು ಕಾರ್ಮಿಕರ ವರ್ಗಾವಣೆ ಹಾಗೂ ಅಮಾನತುಗಳನ್ನು ರದ್ದು ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಾರ್ಖಾನೆಯ ಕಾರ್ಮಿಕರ ಸೌಹಾರ್ದ ಬೆಂಬಲದಿಂದಾಗಿ ಇದು ಸಾಧ್ಯವಾಗಿದೆ ಎಂದು ಕಾರ್ಮಿಕ ಮುಖಂಡರು ಹೇಳಿದ್ದಾರೆ.

ಮೇ 28 ರಿಂದ ಕೈಮಗ್ಗ ನೇಕಾರರ ಹೋರಾಟ

ಹುಬ್ಬಳ್ಳಿ : ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ (ಕೆ.ಹೆಚ್.ಡಿ.ಸಿ.)ದ ಅಡಿಯಲ್ಲಿ ಕೆಲಸ ಮಾಡುತ್ತಿರುವ ನೇಕಾರರು ಬಹುದಿನಗಳಿಂದ ಈಡೇರದ ತಮ್ಮ ಬೇಡಿಕೆಗಳಾದ ಪಿಂಚಣಿ ಯೋಜನೆ, ಕಲ್ಯಾಣ ನಿಧಿ, ಹಬ್ಬಗಳ ಗಜಾ ಸೌಲಭ್ಯ, ಇ.ಎಸ್.ಐ. ಸೌಲಭ್ಯಗಳ ಜೊತೆ ಸಾಲ ಮಂಜೂರಾತಿ, ವಸತಿ, ಕಚ್ಚಾ ನೂಲು ಪೂರೈಕೆ ಇನ್ನು ಮುಂತಾದವುಗಳ ಈಡೇರಿಕೆಗಾಗಿ ಮೇ 28 ರಿಂದ ಹುಬ್ಬಳ್ಳಿ ಪ್ರಧಾನ ಕಛೇರಿ ಎದುರು ಅನಿರ್ದಿಷ್ಟ ಅವಧಿಯ ಸಾಮೂಹಿಕ ಸತ್ಯಾಗ್ರಹ ಆರಂಭಿಸಲು ರಾಜ್ಯ ಕೈ ಮಗ್ಗ ನೇಕಾರರ ಕಾರ್ಮಿಕರ ಸಮನ್ವಯ ಸಮಿತಿ ನಿರ್ಧರಿಸಿದೆ.

ಆಡಳಿತಾಧಿಕಾರಿ ನೇಮಕಕ್ಕೆ ರಾಜ್ಯ ಸರಕಾರಿ ನೌಕರರ ಸಂಘದ ವಿರೋಧ:

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವ ಯಾವುದೇ ಕ್ರಮವನ್ನು ತೀವ್ರವಾಗಿ ವಿರೋಧಿಸಲು, ಎಪ್ರಿಲ್ 26 ರಂದು ಬೆಂಗಳೂರಿನಲ್ಲಿ ನಡೆದ ಸಂಘದ ರಾಜ್ಯ ಮಂಡಳಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನವನ್ನು ಕೈಗೊಳ್ಳಲಾಯಿತು.

ಪ್ರಜಾಪ್ರಭುತ್ವ ರೀತಿಯಲ್ಲಿ ಸಂಘದ ಚುನಾವಣೆಯನ್ನು ನಡೆಸಲು ಅವಕಾಶ ನೀಡಬೇಕು ಹಾಗೂ ಕೇಂದ್ರದ 5ನೇ ವೇತನ ಆಯೋಗದ ಶಿಫಾರಸಿನಂತೆ, ರಾಜ್ಯ ಸರಕಾರಿ ನೌಕರರ ವೇತನವನ್ನು ಪರಿಷ್ಕರಿಸಿ, ವಿಳಂಬ ಮಾಡದೆ ಜುಲೈ ತಿಂಗಳೊಳಗಾಗಿ, ವೇತನ ಸಮಿತಿಯು ಸರಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಸಭೆ ಆಗ್ರಹ ಪಡಿಸಿತು..

ಶುಭಾಶಯಗಳು

ಹೊನ್ನಾವರ : ಮಾವಿನ ಕುರ್ವೇ ತಿಲಕ ಜಟ್ಟ ಗೌಡರ ಸಹೋದರ ಟಿ.ಜೆ. ಗೌಡರ ವಿವಾಹವು ಗೀತಾರೊಂದಿಗೆ ಮೇ 10ರಂದು ನಡೆಯಿತು. ಈ ಶುಭ ಸಂದರ್ಭದಲ್ಲಿ ಐಕ್ಯರಂಗಕ್ಕೆ 100ರೂ. ಗಳ ದೇಣಿಗೆ ನೀಡಿರುತ್ತಾರೆ.

ಐಕ್ಯರಂಗ ಬಳಗವು ಈ ನವ ದಂಪತಿಗಳಿಗೆ ಶುಭಕೋರುತ್ತದೆ.

ಫ್ರಾನ್ಸ್ ಅಷ್ಟೇ ಏಕೆ-ಇಡೀ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಸಮಾಜವನ್ನೇ ನಡುಗಿಸಿದ ೧೯೬೮ ದ ಮೇ ಘಟನೆಗಳು ನಡೆದು ಮೂರು ದಶಕಗಳು ಕಳೆದಿವೆ. ಆದರೆ "ಕೆಂಪು ಮೇ" ಎಂದು ಹೆಸರಾದ ಈ ಘಟನಾವಳಿಗಳ ಮಹತ್ವ ಏನು? ಇದು ಕೆಲವರು ಹೇಳುವಂತೆ ಯುವಜನರು ನಡೆಸಿದ ಕ್ರಾಂತಿಯೇ? ಇದು ಕ್ರಾಂತಿಯಾದರೆ ಇದು ತಂದ ಬದಲಾವಣೆಗಳೇನು? ಇದು ಕ್ರಾಂತಿ ಅಲ್ಲವಾದರೆ ಯುವಜನರ ದಂಗೆ ಕ್ರಾಂತಿಕಾರಿಯಾಗಿ ಬೆಳೆಯದಿರಲು ಕಾರಣಗಳೇನು? ಈ ಘಟನೆಗಳು ನಡೆದು ಮೂರು ದಶಕಗಳಾದರೂ ಇದರ ಬಗ್ಗೆ ಹೀಗೇ ಎಂದು ಹೇಳುವುದು ಸಾಧ್ಯವಾಗಿಲ್ಲ. ಆದರೆ ಮೇ ೧೯೬೮ ದಲ್ಲಿ ಫ್ರಾನ್ಸ್ ನಂತಹ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಸಮಾಜವೊಂದು ಮೊದಲ ಬಾರಿಗೆ ಕ್ರಾಂತಿಯ ಹೊಸ್ತಿಲಲ್ಲಿ ನಿಂತಿತ್ತು. ಅಷ್ಟರ ಮಟ್ಟಿಗೆ ಅದು ನಿಜವಾಗಿಯೂ ಕೆಂಪು ಮೇ ಆಗಿತ್ತು, ಮಹತ್ವಕಾರಿಯಾಗಿತ್ತು ಎಂಬುದು ನಿರ್ವಿವಾದ. ಇತ್ತೀಚೆಗೆ ಫ್ರಾನ್ಸ್‌ನಲ್ಲಿ ಮತ್ತು ಅಭಿವೃದ್ಧ ಬಂಡವಾಳಶಾಹಿ ಜಗತ್ತಿನಲ್ಲಿ ಪುನಃ ವ್ಯವಸ್ಥೆಯ ವಿರುದ್ಧ ಕೋಪ, ತಾಪ ವಿದ್ರೋಹದ ಜ್ವಾಲೆ ಹರಡುತ್ತಿರುವಾಗ ಕೆಂಪು ಮೇ ನೆನಪು ಪ್ರಸ್ತುತ.

ಶರತ್‌ಚಂದ್ರ

ಫ್ರಾನ್ಸ್‌ನ 1968ರ ಕೆಂಪು ಮೇ

ಒಂದು ನೆನಪು

ಅಲ್ಲೋಲ ಕಲ್ಲೋಲದ 1968:

ಮೇ 1968 ಫ್ರಾನ್ಸಿನ ಘಟನೆಗಳಿಗೂ ಆ ವರ್ಷದ ಮಹತ್ವದ ಅಂತರ್ರಾಷ್ಟ್ರೀಯ ಘಟನೆಗಳಿಗೂ ಗಾಢವಾದ ಸಂಬಂಧವಿದೆ. 1960 ರ ದಶಕದ ಕೊನೆಯ ವರ್ಷಗಳಲ್ಲಿ ಜಗತ್ತಿನಲ್ಲಿ ಅದರಲ್ಲೂ ವಿಶೇಷವಾಗಿ ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ವಿದ್ಯಾರ್ಥಿ ಯುವಜನ ಅಶಾಂತಿ ಚಳುವಳಿ ದಂಗೆಗಳ ಸರಮಾಲೆಯ ಪರಮಾವಧಿ ಫ್ರಾನ್ಸಿನ ಈ ಘಟನೆಗಳು.

1968 ಆರಂಭವಾಗುತ್ತಿದ್ದಂತೆ ದಕ್ಷಿಣ ವಿಯೆಟ್ನಾಮಿನ ವಿಮೋಚನಾ ಪಡೆಗಳು ಅಮೇರಿಕನ್ ದಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ಭಾರಿ ಯಶಸ್ಸು ಸಾಧಿಸಿದವು. ಅಮೇರಿಕನ್ ಮಿಲಿಟರಿ ವಿಜಯದ ಸಾಧ್ಯತೆಯ ಅಧ್ಯಕ್ಷ ಜಾನ್‌ಸನ್‌ರ ಕನಸನ್ನು ಹೊಸಕಿ ಹಾಕಿತ್ತು. ಇದರಿಂದ ರೊಚ್ಚಿಗೆದ್ದು ಹುಚ್ಚರಾದ ಅಮೇರಿಕನ್ ಸೈನಿಕರು ಮೈಲೇ ಎಂಬ ಹಳ್ಳಿಯನ್ನು ಸುಟ್ಟುಹಾಕಿದ ರಾಕ್ಷಸೀ ಕೃತ್ಯ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಗಳನ್ನು ಬಲಪಡಿಸಿತ್ತು. ಅಮೇರಿಕಾದಲ್ಲಿ ಆರಂಭವಾಗಿ ಫ್ರಾನ್ಸ್ ಸೇರಿದಂತೆ ಎಲ್ಲ ಅಭಿವೃದ್ಧ ಬಂಡವಾಳಶಾಹಿ ದೇಶಗಳಿಗೆ ಹರಡಿದ ವಿಯೆಟ್ನಾಂ ಯುದ್ಧ ವಿರೋಧಿ ಚಳುವಳಿಯಲ್ಲಿ ವಿದ್ಯಾರ್ಥಿ-ಯುವಜನ ಕೇಂದ್ರ ಬಿಂದುವಾದರು. ವಿಯೆಟ್ನಾಂನಲ್ಲಿ ವಿಮೋಚನಾ ಚಳುವಳಿ ವಿಜಯದ ಹೊಸ್ತಿಲಲ್ಲಿ ನಿಂತಿದ್ದು ಈ ವಿದ್ಯಾರ್ಥಿ ಯುವಜನರನ್ನು ರೋಮಾಂಚನಗೊಳಿಸಿತ್ತು. ಇನ್ನೊಂದು ಪ್ರಮುಖ ಘಟನೆ ಕರಿಯರ ನಾಯಕ ಡಾ|| ಮಾರ್ಟಿನ್ ಲೂಥರ್ ಕಿಂಗ್ ಕೊಲೆಯ ಹಿನ್ನೆಲೆಯಲ್ಲಿ 110 ನಗರಗಳಲ್ಲಿ ನಡೆದ ದಂಗೆಗಳೂ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಸಮಾಜದ ಪ್ರತಿಗಾಮಿ ಸ್ವರೂಪವನ್ನು ಪ್ರಶ್ನಿಸಿದವು. ಮಾನವತೆಯನ್ನು ನಿರ್ನಾಮ ಮಾಡುವ, ಯುವಜನರ ಆಕಾಂಕ್ಷೆಗಳಿಗೆ ಸ್ಪಂದಿಸದ ಬಂಡವಾಳಶಾಹಿ ವ್ಯವಸ್ಥೆ ಮತ್ತು ಯುವಕರ ಮಧ್ಯೆ ದೊಡ್ಡ ಕಂದಕ ಏರ್ಪಟ್ಟಿತ್ತು.

ಮೇ 68 ರಲ್ಲಿ ನಡೆದದ್ದು ಏನು?

ಮೇ ಘಟನೆಗಳು ಆರಂಭವಾದದ್ದು ಸೊರ್ಬೋನ್‌ನಲ್ಲಿ ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾಲಯ ಅಧಿಕಾರಿಗಳ ನಡುವೆ ನಡೆದ ಘರ್ಷಣೆಗಳಿಂದ. ವಿದ್ಯಾರ್ಥಿಗಳು ಕೇಳುತ್ತಿದ್ದುದು 300 ವರ್ಷ ಹಳೆಯ ವಿಶ್ವವಿದ್ಯಾಲಯದ ಶಿಕ್ಷಣ ಪದ್ಧತಿಯ ಸಮಗ್ರ ಸುಧಾರಣೆ. ಉಚ್ಚ ಶಿಕ್ಷಣಕ್ಕೆ ಆಸಕ್ತಿಯಿರುವ ಎಲ್ಲರಿಗೂ ಅವಕಾಶ ಮತ್ತು ಸ್ಕಾಲರ್‌ಶಿಪ್‌ನಲ್ಲಿ ಹೆಚ್ಚಳ, ವಿಶ್ವವಿದ್ಯಾಲಯಗಳನ್ನು ನಡೆಸುವುದರಲ್ಲಿ ವಿದ್ಯಾರ್ಥಿಗಳಿಗೆ ಪಾಲು ಮತ್ತು ಶಿಕ್ಷಣ ಮುಗಿಸಿದ ನಂತರ ಉದ್ಯೋಗದ ಭರವಸೆ- ಇವು ಕೆಲವು ಪ್ರಮುಖ ಬೇಡಿಕೆಗಳಾಗಿದ್ದವು.

ಈ ಬೇಡಿಕೆಗಳಲ್ಲದೆ ವಿದ್ಯಾರ್ಥಿಗಳು ದೇಶದ ವಿದೇಶ ನೀತಿ, ಆರ್ಥಿಕ ನೀತಿಯನ್ನು ಪ್ರಶ್ನಿಸಲು ಆರಂಭಿಸಿದ್ದರು. ಹಲವು ಬಾರಿ ಸಮಾಜ ವಿಜ್ಞಾನಗಳ ಪಠ್ಯಕ್ರಮದ ಮೂಲಕ ಅವರ ಮೇಲೆ ಹೇರಲಾಗಿದ್ದ ಪಾಶ್ಚಿಮಾತ್ಯ ಸಂಸ್ಕೃತಿಯ ಸಿದ್ಧಾಂತಗಳನ್ನು ಅವರು ನಿರಾಕರಿಸಿದರು. ಪರೀಕ್ಷಾ ಪದ್ಧತಿ, ಮತ್ತು ವಿಶ್ವವಿದ್ಯಾಲಯದಲ್ಲಿ ಇದ್ದ ನೌಕರಶಾಹಿಯ ಜೊತೆ ಈ ವಿದ್ಯಾರ್ಥಿಗಳು ಘರ್ಷಣೆಗೆ ತೊಡಗಿದರು. 60 ರ ದಶಕದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಭಾರಿಪ್ರಮಾಣದಲ್ಲಿ ಹೆಚ್ಚುತ್ತಿದ್ದು ಇದರಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರ ಮತ್ತು ಮಧ್ಯಮ ವರ್ಗದವರ ಮಕ್ಕಳು ಇದ್ದು ವಿದ್ಯಾರ್ಥಿಗಳ ಸಾಮಾಜಿಕ ಸ್ವರೂಪ ಬದಲಾಗುತ್ತಿತ್ತು. ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳ ರಕ್ಷಣೆಯ ಬೇಡಿಕೆಯನ್ನು ಯುವಜನರ ಒಕ್ಕೂರಲಿನಿಂದ ಎತ್ತಿ ಹಿಡಿದರು.

ಈ ಹಿನ್ನೆಲೆಯಲ್ಲಿ ಸೊರ್ಬೋನ್‌ನ ಘರ್ಷಣೆಗಳು-ಪೋಲೀಸರ ಮಧ್ಯಪ್ರವೇಶ ಇಡೀ ದಂಗೆಗೆ ಕಿಡಿಯನ್ನು ಒದಗಿಸಿತು. ಮುಂದಿನ ಸುಮಾರು 8-10 ದಿನಗಳು ಈ ವಿದ್ಯಾರ್ಥಿ ದಂಗೆ ದೇಶದಲ್ಲೆಲ್ಲಾ ಹರಡಿ ಸುಮಾರು 5 ಲಕ್ಷ ವಿದ್ಯಾರ್ಥಿ ಯುವ ಜನರನ್ನು ಒಳಗೊಂಡಿತ್ತು (ವಿವರಗಳು ಬಾಕ್ಸ್‌ನಲ್ಲಿ). ಇದು ಹರಡುತ್ತಾ ಹೋದ ಹಾಗೆ ಗಾಬರಿಗೊಂಡ ಸರ್ಕಾರ ಮತ್ತು ಪ್ರಭುತ್ವ ತನ್ನ ದಮನಕಾರಿ ಸ್ವರೂಪವನ್ನು ಹೆಚ್ಚೆಚ್ಚು ಪ್ರದರ್ಶಿಸುತ್ತಾ ಚಳುವಳಿ ಸಹ ಇನ್ನೂ ವ್ಯಾಪಕವಾಗುತ್ತಾ ಹೋಯಿತು.

ಮೇ11 ರಂದು ವಿದ್ಯಾರ್ಥಿಗಳು ರಸ್ತೆ ತಡೆಗಳನ್ನು (barricade) ಒಡ್ಡಿದ್ದು ಚಳುವಳಿಯನ್ನು ಒಂದು ಹೊಸ ಹಂತಕ್ಕೆ ತಲುಪಿಸಿತು. ಫ್ರಾನ್ಸ್‌ನಲ್ಲಿ, ಅದರಲ್ಲೂ ಪ್ಯಾರಿಸಿನಲ್ಲಿ-ರಸ್ತೆತಡೆ ಗಳನ್ನು ಒಡ್ಡುವುದು ಕ್ರಾಂತಿಯ ಆರಂಭದ ಪ್ರತೀಕವಾಗಿ ಫ್ರೆಂಚ್ ಜನತೆಯ ಮನಸ್ಸಿನಲ್ಲಿ ಮೂಡಿದೆ. ಚಾರಿತ್ರಿಕವಾಗಿ ಫ್ರೆಂಚ್ ಬೂರ್ಷ್ವಾ ಕ್ರಾಂತಿ ಮತ್ತು ಪ್ಯಾರಿಸ್ ಕಮ್ಯೂನ್‌ನ ಸಂಪ್ರದಾಯದ ಭಾಗವಾಗಿ ಆಧುನಿಕ ಪ್ರಭುತ್ವದ ದಮನಕಾರಿಯಂತ್ರದ ಎದುರಿನಲ್ಲಿ ರಸ್ತೆ ತಡೆಗಳಿಗೆ ತಾಂತ್ರಿಕವಾಗಿ ಏನು ಮಹತ್ವವಿರದಿದ್ದರೂ ಇದಕ್ಕೆ ಭಾವನಾತ್ಮಕ ಮಹತ್ವವಿತ್ತು. ಇದರಿಂದ ಕಾರ್ಮಿಕ ವರ್ಗವು ಸೇರಿದಂತೆ ಫ್ರೆಂಚ್ ಜನತೆ ರೋಮಾಂಚನಗೊಂಡರು.

ಹೊಸ ಹಂತ

ಕಮ್ಯುನಿಸ್ಟರು ಸಂಘಟಿಸಿದ ಮೇ 13 ರ ಸಾರ್ವತ್ರಿಕ ಮುಷ್ಕರದಿಂದ ಚಳುವಳಿ ಗುಣಾತ್ಮಕವಾಗಿ ಇನ್ನೊಂದು ಹೊಸ ಹಂತವನ್ನು ತಲುಪಿತು. ವಿದ್ಯಾರ್ಥಿಗಳ ಜೊತೆ ಸಹಾನುಭೂತಿ ತೋರಲು ಆರಂಭವಾದ 24-ಗಂಟೆಗಳ ಸಾರ್ವತ್ರಿಕ ಮುಷ್ಕರ ಮೂರು ವಾರಗಳ ಕಾಲ ತಮ್ಮ ಕಾರ್ಖಾನೆ ಆಫೀಸುಗಳನ್ನು ವಶಪಡಿಸಿಕೊಂಡು ತಾವೇ ನಡೆಸುವ ಚಳುವಳಿಯಾಗಿ ಮಾರ್ಪಟ್ಟದ್ದು 1968 ರ ಮೇ ಯನ್ನು ಕೆಂಪು ಮೇ ಯಾಗಿ ಮಾರ್ಪಡಿಸಿದ- ಸಾಮಾನ್ಯವಾಗಿ ಕಡೆಗಣಿಸಲ್ಪಟ್ಟ ಮಹತ್ವದ ಘಟನೆ. ಹೆಚ್ಚುಕಡಿಮೆ ಇಡೀ ಫ್ರಾನ್ಸಿನ (ಒಟ್ಟು 5 ಕೋಟಿ ಜನಸಂಖ್ಯೆ) ಸುಮಾರು 1 ಕೋಟಿಯಷ್ಟು ಕಾರ್ಮಿಕ ವರ್ಗ ದೇಶದ ಆರ್ಥಿಕ ವ್ಯವಸ್ಥೆಯನ್ನು ಮೊದಲು ಸ್ತಬ್ಧಮಾಡಿ ಆಮೇಲೆ ತಾನೇ ನಡೆಸಲು ಆರಂಭಿಸಿತು. ಇದರಲ್ಲಿ ಬಂಡವಾಳಶಾಹಿಗಳ ಕೇಂದ್ರ ಸಂಘಟನೆಯಾದ ಆಫೀಸು, ರೇಡಿಯೋ, ಟಿ.ವಿ. ರೈಲ್ವೇ, ಬಸ್ಸು ಸಾರಿಗೆ, ಮತ್ತು ಎಲ್ಲ ದೂರ ಸಂಪರ್ಕ ಸಾಧನೆಗಳು ಸೇರಿದ್ದವು ಎನ್ನುವಾಗ ಈ ಘಟನೆಯ ಕ್ರಾಂತಿಕಾರಿ ಮಹತ್ವ ಅರಿವಾಗುತ್ತದೆ. ಚಳುವಳಿಯ ಘೋಷಣೆ "40 ಗಂಟೆ-60 ವರ್ಷ-1000 ಫ್ರಾಂಕುಗಳು (ವಾರದ ಕೆಲಸದ ಗಂಟೆ-ಪೆನ್‌ಶನ್ ದೊರೆಯುವ ವರ್ಷ, ಕನಿಷ್ಟ ವೇತನ) ಇದರಿಂದ ಆರಂಭವಾಯಿತು. ಚಳುವಳಿಯ ಸ್ವರೂಪ ಕಂಡು ಭಯಭೀತ ಬಂಡವಾಳಶಾಹಿ ಕೆಳ ವೇತನ ಶ್ರೇಣಿಗಳಿಗೆ ಶೇಕಡಾ 35 ರಷ್ಟು ಹಾಗೂ ಸರಾಸರಿ ಸುಮಾರು ಶೇಕಡಾ 25 ರಷ್ಟು ವೇತನ ಹೆಚ್ಚಳಗಳನ್ನು ಕೊಟ್ಟಾಗ ಕಾರ್ಮಿಕರು ಮ್ಯಾನೇಜ್‌ಮೆಂಟ್‌ಗಳಲ್ಲಿ ಪೂರ್ಣ ಭಾಗವಹಿಸುವಿಕೆ ಬೇಡಿಕೆ ಮುಂದಿಟ್ಟು ಚಳುವಳಿ ಮುಂದುವರಿಸಿದರು. ಮೇ 25 ರಂದು ಕಾರ್ಮಿಕರು ದೇಶದ ಅಧ್ಯಕ್ಷ ಡಿಗಾಲೆಯ ರಾಜೀನಾಮೆ ಮತ್ತು ಕಮ್ಯುನಿಸ್ಟರೂ ಇರುವ ತಾತ್ಕಾಲಿಕ ರಚನೆಯ ಘೋಷಣೆ ಗಳೊಂದಿಗೆ ನೇರ ರಾಜಕೀಯ ಕಾರ್ಯಾಚರಣೆ ಆರಂಭಿಸಿದರು. ಕೆಲವು ನಗರಗಳಲ್ಲಿ ಕಾರ್ಮಿಕರ ಜಂಟಿ ಸಮಿತಿಗಳು ವಿದ್ಯಾರ್ಥಿ ಕಾರ್ಮಿಕ ಜಂಟಿ ಸಮಿತಿಗಳು ಆಡಳಿತ ಸಹ ನಡೆಸಿದವು. ಇಡಿಯ ಫ್ರಾನ್ಸ್ ಗುತ್ತೇದಾರಿ ಬಂಡವಾಳಶಾಹಿ ಕಪಿಮುಷ್ಟಿ ಮುರಿದು ಜೀವನದ ಉತ್ಸವ ಆಚರಿಸಿತು.

ಇಡೀ ಘಟನಾವಳಿಯನ್ನು ವಿದ್ಯಾರ್ಥಿಗಳು ಆರಂಭಿಸಿದರೂ ಕಾರ್ಮಿಕರ ಬಲ ಪ್ರದರ್ಶನದಿಂದಲೇ ಪ್ರಭುತ್ವ ಗಾಬರಿಗೊಂಡದ್ದು. ಡಿಗಾಲೆ ಫ್ರಾನ್ಸ್ ಬಿಟ್ಟು ಹೋದದ್ದು, ಕ್ರಾಂತಿಕಾರಿ ಬಿಕ್ಕಟ್ಟಿನ ಗಾಢತೆಯ ಸಂಕೇತ.

ಈ ಬಿಕ್ಕಟ್ಟಿನುದ್ದಕ್ಕೂ ವಿದ್ಯಾರ್ಥಿ ನಾಯಕರು ಹೆಚ್ಚಾಗಿ ನವವಾಮಪಂಥವಾದಿ ಎಂದು ಈಗ ಕರೆಯಲ್ಪಡುವ ಮಾವೋವಾದಿಗಳು ಟ್ರಾಟ್‌ಸ್ಕಿವಾದಿಗಳು ಅಸ್ತಿತ್ವವಾದಿಗಳು, ಅರಾಜಕತಾವಾದಿಗಳು ಮುಂತಾದ ಸೈದ್ಧಾಂತಿಕ ಬಣ್ಣಗಳಿಗೆ ಸೇರಿದ್ದು ಬಂಡವಾಳಶಾಹಿ ವಿರುದ್ಧ ರೊಚ್ಚಿಗೆದ್ದ ವಿದ್ಯಾರ್ಥಿಗಳನ್ನು ಕಾರ್ಮಿಕರನ್ನು ಹಲವು ದುಸ್ಸಾಹಸಿ ಕೆಲಸಗಳಿಗೆ ಹಚ್ಚಲು ಪ್ರಯತ್ನಿಸಿದರು: ಕಾರ್ಮಿಕರು ಕಾರ್ಖಾನೆಗಳನ್ನು ವಶಪಡಿಸಿಕೊಂಡಾಗ ಯಂತ್ರಗಳನ್ನು ನಾಶ ಪಡಿಸಲು, ಪೋಲೀಸು ಇತ್ಯಾದಿ ಸರ್ಕಾರದ ಪ್ರತೀಕಗಳ ಮೇಲೆ ದಾಳಿ ಸಶಸ್ತ್ರ ದಂಗೆಗೆ ಕರೆ ಇತ್ಯಾದಿ ಕೆಲವು ಉದಾಹರಣೆಗಳು ಡಿಗಾಲೆಗಿಂತ ಹೆಚ್ಚಾಗಿ ಈ ನವವಾಮ ಪಂಥಿಗಳಿಂದ ಕಮ್ಯುನಿಸ್ಟರು ಮತ್ತು ಕಮ್ಯುನಿಸ್ಟ್ ಟ್ರೇಡ್ ಯೂನಿಯನ್ ನಾಯಕತ್ವದ ಬಹಿರಂಗ ಖಂಡನೆ ಸಾಕಷ್ಟು ಗಲಿಬಿಲಿ ಉಂಟುಮಾಡಿತು. ಪಾರ್ಲಿಮೆಂಟರಿ ಮರುಚುನಾವಣೆಗಳ ಪ್ರಚಾರದ ಸಮಯದಲ್ಲಿ ಡಿಗಾಲೆ ಪಕ್ಷ ಈ ದುಸ್ಸಾಹಸಿ ಕಾರ್ಯಗಳನ್ನು ಕಮ್ಯುನಿಸ್ಟರ ವಿರುದ್ಧ ಜನರಲ್ಲಿ ಭಯಹುಟ್ಟಿಸಲು ಅಪಪ್ರಚಾರ ಮಾಡಲು ಸಂಪೂರ್ಣವಾಗಿ ಉಪಯೋಗಿಸಿಕೊಂಡಿತು. ಎಡಪಕ್ಷಗಳು ಗೆದ್ದರೆ ಅಂತರಿಕ ಯುದ್ಧ ಖಂಡಿತ ಎಂದು ಇವರು ಅಪಪ್ರಚಾರ ಮಾಡಿದರು.

ಇಂತಹ ಕ್ರಾಂತಿಕಾರಿ ಭರವಸೆ ಹುಟ್ಟಿಸಿದ ಘಟನೆಗಳ ನಂತರ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಎಡಪಕ್ಷಗಳು ಸೋತಿದ್ದು ಡಿಗಾಲೆ ಪಕ್ಷ ಭಾರೀ ಬಹುಮತದಿಂದ ವಾಪಸು ಬಂದಿದ್ದು ವಿಪರ್ಯಾಸಕರ.

ನವ ವಾಮಪಂಥ ಮತ್ತು ಮೇ 68

ಮೇ 68 ಸೃಷ್ಟಿಸಿದ ಕ್ರಾಂತಿಕಾರಿ ಬಿಕ್ಕಟ್ಟು

»»»➔

ಕೆಂಪು ಮೇಯ ಘಟನಾವಳಿಗಳು

ಮೇ1 ಶಾಂತಿಯುತ ಮೇ ದಿನಾಚರಣೆ

ಮೇ 2 ಪ್ಯಾರಿಸ್ಸಿನ ನಾಂಟೆರೆ ಎಂಬಲ್ಲಿ ಡೆನಿಯಲ್ ಕೂಹನ್-ಬೆಂಡಿತ್ ಎಂಬ ವಿದ್ಯಾರ್ಥಿಯ ನಾಯಕತ್ವದಲ್ಲಿ ಗಲಭೆಗಳು ಶಿಕ್ಷಣ ಸಂಸ್ಥೆಗಳು ಬಂದ್

ಮೇ 3 ಪ್ಯಾರಿಸ್ಸಿನ ಕೇಂದ್ರವಾದ ಲ್ಯಾಟಿನ್ ಕ್ವಾರ್ಟರ್‌ನಲ್ಲಿರುವ (ಸೋರ್ಬೋನ್ ಎಂದೂ ಕರೆಯಲಾಗುತ್ತದೆ) ಪ್ಯಾರಿಸ್ ವಿಶ್ವ ವಿದ್ಯಾಲಯದಲ್ಲಿ ವಿದ್ಯಾರ್ಥಿ ಪ್ರದರ್ಶನ; ಹಲವು ವರ್ಷಗಳ ನಂತರ ವಿಶ್ವವಿದ್ಯಾಲಯಕ್ಕೆ ಪೋಲೀಸ್ ಪ್ರವೇಶ, ವಿದ್ಯಾರ್ಥಿ-ಪೋಲೀಸ್‌ಗಳ ನಡುವೆ ಸಂಘರ್ಷ(ಹಲವು ಗಂಟೆಗಳ ವರೆಗೆ) ಹಲವು ವಿದ್ಯಾರ್ಥಿಗಳ ಬಂಧನ, ಸೋರ್ಬೋನ್‌ನಲ್ಲಿ ಎಲ್ಲಾ ತರಗತಿಗಳು ರದ್ದು.

ಮೇ 3 ರಿಂದ 10 ರ ವರೆಗೆ ಪ್ರತಿದಿನ ವಿದ್ಯಾರ್ಥಿ- ಪೋಲೀಸ್ ಘರ್ಷಣೆ ಮುಂದುವರಿಕೆ; ತರಗತಿಗಳನ್ನು ಪುನಃ ಆರಂಭಿಸಲು ಮತ್ತು ಸಂಧಾನದ ಪ್ರಯತ್ನಗಳು ವಿಫಲ; ಸರಕಾರದ ಹಠಮಾರಿತನ.

ಮೇ 10 ಪರಿಸ್ಥಿತಿ ವಿಷಮ; ಸಂಜೆಯ ಹೊತ್ತಿಗೆ ವಿಶ್ವವಿದ್ಯಾಲಯದ ಸುತ್ತ ಸುಮಾರು 60 ರಸ್ತೆ ತಡೆ (Barricade) ಗಳ ನಿರ್ಮಾಣ; ಕಲ್ಲು, ಮೊಲೋಟೋವ್ ಕ್ಷಿಪಣಿಗಳೊಂದಿಗೆ ವಿದ್ಯಾರ್ಥಿಗಳು ಘರ್ಷಣೆಗೆ ಸಜ್ಜು; 2 ಗಂಟೆ ರಾತ್ರಿಯಲ್ಲಿ ಪೋಲೀಸರಿಂದ ವಿದ್ಯಾರ್ಥಿಗಳ ಮೇಲೆ ಧಾಳಿ; 5 ಗಂಟೆಗಳ ಕಾಲ ಹೋರಾಟ' ರಕ್ತಪಾತ

ಮೇ 11 ವಿದ್ಯಾರ್ಥಿಗಳ ಮೇಲೆ ಪೋಲೀಸ್ ಧಾಳಿಯ ಬಗ್ಗೆ ಜನರಲ್ಲಿ ರೊಚ್ಚು; ವಿದ್ಯಾರ್ಥಿಗಳ ಬಗ್ಗೆ ಸಹಾನುಭೂತಿ; ವಿದ್ಯಾರ್ಥಿಗಳ ಬೇಡಿಕೆಯನ್ನು ಸಮರ್ಥಿಸಿ ಮೇ 13 ರಂದು 24 ಗಂಟೆ ಸಾರ್ವತ್ರಿಕ ಮುಷ್ಕರಕ್ಕೆ ಕಮ್ಯುನಿಸ್ಟ್ ಕಾರ್ಮಿಕ ಸಂಘಟನೆ CGT ಕರೆ.

ಮೇ 13 ಪ್ಯಾರಿಸು ಮತ್ತು ಇತರ ನಗರ ಕೇಂದ್ರಗಳಲ್ಲಿ ಭಾರಿ ಸಾರ್ವತ್ರಿಕ ಮುಷ್ಕರ; ಪ್ಯಾರಿಸಿನಲ್ಲಿ ಒಂದು ಕೊನೆಯಿಂದ ಇನ್ನೊಂದು ಕೊನೆವರೆಗೆ ನಡೆದ ಬಾರಿ ರ್‍ಯಾಲಿ ಪ್ರದರ್ಶನ(10 ಗಂಟೆ ಬೆಳಗ್ಗಿನಿಂದ ರಾತ್ರಿ 8 ರವರೆಗೆ) ಫ್ರೆಂಚ್ ಸರ್ಕಾರಿ ಭವನಗಳಿಗೆ ನುಗ್ಗಲು ಪ್ರದರ್ಶನಕಾರರಿಗೆ ಕೆಲವು ವಿದ್ಯಾರ್ಥಿ ನಾಯಕರ ಮನವಿ ಮತ್ತು ಅದರ ತಿರಸ್ಕಾರ.

ಮೇ 14 ಸೋರ್ಬೋನ್‌ನಿಂದ ಪೋಲೀಸು ತೆರವು; ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಕೈಯಲ್ಲಿ. 'ಮುಕ್ತ' ವಿಶ್ವವಿದ್ಯಾಲಯದ ಘೋಷಣೆ, ರಾತ್ರಿ ಹಗಲು ಚರ್ಚೆ, ಹಾಡುಗಳ 'ಉತ್ಸವ' 'ಓಡಿಯನ್ ಸಿನೆಮಾ' ವಿದ್ಯಾರ್ಥಿಗಳ ಕೈಯಲ್ಲಿ; ಮುಷ್ಕರ ನಿರತ ಕಾರ್ಮಿಕರ ಜತೆ ಸಂಪರ್ಕಕ್ಕೆ ವಿದ್ಯಾರ್ಥಿಗಳ ಪ್ರಯತ್ನ; ನಾಂಟೆಸ್‌ನಲ್ಲಿ ಸುದ್‌ಏವಿಯೇಷನ್ ಕಾರ್ಖಾನೆ ಕಾರ್ಮಿಕರ ಹತೋಟಿಯಲ್ಲಿ.

ಮೇ 14 ರಿಂದ ಮೇ 20 ರವರೆಗೆ 24ಗಂಟೆ ಮುಷ್ಕರದ ಮುಂದುವರಿಕೆ, ಹೊಸ ಬೇಡಿಕೆಗಳೊಂದಿಗೆ; ನಾಂಟೆಸ್‌ನಲ್ಲಿ ಆರಂಭವಾದ ಕಾರ್ಖಾನೆಯನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವ ಚಳುವಳಿ ಇತರ ಕಾರ್ಖಾನೆಗಳಿಗೆ ವಿಸ್ತರಣೆ; ರೇಡಿಯೋ, ಟಿ.ವಿ. ಸಾರಿಗೆ ಕಾರ್ಮಿಕರೂ ಇದರಲ್ಲಿ ಪಾಲು; ಮೇ 20 ರ ಹೊತ್ತಿಗೆ ಸುಮಾರು 1 ಕೋಟಿ ಕಾರ್ಮಿಕರು ತಮ್ಮ ಕೆಲಸದ ಸ್ಥಳಗಳನ್ನು ಹತೋಟಿಗೆ ತೆಗೆದು ಕೊಂಡರು; ಫ್ರಾನ್ಸಿನ ಜನಜೀವನ ಅಸ್ತವ್ಯಸ್ತ; ಸರ್ಕಾರಿ ವಲಯಗಳಲ್ಲಿ ಗಾಬರಿ; ರುಮೇನಿಯ ಭೇಟಿಗೆ ಹೋಗಿದ್ದ ಅಧ್ಯಕ್ಷ ಡಿಗಾಲೆ ಮೇ 18 ಕ್ಕೆ ವಾಪಸ್ಸು.

ಮೇ 24 ಅಧ್ಯಕ್ಷ ಡಿಗಾಲೆ ಟಿ.ವಿ. ಭಾಷಣ; ಫ್ರೆಂಚ್ ಪುನರುತ್ಥಾನದ ಯೋಜನೆಗೆ ಮತಸಂಗ್ರಹದ ಘೋಷಣೆ; 'ಮತ ಸಂಗ್ರಹ'ದಲ್ಲಿ ಸೋತರೆ ರಾಜೀನಾಮೆ ಎಂದು ಡಿಗಾಲೆ ಪ್ರಕಟಣೆ; ಕಾರ್ಮಿಕರೊಂದಿಗೆ ಸಂಧಾನ ಪ್ರಯತ್ನ, ಭಾರಿ ವೇತನ ಹೆಚ್ಚಳದ ಘೋಷಣೆ, ಕಾರ್ಮಿಕರ ತಿರಸ್ಕಾರ

ಮೇ 28 ಸೋಶಲಿಸ್ಟ್ ನಾಯಕ ಮಿತ್ತೆರಾಂರಿಂದ ಕಮ್ಯುನಿಸ್ಟರೂ ಸೇರಿದಂತೆ ತಾತ್ಕಾಲಿಕ ರಾಷ್ಟ್ರೀಯ ಸರಕಾರದ ರಚನೆಗೆ ಕರೆ.

ಮೇ 29 ಕಮ್ಯುನಿಸ್ಟರೂ ಇರುವ 'ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ' ರಚನೆಗೆ ಬೆಂಬಲಾರ್ಥವಾಗಿ ಪ್ಯಾರೀಸಿನಲ್ಲಿ ಕಮ್ಯುನಿಸ್ಟ್ ಕಾರ್ಮಿಕ ಸಂಘಟನೆ CGT ಯಿಂದ ಭಾರಿ ಮೆರವಣಿಗೆ; 10 ಲಕ್ಷ ಕಾರ್ಮಿಕರು ಮೆರವಣಿಗೆ ಯಲ್ಲಿ ಅಧ್ಯಕ್ಷ ಡಿಗಾಲೆ ಪ್ಯಾರಿಸಿನಿಂದ ನಾಪತ್ತೆ; ಪ. ಜರ್ಮನಿಯ ಫ್ರೆಂಚ್ ಪಡೆಗಳ ಡಾಕ್ಯಾದಲ್ಲಿ ಪತ್ತೆ; ಸರ್ಕಾರದಲ್ಲಿ ಭಾರಿ ಬಿಕ್ಕಟ್ಟು; ಅಂತರಿಕ ಯುದ್ಧದ ಆತಂಕ.

ಮೇ 30 ಡಿಗಾಲೆ ಪ್ಯಾರೀಸಿಗೆ ವಾಪಸ್, ಟಿ.ವಿ. ಭಾಷಣದಲ್ಲಿ ಪಾರ್ಲಿಮೆಂಟು ವಿಸರ್ಜನೆ ಮತ್ತು ಮಧ್ಯಂತರ ಚುನಾವಣೆಗಳ ಘೋಷಣೆ; ಕಮ್ಯುನಿಸ್ಟರ ಮೇಲೆ 'ದಂಗೆ' ಪಿತೂರಿಯ ಆರೋಪ; ಸರ್ಕಾರದ ಬೆಂಬಲಾರ್ಥವಾಗಿ ಡಿಗಾಲೆ ಪಕ್ಷದ ರ್‍ಯಾಲಿ ಪ್ಯಾರಿಸಿನಲ್ಲಿ.

ಜೂನ್ ಮರು ಚುನಾವಣೆಗೆ ಬಿರುಸಿನ ಪ್ರಚಾರ; ನವ ವಾಮ ಸಂಘದ ವಿದ್ಯಾರ್ಥಿ ನಾಯಕರಿಂದ ದುಸ್ಸಾಹಸಿ ಕಾರ್ಯಾಚರಣೆಗಳು;

ಜೂನ್ 23 ರಿಂದ 30 ಪಾರ್ಲಿಮೆಂಟರಿ ಚುನಾವಣೆಗಳು; ಡಿಗಾಲೆ ಪಕ್ಷಕ್ಕೆ ಭಾರೀ ಬಹುಮತ-485 ರಲ್ಲಿ 358 ಸೀಟುಗಳು; 10 ಲಕ್ಷಕ್ಕೂ ಹೆಚ್ಚಿನ ಮತ ಮತ್ತು 97 ಹೆಚ್ಚಿನ ಸೀಟು ಡಿಗಾಲೆ ಪಕ್ಷಕ್ಕೆ;ಎಡರಂಗಕ್ಕೆ ಸೋಲು -ಒಟ್ಟಾರೆ 61 ಸೀಟುಗಳ ನಷ್ಟ; ಕಮ್ಯುನಿಸ್ಟ್ ಪಕ್ಷಕ್ಕೆ ಮತಗಳು 22.5 ಶೇಕಡಾದಿಂದ 20 ಶೇಕಡಾಕ್ಕೆ ಇಳಿತ, ಸೀಟುಗಳು 73 ರಿಂದ 34 ಕ್ಕೆ ಇಳಿತ.

ಮೇ 68 ರ ಹೋರಾಟದಲ್ಲಿ ಯುವಜನರ ಕೆಲವು ಘೋಷಣೆಗಳು

- *ಇಲ್ಲಿ ನಿಷೇಧಿಸುವುದನ್ನು ನಿಷೇಧಿಸಲಾಗಿದೆ*
- *ಡಿಗಾಲೆವಾದದಲ್ಲಿ ಜೀವನ ತಿರುವು-ಮುರುವಾಗಿದೆ*
- *ವೈಜವಾಗಿರಿ-ಅಸಾಧ್ಯವಾದುದನ್ನು ಕೇಳಿ!*
- *ಪ್ರತಿಯೊಬ್ಬ ನಮ್ಮೊಳಗೂ ಒಬ್ಬ ಪೋಲೀಸು ಇರುತ್ತಾನೆ - ಅವನನ್ನು ಕೊಲ್ಲಬೇಕು.*
- *ಕೊನೆಯ ಬಂಡವಾಳಶಾಹಿಯಿಂದ ಕೊನೆಯ ನೌಕರಶಾಹಿಯನ್ನು ನೇತುಹಾಕುವವರೆಗೆ ಮಾನವ ಜನಾಂಗ ಮುಕ್ತವಾಗುವುದಿಲ್ಲ.*
- *ಕ್ರಿಯೆ ಪ್ರತಿಕ್ರಿಯೆಯಾಗಬಾರದು, ಸೃಷ್ಟಿಯಾಗಬೇಕು.*
- *ಮಾಲಕರನ್ನು ಬದಲಾಯಿಸಬೇಡಿ, ಜೀವನದ ಮೇಲೆ ಮಾಲಕತ್ವವನ್ನು ಬದಲಾಯಿಸಿ*
- *ಕನಸುಗಳು ಸರ್ವಶಕ್ತವಾಗಲಿ*
- *ನಾನು ನನ್ನ ಕನಸುಗಳನ್ನು ನನಸೆಂದೇ ಇಟ್ಟುಕೊಳ್ಳುತ್ತೇನೆ. ಯಾಕೆಂದರೆ ನನ್ನ ಕನಸುಗಳು ನನಸಾಗಬಲ್ಲವು ಎಂದು ನನಗೆ ನಂಬಿಕೆ ಇದೆ.*

ಮತ್ತು ಕೊನೆಯಲ್ಲಿ ವಿಫಲತೆ ಎರಡನ್ನೂ ಅರ್ಥೈಸುವುದು ಮಹತ್ವದ್ದು. ಮಾರ್ಕ್ಸ್‌ವಾದಿ ಲೆನಿನ್‌ವಾದಿ ವೈಜ್ಞಾನಿಕ ಸಿದ್ಧಾಂತಕ್ಕೆ ಬದಲಿ ಸಿದ್ಧಾಂತವೆಂದು ತಮ್ಮನ್ನು ತಾವೇ ಕರೆದುಕೊಳ್ಳುವ ಹಲವು ಬೂರ್ಜ್ವಾ ಸೈದ್ಧಾಂತಿಕ ಬಣಗಳು ತಮ್ಮ ಮೂಗಿನ ನೇರಕ್ಕೆ ಮೇ 68 ನ್ನು ವಿಶ್ಲೇಷಿಸುತ್ತಿದ್ದು ಅವರ ವಾದಗಳನ್ನು ವಿಮರ್ಶಿಸುವುದು ಅತಿ ಮುಖ್ಯ. ನವವಾಮಪಂಥ ವಾದಿಗಳು, ಅಸ್ತಿತ್ವವಾದಿಗಳು ಮೇ 68 ರ ಚಳುವಳಿಯಲ್ಲಿ ಭಾಗವಹಿಸಿದ್ದರು ಎನ್ನುವುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ಆ ಮೂಲಕ ಮೇ 68 ಕ್ಕೆ ತಮ್ಮ ವಾದವೇ ಸ್ಫೂರ್ತಿ ಎಂದು ಹೇಳಿಕೊಳ್ಳುವುದೂ ಇದೆ. ಈ ಎಲ್ಲಾ ವಾದಗಳಿಗೂ ಸಮಾನವಾದ ಅಂಶವೆಂದರೆ ಅಭಿವೃದ್ಧಿ ಬಂಡವಾಳ ಶಾಹಿ ಸಮಾಜದಲ್ಲಿ ಕಾರ್ಮಿಕ ವರ್ಗದ ನಾಯಕತ್ವದ ಮತ್ತು ಅದರ ಮಂಚೂಣಿಯಾದ ಕಮ್ಯುನಿಸ್ಟ್ ಪಕ್ಷದ ನಾಯಕತ್ವವನ್ನು ಅಲ್ಲ ಗಳೆಯುವುದು.

ಮಾವೋವಾದಿಗಳು ಕಿಡಿಯೊಂದನ್ನು ಹತ್ತಿಸಿದರೆ ಕ್ರಾಂತಿಕಾರಿ ವರ್ಗಗಳು ತಮ್ಮಿಂದ ತಾವೇ ಸಜ್ಜಾಗಿ ಕ್ರಾಂತಿ ನಡೆಸುತ್ತವೆ, ಸಂಘಟನೆ ಪಕ್ಷದ ಅಗತ್ಯವಿಲ್ಲ ಎನ್ನುವ ವಾದವನ್ನು ಮೇ 68ರ ಘಟನೆಗಳು ಪುಷ್ಟೀಕರಿಸುತ್ತವೆ ಎನ್ನುತ್ತಾರೆ. ಕೆಲವು ವಿದ್ಯಾರ್ಥಿಗಳು ಹತ್ತಿಸಿದ ಕಿಡಿ ಕ್ರಾಂತಿಗೆ ಕಾರಣವಾಯಿತು ಎಂದು ಅವರ ಅಂಬೋಣ. ಆದರೆ ವಿದ್ಯಾರ್ಥಿಗಳ ಚಳುವಳಿಗೆ ಬೆಂಬಲಾರ್ಥವಾಗಿ ಕಾರ್ಮಿಕರು ನಡೆಸಿದ ಮುಷ್ಕರದ ಹಿಂದೆ ಸುಸಂಘಟಿತ ಟ್ರೇಡ್ ಯೂನಿಯನ್‌ಗಳು, ಕಮ್ಯುನಿಸ್ಟ್ ಪಕ್ಷದ ಪ್ರಜ್ಞಾಪೂರ್ವಕ ನಿರ್ಧಾರ ಇತ್ತು ಎಂಬುದನ್ನು ಮರೆಯುತ್ತಾರೆ. ಅಲ್ಲದೆ ಈ ಕ್ರಾಂತಿಯ ಕಿಡಿ ಬೆಳೆದು ಅಂತಿಮವಾಗಿ ಪ್ರಭುತ್ವವನ್ನು ಕ್ರಾಂತಿಕಾರಿ ರೀತಿಯಲ್ಲಿ ವಶಪಡಿಸಿಕೊಳ್ಳುವ ಕೆಲಸ ಈಡೇರಲಿಲ್ಲ ಎಂಬುದು ಪ್ರಭುತ್ವ ಮತ್ತು ಕ್ರಾಂತಿಯ ಸಮಸ್ಯೆ ಅಷ್ಟು ನೇರವಾದದ್ದೂ ಅಲ್ಲ, ಸರಳವೂ ಅಲ್ಲ ಎಂಬುದನ್ನು ತೋರಿಸುತ್ತದೆ.

ಕಮ್ಯುನಿಸ್ಟ್ ಪಕ್ಷವನ್ನು ಉಲ್ಲಂಘಿಸಿ ಕಾರ್ಮಿಕರು ಕಾರ್ಖಾನೆಗಳನ್ನು ವಶಪಡಿಸಿ ಕೊಂಡಿದ್ದರಿಂದ ಮೇ 68 ಕ್ರಾಂತಿಕಾರಿ ಸಾಧ್ಯತೆಗಳಿಗೆಡೆಕೊಟ್ಟಿತು, ಕೊನೆಗೆ ಕಮ್ಯುನಿಸ್ಟರು ಕಾರ್ಮಿಕರನ್ನು ಸಮಾಧಾನ ಪಡಿಸಿ ಸಶಸ್ತ್ರ ದಂಗೆಯ ಬದಲು ಮರುಚುನಾವಣೆಯ ರಾಜಕೀಯದ ಮೂಲಕ ಕಾರ್ಮಿಕರ ಕ್ರಾಂತಿಕಾರಿ ಸಾಧ್ಯತೆಯನ್ನು ಹತ್ತಿಕ್ಕಿದರು ಎಂದು ಟ್ರಾಟ್‌ಸ್ಕಿವಾದಿಗಳು ಮೇ 68 ನ್ನು ಅರ್ಥೈಸುತ್ತಾರೆ. ವಿದ್ಯಾರ್ಥಿದಂಗೆಗಳು ಕ್ರಾಂತಿಕಾರಿ ಸಾಧ್ಯತೆಗಳನ್ನು ಅರಿತು ಅದಕ್ಕೆ ಕೆಲವೇ ದಿನಗಳಲ್ಲಿ ಸಾರ್ವತ್ರಿಕ ಮುಷ್ಕರ ನಡೆಸಿದ್ದು ಇದನ್ನು ಮುಂದುವರೆಸಿ ಕಾರ್ಖಾನೆಗಳನ್ನು ಹತೋಟಿಗೆ ತೆಗೆದು ಕೊಂಡದ್ದು ಶಿಸ್ತುಬದ್ಧ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಿಂದ ಮಾತ್ರ ಸಾಧ್ಯವಾಯಿತು ಎಂಬುದನ್ನು ಮರೆಯಬಾರದು. ತಮ್ಮ ಸೈದ್ಧಾಂತಿಕ ವಿಫಲತೆಯನ್ನು ಕಮ್ಯುನಿಸ್ಟರ ಮೇಲೆ ಗೂಬೆ ಕೂರಿಸುವ ಮೂಲಕ ಮುಚ್ಚುವ ಪ್ರಯತ್ನ ಟ್ರಾಟ್‌ಸ್ಕಿವಾದಿಗಳದ್ದು.

ಇನ್ನು ಮಾರ್ಕೂಸ್ ಮತ್ತು ಕೆಲವು ಅರಾಜಕತಾವಾದಿಗಳು, ಅಸ್ತಿತ್ವವಾದಿಗಳು ಸಮಾಜದ 'ಸಂಘಟನೆ'ಯ ಹೊರಗಿರುವ ವಿದ್ಯಾರ್ಥಿ-ಬುದ್ಧಿಜೀವಿಗಳ ವರ್ಗ ಮಾತ್ರ 'ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಸಮಾಜವೊಂದರಲ್ಲಿ ಕ್ರಾಂತಿಗೆ ನಾಯಕತ್ವ ಕೊಡಬಲ್ಲದು ಎಂಬ ವಾದಕ್ಕೆ ಮೇ 68 ಪುಷ್ಟಿ ನೀಡುತ್ತದೆ ಎನ್ನುತ್ತಾರೆ. ಮೇ 68 ರಲ್ಲಿ ಕಾರ್ಮಿಕ ವರ್ಗದ ಪಾತ್ರದ ವಾಸ್ತವದ ಬಗ್ಗೆ ಪೂರ್ಣವಾಗಿ ಕುರುಡಾಗಿದ್ದವರು ಮಾತ್ರ ಇದನ್ನು ಹೇಳುವುದು ಸಾಧ್ಯ. ಇನ್ನೂ ಕೆಲವರು 'ಹೊಸ' ಮತ್ತು 'ಹಳೆ' ಕಾರ್ಮಿಕ ವರ್ಗದ ಅವಿಷ್ಕಾರ ಮಾಡಿದ್ದಾರೆ. ಮೇ 68 ರ ಫ್ರಾನ್ಸಿನಲ್ಲಿ 'ಹಳೆ' ಕಾರ್ಮಿಕ ವರ್ಗಕ್ಕಿಂತ 'ತಾಂತ್ರಿಕ-ಬುದ್ಧಿಜೀವಿಗಳ 'ಹೊಸ' ಕಾರ್ಮಿಕ ವರ್ಗ ಕಾರ್ಖಾನೆ ವಶಪಡಿಸಿಕೊಳ್ಳುವ ಕ್ರಾಂತಿಕಾರಿ ಕಾರ್ಯಾಚರಣೆಗಳನ್ನು ರೂಪಿಸಿತು, ಇದು ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿಲ್ಲದ ಕಾರ್ಮಿಕ ವರ್ಗ ಎಂದು ಅವರ 'ಕಾಣ್ಕೆ'. ಇದು ಮೇ 68 ರ ನಿಜ ಸಂಗತಿಗೆ ದೂರವಾದದ್ದು ಹಾಗೂ ಕಾರ್ಮಿಕ ವರ್ಗವನ್ನು ಒಡೆಯುವ ಸಿದ್ಧಾಂತ ಎಂದು ಹೇಳಬಹುದು.

ಇನ್ನೂ ಕೆಲವು ಅಸ್ತಿತ್ವವಾದಿಗಳು ಮೇ 68 ರಾಜಕೀಯ ಕ್ರಾಂತಿಯಲ್ಲದಿದ್ದರೂ, 'ಸಾಂಸ್ಕೃತಿಕ ಕ್ರಾಂತಿ' ಎಂದೋ, ಪ್ರಭುತ್ವ ವಹಿಸಿಕೊಳ್ಳದೆ ಮೇ 68 ರಲ್ಲಿ ಸಾಮಾಜಿಕ ಸಂಬಂಧದಲ್ಲಿ 'ಕ್ರಾಂತಿ' ಸಾಧ್ಯವಾಯಿತು ಎಂದೋ ಅರ್ಥೈಸುತ್ತಾರೆ.

ಆದರೆ ನಿಜಸಂಗತಿ ಎಂದರೆ ಮೇ 68 ರ ಕೆಲವು ವಾರಗಳ 'ಕ್ರಾಂತಿಕಾರಿ ಉತ್ಸವ'ದ ನಂತರ ಫ್ರಾನ್ಸ್ ಯಥಾಸ್ಥಿತಿಗೆ ಮರಳಿದೆ. ಇನ್ನೂ ಗುತ್ತೇದಾರಿ ಬಂಡವಾಳಶಾಹಿ ತನ್ನ ಪ್ರಭುತ್ವದ ಮೂಲಕ ಇಡೀ ಸಮಾಜವನ್ನು ತನ್ನ ಕಪಿ ಮುಷ್ಠಿಯಲ್ಲಿ ಇಟ್ಟುಕೊಂಡಿದೆ. ಇದನ್ನು ಯಾವುದೇ ರೀತಿಯಲ್ಲಿ ಕ್ರಾಂತಿ ಎಂದು ಕರೆಯುವುದು ಕಷ್ಟ. ಮೇ 68 ರ ವಿದ್ಯಾರ್ಥಿ-ಯುವ ನಾಯಕರು ಈಗ ಬೂರ್ಜ್ವಾ ವ್ಯವಸ್ಥೆಯಲ್ಲಿ ಸೇರಿಕೊಂಡಿದ್ದಾರೆ. ಹಾಗಿದ್ದರೆ 68 ರ ಫ್ರಾನ್ಸಿನ 'ಕೆಂಪು ಮೇ' ಏನನ್ನೂ ಸಾಧಿಸಲಿಲ್ಲವೆ?

ಕೆಂಪು ಮೇ ಯ ಸೋಲು - ಗೆಲುವುಗಳು

ಅಭಿವೃದ್ಧ ಬಂಡವಾಳಶಾಹಿ ವ್ಯವಸ್ಥೆ ಸುಭದ್ರವಾಗಿದೆ, ಅಭೇದ್ಯವಾಗಿದೆ ಅದನ್ನು ಸೋಲಿಸಲು ಸಾಧ್ಯವಿಲ್ಲ, ಇಲ್ಲಿ ಸಮಾಜವಾದಿ ಕ್ರಾಂತಿಯನ್ನೇ ಏಕೆ, ಕಾರ್ಮಿಕ ವರ್ಗದ ಚಳುವಳಿ ಮತ್ತು ಕಮ್ಯುನಿಸ್ಟ್ ಪಕ್ಷವನ್ನೇ ವ್ಯವಸ್ಥೆಯೊಳಗೆ ಹಿಡಿದಿಡುವ ಶಕ್ತಿ ಇದೆ ಎಂಬ ಹತಾಶೆ, ನಿರಾಶೆಯನ್ನು ಸಾಮಾನ್ಯ ಜನರಲ್ಲಿ ಮಾತ್ರವಲ್ಲ ಪ್ರಗತಿಪರರು, ಮಾರ್ಕ್ಸ್‌ವಾದಿಗಳು, ಕಮ್ಯುನಿಸ್ಟರಲ್ಲೇ ಉಂಟು ಮಾಡಿದ ಪರಿಸ್ಥಿತಿಗೆ 'ಕೆಂಪು ಮೇ' ಬಲವಾದ ಹೊಡೆತ ಕೊಟ್ಟಿತು. ನವ ವಾಮಪಂಥವಾದಿಗಳ ಹುಸಿ ವಾದಗಳನ್ನು ಬಯಲಿಗೆಳೆಯಿತು. ನಮ್ಮಲ್ಲೂ ಲೋಹಿಯ ವಾದಿಗಳು ಇದನ್ನೇ ಹೇಳುತ್ತಿದ್ದಾರೆ.

ಆದರೆ ಮೇ 68 ಇನ್ನೂ ಮುಂದೆ ಹೋಗಲು ಸಾಧ್ಯವಿರಲಿಲ್ಲವೇ? ಮೇ 68 ರ ಕ್ರಾಂತಿಕಾರಿ ಗೆಲುವುಗಳನ್ನು ಮುಂದುವರೆಸಲು ಸಾಧ್ಯವಿರಲಿಲ್ಲವೆ? ಕಮ್ಯುನಿಸ್ಟ್ ಪಕ್ಷ ಎಲ್ಲಾ ಸಾಧ್ಯತೆಗಳನ್ನು ಕಾರ್ಯಗತ ಮಾಡಿತೆ? ಇಂತಹ ಘಟನೆಗಳನ್ನು ಕಮ್ಯುನಿಸ್ಟ್ ಪಕ್ಷ ಮುಂಗಂಡು, ಪೂರ್ವ ತಯಾರಿ ನಡೆಸಿರಲಿಲ್ಲವೇ? ಇವೆಲ್ಲದಕ್ಕೂ ಸರಿಯಾದ ನಿಖರವಾದ ಉತ್ತರ ಹುಡುಕುವುದು ಅಷ್ಟೇನೂ ಸುಲಭದ ಕೆಲಸವಲ್ಲ.

ಪುಟ 7 ಕ್ಕೆ

ಫ್ರಾನ್ಸ್‌ನಲ್ಲಿ ಮೇ 68 ರ ಅನುಭವದ ಬಗ್ಗೆ
ಕಾಂ|| ಬಿ.ಟಿ.ರಣದಿವೆ

(ಯುರೋ ಕಮ್ಯುನಿಸಂ ಮತ್ತು ಪ್ರಭುತ್ವ ಎಂಬ ಆಗಿನ ಸ್ಪಾನಿಷ್ ಕಮ್ಯುನಿಸ್ಟ್ ಪಕ್ಷದ ಮಹಾಕಾರ್ಯದರ್ಶಿ ಸ್ಯಾಂಟಿಯಾಗೋ ಕ್ಯಾರಿಲ್ಲೋರವರ ಪುಸ್ತಕದ ವಿಮರ್ಶೆಯಲ್ಲಿ - ಸೋಶಿಯಲ್ ಸೈಂಟಿಸ್ಟ್ ಅಕ್ಟೋಬರ್ 1978 ಸಂಚಿಕೆಯಿಂದ.)

"ಫ್ರೆಂಚ್ ಸೈನ್ಯದಲ್ಲಿ ಹೊಯ್ದಾಟದ ಬಗ್ಗೆ ಕೊಟ್ಟ ಉದಾಹರಣೆ ಕ್ಯಾರಿಲ್ಲೋ ವಾದವನ್ನು ಇನ್ನಷ್ಟು ದುರ್ಬಲ ಗೊಳಿಸುತ್ತದೆ.

ಈ ಸಂಬಂಧದಲ್ಲಿ ಫ್ರಾನ್ಸ್‌ನಲ್ಲಿ ಮೇ 68 ರ ಘಟನೆಗಳು ಆಸಕ್ತಿ ಹುಟ್ಟಿಸುವ ಅನುಭವ. ಸಾರ್ವಜನಿಕ ವ್ಯವಸ್ಥೆಯ ಪಡೆಗಳು ಸಾಮಾನ್ಯವಾಗಿ ಕ್ರೂರವಾಗಿ ವರ್ತಿಸಿದವು. ಆದರೆ ಹೋರಾಟ ಮುನ್ನಡೆಯುತ್ತಾ ಹೋದಂತೆ ಈ ಪಡೆಗಳು ಜನರ ವಿರುದ್ಧ ದಮನಕಾರಿ ಆಯುಧವಾಗಿ ಉಪಯೋಗಿಸುವುದಕ್ಕೆ ಪ್ರತಿರೋಧ ಒಡ್ಡಿದವು. ಪೋಲೀಸ್ ಯೂನಿಯನ್‌ಗಳು ಜನರ ವಿರುದ್ಧ ದಮನಕಾರಿ ಬಳಕೆಯನ್ನು ಪ್ರತಿಭಟಿಸಿದವು. ತಾವು ಜನರ ವಿರುದ್ಧ ಹೋಗದಿರುವ ಬಯಕೆಯನ್ನು ವ್ಯಕ್ತಪಡಿಸಿದವು. ಸೈನ್ಯದಲ್ಲಿ ಸಹ ಕೆಲವು ಹೊಯ್ದಾಟದ ಕ್ಷಣಗಳು ಕಂಡು ಬಂದವು ಎನ್ನುತ್ತಾರೆ ಕ್ಯಾರಿಲ್ಲೋ.

ಕಾರ್ಮಿಕ ವರ್ಗ ಮೂರು ವಾರಗಳಷ್ಟು ಕಾಲ ಕಾರ್ಖಾನೆಗಳನ್ನು ವಶಪಡಿಸಿಕೊಂಡಿರುವಾಗ, ಸೈನ್ಯ ಮತ್ತು ಪೋಲೀಸ್ ಹೊಯ್ದಾಟದಲ್ಲಿರುವಾಗ ಭಾರಿ ಫಲಿತಾಂಶಗಳು ಬರಬೇಕಿತ್ತು. ಆದರೆ ಎಲ್ಲರಿಗೂ ಗೊತ್ತಿರುವಂತೆ, ಡಿಗಾಲೆ ಪರ ಫಲಿತಾಂಶ ಕೊಟ್ಟ ದರಿದ್ರ ಪಾರ್ಲಿಮೆಂಟರಿ ಚುನಾವಣೆ ಬಿಟ್ಟರೆ ಇನ್ನೇನೂ ಆಗಲಿಲ್ಲ ಯಾಕೆ? ಇದಕ್ಕೆ ಕ್ಯಾರಿಲ್ಲೋ ಉತ್ತರ

"ಬಹುಶಃ ಸ್ಥಾಪಿತ ಶಕ್ತಿಗೆ ಬದಲಿಯಾದ ಶಕ್ತಿ ಇಲ್ಲದಿರುವುದೇ ಈ ಘಟನಾವಳಿಗಳು ಮುಂದೆ ಹೋಗದಿರಲು ಕಾರಣ ಅಂತ ಕಾಣುತ್ತದೆ. ಎಡಶಕ್ತಿಗಳು ಒಗ್ಗಟ್ಟಾಗಿರಲಿಲ್ಲ. ಎಡ ರಾಜಕೀಯ ಶಕ್ತಿಗಳು ಈ ಬಿಕ್ಕಟ್ಟಿನ ಅಗಾಧತೆಯನ್ನು ಊಹಿಸಿರಲಿಲ್ಲ. ಸ್ಥಾಪಿತ ಶಕ್ತಿ ಬಹಳವಾಗಿ ಕುಂದಿದ್ದ ಅಲ್ಪಾವಧಿಯಲ್ಲಿ, ಎಡಶಕ್ತಿಗಳಿಗೆ ತಮ್ಮ ಐಕ್ಯತೆ ಮತ್ತು ಪೂರ್ವ ಸಿದ್ಧತೆಯ ಅಭಾವವನ್ನು ನೀಗಿಸಲು ಸಾಧ್ಯವಾಗಲಿಲ್ಲ ಎಂದು ಹೇಳುವುದು ಅನುಚಿತವಾಗಲಾರದು" ಅಂದರೆ ಕೆಲವೇ ಮಾತುಗಳಲ್ಲಿ ಹೇಳಬೇಕೆಂದರೆ, ಬಿಕ್ಕಟ್ಟಿನ ಗಾಢತೆಯನ್ನೇ ಅಳೆದು, ಅದರಿಂದ ಉದ್ಭವಿಸುವ ಅಂಶಗಳನ್ನು ಉಪಯೋಗಿಸಿಕೊಂಡು ಮುನ್ನಡೆ ಸಾಧಿಸಲು ಬೇಕಾದ ಕ್ರಾಂತಿಕಾರಿ ದೃಢ ನಿರ್ಧಾರ ಮತ್ತು ಸಂಘಟನೆ ಇರಲಿಲ್ಲ. (ಪ್ರಭುತ್ವದ) ದಮನಕಾರಿ ಆಯುಧದಲ್ಲಿ ಹೊಯ್ದಾಟಗಳು ಸ್ಥಾಪಿತ ಪ್ರಭುತ್ವದ ವಿರುದ್ಧ ಕ್ರಾಂತಿಯಾಗಿ ಬೆಳೆಯುವುದು ಸಾಧ್ಯವಾಗಲಿಲ್ಲ. ಕಾರ್ಮಿಕ ವರ್ಗದ ಮುಖ್ಯ ಅಂಗವಾಗಿ ಕಮ್ಯುನಿಸ್ಟ್ ಪಕ್ಷವೇ ಶಾಂತಿಯುತ ಪಾರ್ಲಿಮೆಂಟರಿ ಪಥದಲ್ಲಿ ಮಾತ್ರ ನಂಬಿ ಕೂತಿರುವಾಗ ಇನ್ನೇನು ತಾನೆ ಆಗಲು ಸಾಧ್ಯ?

ಶಿವಸೇನೆ ಹಿಟ್ಲರನ ಹೆಜ್ಜೆ ಗುರುತುಗಳಲ್ಲಿ ಸಾಗುತ್ತಿದೆಯೇ?

ಈ ಪ್ರಶ್ನೆ ಮುಂದಿಟ್ಟವರು ಸಿಪಿಐ(ಎಂ) ಮುಖಂಡರಲ್ಲ, ಎಡಪಂಥೀಯ ಬುದ್ಧಿಜೀವಿಗಳೂ ಅಲ್ಲ, ಒಂದು ದೊಡ್ಡ ಪತ್ರಿಕೆಯ 'ನ್ಯೂಸ್ ಸರ್ವಿಸ್' ಕೇಳಿರುವ ಪ್ರಶ್ನೆಯಿದು.

ಇತ್ತೀಚೆಗೆ ಮುಂಬೈಯಲ್ಲಿ ಪಾಕಿಸ್ತಾನದ ಪ್ರಸಿದ್ಧ ಗಾಯಕ ಗುಲಾಂ ಅಲಿಯ ಸಂಗೀತ ಕಾರ್ಯಕ್ರಮಕ್ಕೆ 'ಶಿವಸೈನಿಕರು' ಅಡ್ಡಿ ಪಡಿಸಿ ನಿಲ್ಲಿಸಿದ್ದು ಬಹಳ ಜನಕ್ಕೆ ಆಶ್ಚರ್ಯ ತಂದಿಲ್ಲ ಎಂದು ಈ ವರದಿ ಹೇಳುತ್ತದೆ. ಏಕೆಂದರೆ ಹಿಟ್ಲರನನ್ನು ಹೊಗಳುವ ಒಂದು ಲೇಖನ ಕಳೆದ ವಾರವಷ್ಟೇ ಶಿವಸೇನೆಯ ಮುಖ ವಾಣಿ 'ಸಾಮ್ನಾ' ದಲ್ಲಿ ಪ್ರಕಟವಾಗಿದೆಯಂತೆ.

ಈ ಲೇಖನದ ಬರೋಡಾದ 'ಹಿಂದೂ ರಾಷ್ಟ್ರೀಯವಾದಿ' ಲೇಖಕ ಹಿಟ್ಲರ್ ಜರ್ಮನ್ ದೇಶವನ್ನು ಕಟ್ಟುವ ಮಹಾನ್ ನಾಯಕ ಎಂದು ಹಾಡಿಹೊಗಳಿದ್ದಾರಂತೆ. 'ಒಂದು ದೇಶದಲ್ಲಿ ಎಲ್ಲರೂ ಮಹಾನರು, ಗುಣವಂತರು ಆಗಿರುವುದಿಲ್ಲ. ಇಟ್ಟಿಗೆ ಇಟ್ಟಿಗೆ ಇಟ್ಟು ದೇಶವನ್ನು ಕಟ್ಟಬೇಕಾಗುತ್ತದೆ. ಹಿಟ್ಲರ್ ಅದನ್ನೇ ಮಾಡಿದ' ಎಂದಿದ್ದಾರಂತೆ ಈ ಲೇಖಕರು. ಜನ ಆತನ ಬಗ್ಗೆ ಏನೇ ಹೇಳಲಿ ಆತನಂತೂ ಒಬ್ಬ ಮಹಾನ್ ವ್ಯಕ್ತಿ ಎನ್ನುವ ಈ ಲೇಖಕರು ಇತ್ತೀಚೆಗೆ ಟೈಮ್ಸ್ ಮ್ಯಾಗಝಿನ್ ಹಿಟ್ಲರ್‌ನನ್ನು ಹೊಗಳಿದೆ ಎಂದಿದ್ದಾರಂತೆ.

ಇವೆಲ್ಲಾ ಎಷ್ಟು ಸುಳ್ಳು ಎಂದು ಎಲ್ಲರಿಗೂ ಗೊತ್ತಿದೆ ಎನ್ನುತ್ತದೆ 'ಟೈಂಸ್ ಆಫ್ ಇಂಡಿಯಾ' ದ ಏಪ್ರಿಲ್ 7ರ ಸಂಚಿಕೆಯಲ್ಲಿ ಪ್ರಕಟವಾದ ಈ ಸುದ್ದಿ ವಿಶ್ಲೇಷಣೆ. ಹಿಟ್ಲರನ ಅಭಿಮಾನಿಗಳಿಗೆ ಇಂತಹ ಸುಳ್ಳುಗಳು ಸಾಮಾನ್ಯ ಎಂದು 'ಐಕ್ಯರಂಗ' ದ ಓದುಗರಿಗಂತೂ ಚೆನ್ನಾಗಿ ತಿಳಿದಿದೆ. ಈ ರೀತಿ ಹಿಟ್ಲರನನ್ನು ಹಾಡಿ ಹೊಗಳಿರುವುದು ಶಿವಸೇನೆ ಮಾತ್ರವಲ್ಲ, 60 ವರ್ಷಗಳ ಹಿಂದೆ ಆರ್.ಎಸ್.ಎಸ್. ನ ಆಗಿನ ಸರಸಂಘ ಚಾಲಕರಾಗಿದ್ದ ಎಂ.ಎಸ್. ಗೋಲ್ವಾಲ್ಕರ್‌ರವರೂ ಇನ್ನೂ 'ಮೇಲಟ್ಟ' ದಲ್ಲಿ ಹೊಗಳಿದ್ದರು ಎಂಬುದು 'ಐಕ್ಯರಂಗ'ದ ಓದುಗರಿಗೆ ತಿಳಿದಿದೆ. ಹಿಟ್ಲರನ ಅಭಿಮಾನಿಯಾದ ಈ ಆರ್.ಎಸ್.ಎಸ್. ನದ್ದೂ ಅವನಂತೆಯೇ ಜನಗಳನ್ನು ತಪ್ಪು ದಾರಿಗೆಳೆಯುವಲ್ಲಿ ಎತ್ತಿದ ಕೈ ಎಂಬುದೂ ಚೆನ್ನಾಗಿ ಗೊತ್ತಿದೆ.

ಆದ್ದರಿಂದ ಇಲ್ಲಿ ಕೇಳಬೇಕಾದ ಪ್ರಶ್ನೆ -"ಹಿಂದುತ್ವ" ವಾದಿಗಳು ಹಿಟ್ಲರನ ಹಾದಿ ಹಿಡಿಯುತ್ತಿದ್ದಾರೆಯೇ ಎಂದು. ಬಾಬ್ರಿ ಮಸೀದಿ ಧ್ವಂಸದ ನಂತರ ಈ ಬಗ್ಗೆ ಸಂಶಯವೇ ಉಳಿದಿಲ್ಲ. ಖ್ಯಾತ ಚಿತ್ರ ಕಲಾವಿದ ಎಂ.ಎಫ್.ಹುಸೇನರ ಮನೆಗೆ ನುಗ್ಗಿ ಅವರ ಕಲಾಕೃತಿಗಳನ್ನು ನಾಶ ಮಾಡಿದ ಭಜರಂಗ ದಳದವರ ಕೃತ್ಯ ಇದನ್ನು ಎತ್ತಿ ತೋರಿದೆ.

ಪ್ರಧಾನ ಮಂತ್ರಿಗಳು ಈ ಎರಡೂ ಕೃತ್ಯಗಳು ಒಪ್ಪತಕ್ಕಂತವಲ್ಲ ಎಂದಿದ್ದಾರಂತೆ. ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಅಪಾದಿತರಾಗಿರುವ ಕೇಂದ್ರ ಗೃಹ ಮಂತ್ರಿಗಳಿಗೂ ಇವು ಒಪ್ಪಿಗೆಯಿಲ್ಲವಂತೆ. ಮಹಾರಾಷ್ಟ್ರದ ಗೃಹಮಂತ್ರಿ ಗೋಪಿನಾಥ್ ಮುಂಡೆಯವರಿಗೂ ಒಪ್ಪಿಗೆಯಿಲ್ಲವಂತೆ. ಪಾಕಿಸ್ತಾನದ ಕಲಾವಿದರಿಗೆ, ಆಟಗಾರರಿಗೆ ತಾನು ರಕ್ಷಣೆ ಒದಗಿಸುವುದಾಗಿ ಅವರು ಹೇಳಿದ್ದಾರೆ. ಆದರೆ ಅವರ ಶಿವಸೇನಾ, ಮುಖ್ಯಮಂತ್ರಿಗಳು ತನ್ನ 'ಸೈನಿಕರ' ಕೃತ್ಯವನ್ನು ಸಮರ್ಥಿಸುತ್ತಾರೆ. ಹಾಗಿದ್ದರೆ 'ರಕ್ಷಣೆ'ಯ ಪ್ರಶ್ನೆಯೆಲ್ಲಿ?

ಇಲ್ಲಿ ಬಿಜೆಪಿಯ ತಾರಾ ನಾಯಕ ಶತ್ರುಘ್ನ ಸಿನ್ಹಾರ ಹೇದದಲ್ಲಿ ಪ್ರಾಮಾಣಿಕತೆ ಯಿದ್ದಂತಿದೆ. 'ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಾಂಸ್ಕೃತಿಕ ಬೆಸುಗೆ ಪ್ರಾಚೀನ ವಾದದ್ದು. ಅದು ರಾಜಕೀಯ ಪಕ್ಷಪಾತ ದಿಂದ ಮುಕ್ತವಾಗಿದೆ. ಆದ್ದರಿಂದಲೇ ತಾನೇ ದಿಲೀಪ್‌ಕುಮಾರ್‌ಗೆ ಅಲ್ಲಿಯ ಅತ್ಯುನ್ನತ ನಾಗರೀಕ ಪ್ರಶಸ್ತಿ ನೀಡಿದ್ದು? ಪಾಕಿಸ್ತಾನದ ಸರಕಾರ ಮತ್ತು ಜನತೆ ಇಬ್ಬರೂ ನನಗೆ ತುಂಬುಮನದ ಸ್ವಾಗತ ನೀಡಿದ್ದಾರೆ" ಎನ್ನುವ ಅವರ ಮಾತಿನಲ್ಲಿ ಒಬ್ಬ ಬಿಜೆಪಿ ಮುಖಂಡನ ಛಾಯೆ ಕಾಣಿಸುತ್ತಿಲ್ಲ. ಆದರೂ ಅವರಿಗೆ ಅವರಂತ ವರಿಗೆ ಫರ್ನಾಂಡೀಸ್, ಹೆಗ್ಡೆ, ನಾಯ್ದುರಂತವರಿಗೆ ಬಿಜೆಪಿ-ಶಿವಸೇನೆ ಯಂತಹ ಪಕ್ಷಗಳ ನಿಜ ಸ್ವರೂಪದ ಅರಿವು ಈಗಲಾದರೂ ಆಗುತ್ತಿದೆಯೇ ಗೊತ್ತಿಲ್ಲ.

ಸಿಪಿಐ(ಎಂ) ಈ ಬಗ್ಗೆ ಆರಂಭ ದಿಂದಲೂ ದೇಶದ ಎಲ್ಲಾ ಪ್ರಜಾಪ್ರಭುತ್ವ ವಾದಿಗಳನ್ನು, ದೇಶಪ್ರೇಮಿಗಳನ್ನು ಎಚ್ಚರಿ ಸುತ್ತಾ ಬಂದಿದೆ - ಬಿಜೆಪಿ ಕೇವಲ ಇನ್ನೊಂದು ರಾಜಕೀಯ ಪಕ್ಷವಲ್ಲ, ನಮ್ಮ ದೇಶದ ಆಳುವ ವರ್ಗಗಳ ಅತ್ಯಂತ ಬಲ ಪ್ರತಿಗಾಮಿಯಾದ, ಫ್ಯಾಸಿಸ್ಟ್ ಮಾದರಿ ಯನ್ನು ಅನುಸರಿಸ ಹೊರಟಿರುವ ಪಕ್ಷ ಎಂದು. ಫ್ಯಾಸಿಸಂನ್ನು ಎದುರಿಸಿ ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲ ನದ ಭಾಗವಾದ ಸಿಪಿಐ(ಎಂ) ಸಹಜ ವಾಗಿಯೇ ಈ ಬಗ್ಗೆ ದೇಶಬಾಂಧವ ರನ್ನು ಜಾಗೃತಗೊಳಿಸುತ್ತಿದೆ. ಇದನ್ನು ಒಪ್ಪಿಕೊಂಡಿ ರುವ ಮೇಲೆ ಹೇಳಿದ 'ಟೈಂಸ್ ಆಫ್ ಇಂಡಿಯಾ' ದ ವಿಶ್ಲೇಷಣೆ ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ನ ಘಟಕ ಲಂಡನ್ನಿನಲ್ಲಿ ಭಾರತ ಮತ್ತು ಪಾಕಿಸ್ತಾನದ ಕಾರ್ಮಿಕರ ಜಂಟಿ ಮೇ ದಿನ ರ್‍ಯಾಲಿ ಏರ್ಪಡಿಸಿದೆ ಎಂದು ವರದಿ ಮಾಡಿದೆ. ಫ್ಯಾಸಿಸಂ-ವಿರೋಧಿ ಹೋರಾಟ ದಲ್ಲಿ ಕಮ್ಯುನಿಸ್ಟರ ಪ್ರಮುಖ ಪಾತ್ರದಿಂದಾಗಿ ಯೆಹೂದಿಯರಂತೆ ಕಮ್ಯುನಿಸ್ಟರನ್ನು ಆತ ತನ್ನ ಪ್ರಮುಖ ಶತ್ರು ಎಂದೂ ಪರಿಗಣಿಸಿದ್ದ ಎಂಬುದನ್ನು ಟೈಂಸ್ ಆಫ್ ಇಂಡಿಯಾ ಸುದ್ದಿ ನೆನಪಿಸಿದೆ. ಬಿಜೆಪಿ ಕೂಡಾ ಕಮ್ಯುನಿಸ್ಟರನ್ನು ತನ್ನ ಪ್ರಮುಖ ಶತ್ರುವಾಗಿ ಪರಿಗಣಿಸಿದೆ ಎಂಬುದನ್ನು ನಾವಿಲ್ಲಿ ನೆನಪಿಸಿಕೊಳ್ಳಬಹುದು.

ಭಜರಂಗ ದಳದ ದಾಂಧಲೆ ಏನನ್ನು ತೋರಿಸುತ್ತದೆ?

ಮುಂಬೈಯಲ್ಲಿ ಪ್ರಖ್ಯಾತ ಕಲಾವಿದ ಎಂ.ಎಫ್.ಹುಸೇನ್‌ರ ಮನೆಗೆ ನುಗ್ಗಿ ಭಜರಂಗ ದಳದವರು ದಾಂಧಲೆಯೆಬ್ಬಿಸಿದ್ದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹಾಗೂ ಪ್ರಖ್ಯಾತ ಸಾಹಿತಿ ಭೀಷ್ಮ ಸಾಹನಿ ಮತ್ತಿತರ 142 ಬುದ್ಧಿಜೀವಿಗಳು ಬಲವಾಗಿ ಖಂಡಿಸಿದ್ದಾರೆ.

ಭಜರಂಗ ದಳದ ಗಲಭೆಕೋರರಿಗೆ ಸ್ಥಳೀಯ ಬಿಜೆಪಿ ಎಂ.ಎಲ್.ಎ. ಯ ಪೋಷಣೆಯಿರುವುದು ಸ್ಪಷ್ಟ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇಂತಹ ಫ್ಯಾಸಿಸ್ಟ್ ಮಾದರಿಯ ವರ್ತನೆಯನ್ನು ತೋರುವ ಘಟನೆ ಇತ್ತೀಚೆಗೆ ಪ್ರಸಿದ್ಧ ಪಾಕಿಸ್ತಾನಿ ಹಾಡುಗಾರ ಗುಲಾಂ ಅಲಿ ಯವರ ಕಾರ್ಯಕ್ರಮವನ್ನು ತಡೆದಾಗಲೂ ಕಂಡುಬಂದಿದೆ ಎಂದು ಖಂಡಿಸಿದೆ. ಇದಕ್ಕೆ ಕೊಟ್ಟಿರುವ ಕಾರಣ ಉದ್ರೇಕಕಾರಿ ಕೋಮುವಾದಿ ಸ್ವರೂಪದ್ದು. ಇತ್ತೀಚೆಗೆ ಭಾರತದ ಭಾಂಗ್ರಾ ತಂಡ ಪಾಕಿಸ್ತಾನಕ್ಕೆ ಭೇಟಿ ನೀಡಿ ಬಂದಿರುವಾಗ ಇಂತಹ ಕಾರಣಗಳು ನಿಜಕ್ಕೂ ಹಾಸ್ಯಾಸ್ಪದ.

ಹೀಗೆ ಬುದ್ಧಿಜೀವಿಗಳನ್ನು, ಕಲಾವಿದರನ್ನು ಬೆದರಿಸುವ ಅಸಹಿಷ್ಣು ವರ್ತನೆ ಆಳುವ ಪಕ್ಷದ ಕೋಮುವಾದಿ ಸಿದ್ಧಾಂತಕ್ಕೆ ಅನುಗುಣವಾಗಿರುವ ವರ್ತನೆ. ಕಾನೂನು ವ್ಯವಸ್ಥೆಯ ಯಂತ್ರವನ್ನು ಜಾಗರೂಕಗೊಳಿಸಿದ್ದರೆ ಇಂತಹ ಘಟನೆಗಳು ನಡೆಯುವ ಸಾಧ್ಯತೆ ಇಲ್ಲವೆನ್ನುವುದು ಸ್ಪಷ್ಟ. ಈ ದಾಂಧಲೆ ಕೋರರು ತಮ್ಮ ಕೆಲಸ ಮಾಡಲು ಸಾಧ್ಯವಾಗಿರುವುದೇ ಇಂದು ಪ್ರಭುತ್ವ ಅಧಿಕಾರವನ್ನು ನಡೆಸುತ್ತಿರುವ ಕೋಮುವಾದಿ ಶಕ್ತಿಗಳು ಅದಕ್ಕೆ ನೀಡಿರುವ ಪೋಷಣೆಯ ಪ್ರತೀಕ ಎಂದು ಅಭಿಪ್ರಾಯ ಪಟ್ಟಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಕೇಂದ್ರದ ಮತ್ತು ಮಹಾರಾಷ್ಟ್ರದ ಸರಕಾರಗಳು ಕಾನೂನಿನ ನಿಯಮಗಳನ್ನು, ಸಂವಿಧಾನದ ವಿಧಿ- ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದಿದೆ.

ಪ್ರೊ. ಭೀಷ್ಮಸಾಹನಿ, ಪ್ರೊ.ಪ್ರಭಾತ್ ಪಟ್ನಾಯಕ್, ಶಬಾನಾ ಅಜ್ಮಿ ಮುಂತಾದ 142 ಬುದ್ಧಿಜೀವಿಗಳು ಸಹಿ ಹಾಕಿದ ಹೇಳಿಕೆ ಈ ಹಲ್ಲೆಯನ್ನು ಬಲವಾಗಿ ಖಂಡಿಸುತ್ತಾ 'ಹುಸೇನ್ ಹಿಂದೂಸ್ತಾನವನ್ನು ಪ್ರವೇಶಿಸಬಹುದಾದರೆ ನಾವು ಅವರ ಮನೆಯನ್ನೇಕೆ ಪ್ರವೇಶಿಸಬಾರದು' ಎಂಬ ಬಾಳಾಠಾಕ್ರೆಯವರ ಹೇಳಿಕೆ, ಅತ್ಯಂತ ಆಘಾತಕಾರಿ ಎಂದಿದೆ. ಸರಕಾರ ತಕ್ಷಣ ಈ ಕ್ರಿಮಿನಲ್‌ಗಳನ್ನು ಶಿಕ್ಷಿಸಿ ಕಲಾವಿದರು ನಿರ್ಭೀತ ವಾತಾವರಣದಲ್ಲಿ ಕೆಲಸ ಮಾಡುವ ವಾತಾವರಣ ನಿರ್ಮಿಸಬೇಕೆಂದು ಆಗ್ರಹಿಸಿದ್ದಾರೆ.

ಆಂಧ್ರಪ್ರದೇಶ: ಖಾಸಗೀಕರಣದ ವಿರುದ್ಧ ಕಾರ್ಮಿಕರ ಪ್ರತಿಭಟನೆ

ಹೈದರಾಬಾದಿನಲ್ಲಿ ರೈತರ ಬೃಹತ್ ರ್‍ಯಾಲಿ

ಏಪ್ರಿಲ್ 16 ರಂದು ಸಿಐಟಿಯು ನ ಆಂಧ್ರಪ್ರದೇಶ ರಾಜ್ಯ ಸಮಿತಿಯ ಕರೆಯ ಮೇರೆಗೆ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗಳ ಎದುರು ಕಾರ್ಮಿಕರು ಪಿಕೆಟಿಂಗ್, ಧರಣಿ ನಡೆಸಿದರು. ರಾಜ್ಯ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗೀಕರಿಸ ಬಾರದು, ಕನಿಷ್ಟ ಕೂಲಿಯನ್ನು ವೈಜ್ಞಾನಿಕವಾಗಿ ನಿರ್ಧರಿಸಿ ಜಾರಿಗೊಳಿಸ ಬೇಕು, ಲಾಕೌಟ್, ಕ್ಲೋಶರ್, ರಿಟ್ರೆಂಚ್ ಮೆಂಟ್‌ಗಳ ಮೇಲೆ ಹತೋಟಿ, ಉದ್ದಿಮೆ ವಿವಾದಗಳಲ್ಲಿ ಪೋಲೀಸರ ಹಸ್ತಕ್ಷೇಪಕ್ಕೆ ತಡೆ, ಕಾರ್ಮಿಕ ಇಲಾಖೆಯ ಭ್ರಷ್ಟಾಚಾರದ ನಿರ್ಮೂಲನ ಕಾರ್ಮಿಕರ ಕೆಲವು ಪ್ರಮುಖ ಬೇಡಿಕೆಗಳು.

ವಾರಂಗಲ್, ನಲಗೊಂಡಾ, ಕರ್ನೂಲು, ಅನಂತಪುರ ಮತ್ತಿತರ ಕಡೆ ಪಿಕೆಟಿಂಗ್ ನಡೆಸುತ್ತಿದ್ದ ಸಿಐಟಿಯು ಕಾರ್ಯ ಕರ್ತರ ಮೇಲೆ ಲಾಠೀ ಪ್ರಹಾರಗಳೂ ನಡೆದವು. ಮಹಿಳಾ ಪ್ರತಿಭಟನಾಕಾರರೊಂದಿಗೆ ಒರಟಾಗಿ ವರ್ತಿಸಲಾಯಿತು. ಸಿಐಟಿಯು ಮುಖಂಡರ ಮೇಲೆ ಸುಳ್ಳು ಕೇಸುಗಳನ್ನು ಹಾಕಲಾಯಿತು.

ರಸ್ತೆ ಸಾರಿಗೆ, ವಿದ್ಯುತ್ ಮಂಡಳಿ ನೌಕರರೂ ಭಾಗವಹಿ ಸಿದ್ದ ಈ ಕಾರ್ಯಕ್ರಮದಲ್ಲಿ ಸಹಕಾರಿ ನೇಯ್ಗೆ, ಸಣಬು ಗಿರಣಿಗಳ ಕಾರ್ಮಿಕರು, ಬೀಡಿ, ಅಂಗನವಾಡಿ, ರೈಸ್ ಮಿಲ್, ಕಟ್ಟಡ ಕಾರ್ಮಿಕರು, ಹಮಾಲಿಗಳು, ರಿಕ್ಷಾ- ಆಟೋ, ಲಾರಿ ಡ್ರೈವರುಗಳು ಮತ್ತಿತರ ಅಸಂಘಟಿತ ವಲಯಗಳ ಕಾರ್ಮಿಕರು ಭಾಗವಹಿಸಿದ್ದರು.

ರೈತರ ದನಿ

ಆಂಧ್ರಪ್ರದೇಶ ರೈತ ಸಂಘದ ಕರೆಯ ಮೇರೆಗೆ ಭಾರೀ ಸಂಖ್ಯೆಯಲ್ಲಿ ರೈತರು ಹೈದರಾಬಾದಿನಲ್ಲಿ ಒಂದು ಬೃಹತ್ ರ್‍ಯಾಲಿ ನಡೆಸಿದರು. ಕೃಷಿ ಸಾಲಗಳ ಮೇಲೆ ವಿಪರೀತ ಸಾಲ ಹೊರೆಯಿಂದ ರೈತಾಪಿ ಜನ ಗಳ ವಿಮೋಚನೆ, ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ನೆರವು, ಖೋಟಾ ಕ್ರಿಮಿ ನಾಶಕ, ಗೊಬ್ಬರ ಒದಗಿಸಿದ ವ್ಯಾಪಾರಸ್ಥರಿಗೆ ಕಠಿಣ ಶಿಕ್ಷೆ, ರೈತ- ವಿರೋಧಿ ವಿದ್ಯುತ್ ಮಸೂದೆಯ ವಾಪಸಾತಿ ಆಂಧ್ರಪ್ರದೇಶದ ರೈತರ ಪ್ರಮುಖ ಬೇಡಿಕೆಗಳು. ಸಿಪಿಐ(ಎಂ) ರಾಜ್ಯ ಘಟಕ, ಕೃಷಿ ಕೂಲಿಕಾರರ ಸಂಘ, ಬ್ಯಾಂಕ್-ವಿಮಾ ನೌಕರರ ಸಂಘಟನೆಗಳು, ಕೇಂದ್ರ ರಾಜ್ಯ ಸರ್ಕಾರಿ ನೌಕರರ ಸಂಘಟನೆ ಗಳು ಈ ರ್‍ಯಾಲಿಗೆ ಬೆಂಬಲ ನೀಡಿದರು.

○

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸಿಗರ ಹತಾಶೆಗೆ ಮೂರು ಬಲಿ

ಪಂಚಾಯತು ಚುನಾವಣೆಗಳಿಗೆ ತಯಾರಿ ನಡೆಯುತ್ತಿದ್ದಂತೆ ಹತಾಶ ಕಾಂಗ್ರೆಸ್ ಮುಖಂಡರು ಸಮಾಜ-ಘಾತುಕ ಶಕ್ತಿಗಳನ್ನು ಬಳಸಿ ಭಯೋತ್ಪಾದನೆ ಯನ್ನುಂಟು ಮಾಡುವ ಪ್ರಯತ್ನದಲ್ಲಿದ್ದಾರೆ.

ಮುರ್ಷಿದಾಬಾದ್ ಜಿಲ್ಲೆಯ ದೂರದ ಹಳ್ಳಿ ಜಿಗ್ರಿಯಲ್ಲಿ ಏಪ್ರಿಲ್ 26 ರಂದು ಸಿಪಿಐ(ಎಂ) ಕಾರ್ಯಕರ್ತೆ ಅನ್ವರಾ ಬೇಗಂ (20 ವರ್ಷ) ಳನ್ನು ಕಾಂಗ್ರೆಸ್ಸಿನೊಂದಿಗೆ ನಿಕಟ ಸಂಪರ್ಕವಿರುವ ಸಮಾಜಘಾತುಕ ಶಕ್ತಿಗಳು ಗುಂಡಿಕ್ಕಿ ಕೊಂದರು. ಅಂದು ಸ್ಥಳೀಯ ಪಂಚಾಯತಿನ ಉಪಪ್ರಧಾನ ರಝಾ ಶೇಕ್‌ರ ಗುಡಿಸಲಿಗೆ ಧಾಳಿ ಮಾಡಿದ ಈ ಗೂಂಡಾಗಳು ಅಲ್ಲಿ ಶೇಕ್ ಇಲ್ಲದ್ದನ್ನು ಕಂಡು ಹತಾಶರಾಗಿ ಸಿಕ್ಕಾಪಟ್ಟೆ ಗುಂಡು ಹಾರಿಸ ಲಾರಂಭಿಸಿದರು. ಇದಕ್ಕೆ ಅನ್ವರಾ ಬಲಿಯಾದಳು. ಶೇಕ್ ಕಳೆದ ಲೋಕಸಭೆ ಚುನಾವಣೆಯಲ್ಲಿ ಗುಂಡೇಟಿಗೆ ಸಿಲುಕಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಅದರ ಹಿಂದಿನ ದಿನ ಬರ್ಗುಲಿ ಗ್ರಾಮ ಪಂಚಾಯತ್ ನಂ.2 ರ ಚುನಾಯಿತ ಸದಸ್ಯ ಶ್ಯಾಮಲ್ ಘೋಷ್‌ರನ್ನು ರೈಲ್ವೆ ನಿಲ್ದಾಣದಲ್ಲಿ ರೈಲು ಹತ್ತುತ್ತಿದ್ದಾಗ ಹಾಡುಹಗಲೇ ಗುಂಡಿಟ್ಟು ಕೊಲ್ಲಲಾಯಿತು. ಜನಗಳು ಹಂತಕರ ಬೆಂಬತ್ತಿ ಹಿಡಿಯಲು ಪ್ರಯತ್ನಿಸಿ ದರು. ಮರುದಿನ ಇಲ್ಲಿ ಸಂಪೂರ್ಣ ಬಂದ್ ಆಚರಿಸಲಾಯಿತು. ಶ್ಯಾಮಲ್ ಘೋಷ್ ಡಿವೈಎಫ್‌ಐ ಮುಖಂಡರಾಗಿದ್ದರು.

ಏಪ್ರಿಲ್ 26 ರಂದೇ ಬರ್ದ್ವಾನ್‌ನಲ್ಲಿ ಗ್ರಾಮವೊಂದರಲ್ಲಿ ಇನ್ನೊಬ್ಬ ಕಾರ್ಯಕರ್ತ ರಬೀಂದ್ರನಾಥ್ ಮಂಡಲ್‌ರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಈತ ಪಂಚಾಯತ್ ಸದಸ್ಯರೊಬ್ಬರ ಸೋದರ. ಇವರನ್ನು ಇರಿದು ಕೊಂದವರೇ ಕೆಲವು ತಿಂಗಳ ಹಿಂದೆ ಇನ್ನೊಬ್ಬ ಪಾರ್ಟಿ ಕಾರ್ಯಕರ್ತ ಸುಖಾಂತೋ ಮಲ್ಲಿಕ್ ನನ್ನು ಕೊಂದಿದ್ದರು.

(ಐಎನ್‌ಎನ್)

ಪ.ಬಂಗಾಳದಲ್ಲಿ - 129ನೇ ಜನ್ಮದಿನಾಚರಣೆ

ಲೆನಿನ್ ಕೊಡುಗೆಗಳ ನೆನಪು

ಏಪ್ರಿಲ್ 22 ರಂದು ಪಶ್ಚಿಮ ಬಂಗಾಳದ ಹಲವೆಡೆ ಲೆನಿನ್‌ರವರ 129ನೇ ಜನ್ಮ ದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಿಪಿಐ(ಎಂ) ನ ರಾಜ್ಯ ಮುಖಂಡರು ಲೆನಿನ್‌ವಾದದ ಸೂತ್ರಗಳನ್ನು ವಿಕಾಸಗೊಳ್ಳುತ್ತಿರುವ ಸನ್ನಿವೇಶದಲ್ಲಿ ಮೂರ್ತ ವಾಸ್ತವತೆಯನ್ನು ಗಮನದಲ್ಲಿಟ್ಟುಕೊಂಡು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತರಬೇಕು ಎಂದು ಕರೆ ನೀಡಿದರು. ಏಪ್ರಿಲ್ 22 ರ ಮುಂಜಾನೆ ಲೆನಿನ್‌ರವರ ಪ್ರತಿಮೆಗೆ ಜ್ಯೋತಿಬಸು, ಶೈಲೇನ್ ದಾಸ್ ಗುಪ್ತಾ, ಬಿನೋಯ್ ಚೌಧುರಿ ಮತ್ತಿತರ ಸಿಪಿಐ(ಎಂ) ಮತ್ತು ಎಡರಂಗದ ಮುಖಂಡರು ಹೂಮಾಲೆ ಅರ್ಪಿಸಿದರು.

ಅಂದು ಸಂಜೆ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಅನಿಲ್ ಬಿಸ್ವಾಸ್ 24 ಪರಗಣಜಿಲ್ಲೆಯ ಬರಸಾತ್‌ನಲ್ಲಿ ಪಕ್ಷದ ಕಚೇರಿಯಲ್ಲಿ ಕಿಕ್ಕಿರಿದು ತುಂಬಿದ್ದ ಸಭೆಯಲ್ಲಿ ಮಾತನಾಡುತ್ತಾ ಮಾಜಿ ಸೋವಿಯತ್ ಒಕ್ಕೂಟದಲ್ಲಿ ಮತ್ತು ಪೂರ್ವಯುರೋಪಿನ ದೇಶಗಳಲ್ಲಿ ಸಮಾಜವಾದ ಕ್ರಮೇಣ ಹ್ರಾಸಗೊಂಡ ರೀತಿಯನ್ನು ವಿವರಿಸಿದರು. ಈಗ ಅಮೆರಿಕಾ, ಬ್ರಿಟನ್, ಜರ್ಮನಿ ಮತ್ತು ರಶ್ಯಾದಲ್ಲೂ ಕೂಡಾ ಲೆನಿನ್‌ರ ವ್ಯಕ್ತಿತ್ವದ ಮೇಲೆ ನಡೆಸಲಾಗುತ್ತಿರುವ ಯೋಜಿತ ಧಾಳಿಗಳ ಬಗ್ಗೆ ಅವರು ಹೇಳಿದರು.

ರಶ್ಯಾದ ಇತಿಹಾಸದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು 'ಓದಬೇಕಾದ ಪುಸ್ತಕಗಳು' ಲೆನಿನರ ಬಗ್ಗೆ ತಿರಸ್ಕಾರದ ಮಾತುಗಳಿಂದ ತುಂಬಿವೆ. ಅವರನ್ನು 'ಜರ್ಮನಿಯ ಏಜೆಂಟ್' ರೆಂದೋ, 'ಜರ್ಮನರ ದುಡ್ಡಿಗಾಗಿ ಕೆಲಸ ಮಾಡುತ್ತಿದ್ದವ ರೆಂದೋ ಹೇಳಲಾಗಿದೆ. ಇನ್ನೂ ಖೇದದ ವಿಷಯವೆಂದರೆ ಇಂತಹ ಒಂದು ಪುಸ್ತಕದ ಲೇಖಕ ಸ್ಟಾಲಿನ್ ನೇತೃತ್ವದ ಸಿಪಿಎಸ್‌ಯು ಪೊಲಿಟ್‌ಬ್ಯೂರೋ ಸದಸ್ಯರಾಗಿದ್ದರು. ನವಂಬರ್ ಕ್ರಾಂತಿಯ ಮುಖಂಡತ್ವವನ್ನು ಪಿತೂರಿಯ ಮೂಲಕ ಲೆನಿನ್ ಕಸಿದುಕೊಂಡರು ಎಂದು ರಶ್ಯಾದ ಹೊಸ ಜನಾಂಗವನ್ನು ನಂಬಿಸಬಯಸುವ ಪ್ರಭೃತಿಗಳಿವರು.

ಆದರೆ ಏನೇ ಮಾಡಿದರೂ ಲೆನಿನ್ ವಾದದ ಪ್ರಭಾವವನ್ನು ಕುಂದಿಸಲು ಅವರಿಗಾಗಿಲ್ಲ. ಇತ್ತೀಚೆಗೆ ಉಕ್ರೇನ್‌ನಲ್ಲಿ ನಡೆದ ಚುನಾವಣೆಗಳಲ್ಲಿ ಲೆನಿನ್‌ವಾದದಲ್ಲಿ ಅಚಲ ನಂಬಿಕೆಯಿಟ್ಟು ತನ್ನ ಚಟುವಟಿಕೆಗಳನ್ನು ಮುಂದುವರಿಸಿದ್ದ ಕಮ್ಯುನಿಸ್ಟ್ ಪಕ್ಷ ಬಾರೀ ಜಯ ಗಳಿಸಿದೆ. ಝುಗನೋವ್ ನೇತೃತ್ವದ ರಶ್ಯನ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷವು ತನ್ನ ಕರಡು ಕಾರ್ಯಕ್ರಮದಲ್ಲಿ ಲೆನಿನ್‌ವಾದದ ಹೆಸರನ್ನು ಮತ್ತೆ ಸೇರಿಸಿದೆ. ಲೆನಿನ್‌ರ ಜನ್ಮ ದಿನಾಚರಣೆ ಮಾಡುವುದೆಂದರೆ ಲೆನಿನ್‌ವಾದವನ್ನು ಮೂರ್ತ ಪರಿಸ್ಥಿತಿಗಳಲ್ಲಿ ಅನ್ವಯಿಸುವ ಪ್ರತಿಜ್ಞೆ ಮಾಡುವುದು ಎಂದು ಅನಿಲ್ ಬಿಸ್ವಾಸ್ ಹೇಳಿದರು.

ಅದೇ ದಿನ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ನಡೆದ ಇನ್ನೊಂದು ಸಭೆಯಲ್ಲಿ ಇನ್ನೊಬ್ಬ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಬಿನೋಯ್ ಕೊನಾರ್ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶವನ್ನು ಹಾಗೂ ವರ್ಗ ಬಲಾಬಲಗಳನ್ನು ಅರ್ಥಮಾಡಿಕೊಂಡು ಲೆನಿನ್ ವಾದವನ್ನು ಜಾರಿಗೆ ತರಬೇಕಾದ ಮಹತ್ವವನ್ನು ಒತ್ತಿ ಹೇಳಿದರು. ಸಿಪಿಐ(ಎಂ) ಕಲ್ಕತ್ತಾ ಜಿಲ್ಲಾ ಸಮಿತಿ ಈ ಸಮಾರಂಭವನ್ನು ಏರ್ಪಡಿಸಿತ್ತು.

ಲೆನಿನ್‌ರವರ ಅತಿ ದೊಡ್ಡ ಕಾಣಿಕೆ ಯೆಂದರೆ ಕಾರ್ಮಿಕ ವರ್ಗ ಹೇಗೆ ಅಧಿಕಾರ ವಶಪಡಿಸಿಕೊಳ್ಳಬಹುದೆಂದು ಮೂರ್ತ ರೀತಿಯಲ್ಲಿ ತೋರಿಸಿದ್ದು ಎಂದು ಸ್ಟಾಲಿನ್ ರವರು ಹೇಳಿದ್ದನ್ನು ವಿವರಿಸಿದ ಬಿನೋಯ್ ಕೊನಾರ್‌ರವರು ಇದು ಮಾರ್ಕ್ಸ್‌ವಾದಿ ಕ್ರಾಂತಿಯ ಸಿದ್ಧಾಂತದ ಸೃಜನಾತ್ಮಕ ಅನ್ವಯವಾಗಿತ್ತು ಎಂದರು.

ಕಮ್ಯುನಿಸಂನ್ನು ಬದಿಗೆ ತಳ್ಳಿದ ದೇಶಗಳಲ್ಲೇ ಈಗ ಮತ್ತೆ ಜನ ಬಂಡವಾಳ ಶಾಹಿ ದುಸ್ಸಾಹಸಗಳಿಂದ ಬೇಸತ್ತು ಕಮ್ಯುನಿಸ್ಟ್ ಪಕ್ಷಗಳಲ್ಲಿ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರ ಎಂದರು.

ಭಾರತದ ಈಗಿನ ಸನ್ನಿವೇಶದ ಬಗ್ಗೆ ಮಾತನಾಡುತ್ತಾ ಬಿಜೆಪಿ ಕೇವಲ ಇನ್ನೊಂದು ಬೂರ್ಜ್ವಾ ರಾಜಕೀಯ ಪಕ್ಷವಲ್ಲ, ಅದು ಆರ್.ಎಸ್.ಎಸ್. ನ ಬಲಪಂಥೀಯ ತತ್ವಗಳ ಪ್ರಭಾವದಲ್ಲಿರುವ ಪಕ್ಷ, ಅದರ ವರ್ಗ ಚಾರಿತ್ರ್ಯವನ್ನು ಬಯಲುಗೊಳಿಸುತ್ತಲೇ ಅದರ ಕೋಮುವಾದಿ ದೃಷ್ಟಿಕೋನವನ್ನು ಜನ ತಿರಸ್ಕರಿಸುವಂತೆ ಮಾಡಬೇಕು ಎಂದು ಅವರು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನರೇನ್ ಸೇನ್‌ರವರು ಮುಂಬರುವ ದಿನ ಗಳಲ್ಲಿ ಕಾರ್ಮಿಕ ವರ್ಗದ ಮುಖಂಡತ್ವವನ್ನು ಕಟ್ಟಿ ಬೆಳೆಸುವುದು ಅತ್ಯಗತ್ಯ ಎಂದರು.

ರಾಜಸ್ತಾನ: ದಲಿತರು, ಅಲ್ಪಸಂಖ್ಯಾತರಿಗೆ ಕಾವಿಪಡೆಗಳ ಪಾಠ!

ಎರಡು ಉದಾಹರಣೆಗಳು

ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಕೋಮು ಗಲಭೆಗಳಾಗುವುದಿಲ್ಲ, ಅತ್ಯಾಚಾರಗಳು ನಡೆಯುವುದಿಲ್ಲ - ಇದು ಬಿಜೆಪಿ ಬೆಂಬಲಿ ಗರ ತರ್ಕ. ಹೌದು ಗಲಭೆ ಮಾಡಿಸುವವರೇ ಅಧಿಕಾರದಲ್ಲಿರುವಾಗ, ಅಧಿಕಾರ ಪಡೆಯ ಲಿಕ್ಕಾಗಿಯೇ ಗಲಭೆ ನಡೆಸುತ್ತಿರುವವರು ಅಧಿಕಾರ ಪಡೆದ ನಂತರ ಗಲಭೆಗಳೇಕಾ ಗಬೇಕು ಎಂದ ಇದಕ್ಕೆ ಜಾತ್ಯಾತೀತವಾದಿ ಗಳು ಪ್ರತ್ಯುತ್ತರ ನೀಡುತ್ತಾರೆ. ಆದರೆ ಈಗ ಬಿಜೆಪಿ ಬೆಂಬಲಿಗರ ಈ ತರ್ಕವೂ ಮಣ್ಣುಪಾಲಾಗುತ್ತಿದೆ. ರಾಜಸ್ತಾನ ಇದಕ್ಕೆ ಉತ್ತಮ ಉದಾಹರಣೆ.

ಏಪ್ರಿಲ್ 4 ರಂದು ಚಿತ್ತೋಡ್‌ಗಡ್ ಜಿಲ್ಲೆಯ ನವಗಾಂವ್ ಎಂಬ ಹಳ್ಳಿಯಲ್ಲಿ ನಡೆದ ಕೋಮುಗಲಭೆ ಹಾಗೂ ಏಪ್ರಿಲ್ 25 ರಂದು ಧೌಲ್‌ಪುರ ಜಿಲ್ಲೆಯ ನಕ್‌ಸೌದಾ ಗ್ರಾಮದಲ್ಲಿ ದಲಿತ ಜಾತಿಯ ಸಣ್ಣ ವ್ಯಾಪಾರಿಗೆ ಮೇಲ್ಜಾತಿ ಗಣಿ ಮಾಲಿಕರು 'ಪಾಠ ಕಲಿಸಿದ' ರೀತಿ.

ಜಸ್ವಂತ್ ಸಿಂಗ್‌ರ ಸೋಲಿನ ನೆರಳಲ್ಲಿ

ಚಿತ್ತೋಡ್‌ಗಡ್‌ದ ಹೆಸರು ಕೇಳಿರ ಬಹುದು. ಬಿಜೆಪಿ ನೇತೃತ್ವದ ಸರಕಾರದ ಹಣಕಾಸು ಮಂತ್ರಿಯಾಗಲು ಸಕಲ ಸಿದ್ಧತೆ ಗಳಿಂದ ಹೊರಟಿದ್ದ ಜಸ್ವಂತ್ ಸಿಂಗರನ್ನು ಜನರು ನಿರಾಕರಿಸಿದ ಕ್ಷೇತ್ರ. ನವಗಾಂವ್ ಇದೇ ಕ್ಷೇತ್ರದಲ್ಲಿ ಬರುತ್ತದೆ. ಇಲ್ಲಿ ಸುಮಾರು ನೂರು ಮನೆಗಳಿದ್ದು ಹಿಂದೂಗಳು, ಮುಸ್ಲಿಮರು ಸಮ-ಸಮ ಸಂಖ್ಯೆಯಲ್ಲಿದ್ದಾರೆ. 1983 ರವರೆಗೆ ಈ ಹಳ್ಳಿ ಸಂಪೂರ್ಣವಾಗಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಆರಿಸುತ್ತಿತ್ತು. ನಂತರ ಇಲ್ಲೊಂದು ಆರ್.ಎಸ್.ಎಸ್. ಶಾಖೆ ಆರಂಭ ವಾಯಿತು. ಸಹಜವಾಗಿಯೇ ಕೋಮು ಗಲಭೆಯ ಪ್ರಯತ್ನಗಳೂ ಆರಂಭ ವಾದವು. ಇಲ್ಲಿಯ ಬಹುಪಾಲು ಮುಸ್ಲಿಮರು ಬಡ ರೈತರು. ಕೆಲವು ಕಾನೂನುಬಾಹಿರ ವ್ಯವಹಾರಗಳಲ್ಲಿ ತೊಡಗಿದವರೂ ಇದ್ದಾರೆ. ಆರ್.ಎಸ್.ಎಸ್. ಮುಸ್ಲಿಮರ ಬಗ್ಗೆ ಹೊಲಸು ಭಾಷೆ ಬಳಸಿದರೂ ಹಿಂದೂ- ಮುಸ್ಲಿಮರ ನಡುವಿನ ಉತ್ತಮ ಸಂಬಂಧ ಗಳಿಂದಾಗಿ ಅದರ ಪ್ರಯತ್ನ ಬಹಳ ದಿನ ಫಲಿಸಲಿಲ್ಲ.

ಇತ್ತೀಚಿನ ಲೋಕಸಭಾ ಚುನಾವಣೆ ಗಳಲ್ಲಿ ಗ್ರಾಮದ ಬಹುಪಾಲು ಜನ ಬಿಜೆಪಿಯ ವಿರುದ್ಧ ಮತ ನೀಡಿದರು. ಜಸ್ವಂತ್ ಸಿಂಗ್ ಸೋತರು. ಈ ಸೋಲಿನಿಂದ ಹತಾಶರಾದ ಸಂಘ ಪರಿವಾರದ ಮಂದಿ ಈ ಹಳ್ಳಿಯ ಜನರಿಗೆ 'ಪಾಠ ಕಲಿಸುವ' ಸಂದರ್ಭಕ್ಕೆ ಕಾದಿದ್ದರು.

ಏಪ್ರಿಲ್ 3 ರ ರಾತ್ರಿ ಹಳ್ಳಿಯಲ್ಲೊಂದು ನೃತ್ಯ ಕಾರ್ಯಕ್ರಮವಿತ್ತು. ಇಬ್ಬರು ಹುಡುಗರ ನಡುವೆ ಜಗಳ ಆರಂಭವಾಯಿತು. 16 ವರ್ಷದ ಬನ್ನಿಲಾಲ್ 14 ವರ್ಷದ ಇಮ್ರಾನ್ ಖಾನ್‌ನನ್ನು ಥಳಿಸಿದ. ಇಮ್ರಾನ್ ಖಾನ್ ಅವನನ್ನು ಕೊಲ್ಲುವುದಾಗಿ ಬೆದರಿಸಿದ. ಮರುದಿನ ಬೆಳಿಗ್ಗೆ ಇಬ್ಬರೂ ಬಸ್‌ನಿಲ್ದಾಣ ದಲ್ಲಿ ಮುಖಾಮುಖಿ ಯಾದರು. ಬನ್ನಿಲಾಲ್ ಮತ್ತೆ ಬಯ್ದ. ಸಿಟ್ಟಿಗೆದ್ದ ಇಮ್ರಾನ್ ಖಾನ್ ಅವನನ್ನು ಇರಿದ. ಬನ್ನಿಲಾಲ್ ಸತ್ತ. ಆರ್.ಎಸ್.ಎಸ್. ಶಾಖೆ ಪರಿಸ್ಥಿತಿಯ ಸಂಪೂರ್ಣ ಲಾಭ ಪಡೆಯಲು ನಿರ್ಧರಿಸಿತು. ಸುತ್ತಮುತ್ತಲಿನ ಊರುಗಳಿಂದ ವಿವಿಧ ಆಯುಧಗಳಿಂದ ಸಜ್ಜಿತರಾದ ಯುವ ಜನರನ್ನು ಕಲೆಹಾಕಿ ಹಾಡು ಹಗಲೇ ಮುಸ್ಲಿಮರ ಮೇಲೆ ಹಲ್ಲೆ ಆರಂಭಿಸಿತು.

ಗಂಡಸರು ಗದ್ದೆಗಳಲ್ಲಿ ಕೆಲಸ ಮಾಡು ತ್ತಿದ್ದರು. ಈ ಕೋಮುವಾದಿ ಗುಂಪು ಗಳು ಮನೆ-ಮನೆಗೆ ನುಗ್ಗಿ ಮಹಿಳೆಯರು, ಮಕ್ಕಳನ್ನು ಥಳಿಸಲಾರಂಭಿಸಿದರು. ಬೆಳೆ ಗಳನ್ನು ಧ್ವಂಸ ಮಾಡಲಾರಂಭಿಸಿದರು. ಮೌಲಾನಾ ಅಬ್ದುರ್ ರಹಮಾನ್ ಇವರ ಧಾಳಿಗೆ ಬಲಿಯಾಗಿ ಅಸುನೀಗಿದ. ಅವನ ಕೈಗಳನ್ನು ಕತ್ತರಿಸಿ ಜೀವಂತ ಸುಡಲಾಯಿತು. ಪಕ್ಕದಲ್ಲಿದ್ದ ದಲಿತರ ಮನೆಗಳನ್ನು ಭಸ್ಮಮಾಡಲಾಯಿತು.

ಸ್ಥಳಕ್ಕೆ ಧಾವಿಸಿದ ಪೋಲೀಸರು ಗೋಲೀಬಾರು ನಡೆಸಿದರು. ಶಿವಲಾಲ್ ಮೀನಾ ಅದರಲ್ಲಿ ಸತ್ತ. 12 ಜನ ಮುಸ್ಲಿಮರಿಗೆ ಬರ್ಬರ ಹಲ್ಲೆಗಳಲ್ಲಿ ತೀವ್ರವಾಗಿ ಗಾಯಗಳಾದವು. ಚಾಂದ್ ಖಾನ್ ಗಂಭೀರ ಸ್ಥಿತಿಯಲ್ಲಿದ್ದಾನೆ.

ಬನ್ನಿಲಾಲನನ್ನು ಕೊಂದ ಇಮ್ರಾನ್ ಖಾನ್‌ನನ್ನು ಪೋಲೀಸರಿಗೆ ಒಪ್ಪಿಸಲಾಯಿತು. ಆದರೆ ಅಬ್ದುರ್ ರೆಹಮಾನನನ್ನು ಹಾಡುಹಗಲೇ ಜೀವಂತ ಸುಟ್ಟ ಯಾರನ್ನೂ ಇದುವರೆಗೆ ಬಂಧಿಸಿಲ್ಲ. ಇಲ್ಲಿಯ ಆಡಳಿತ ನಿಷ್ಪಕ್ಷಪಾತತೆಯಿಂದ ಕಾರ್ಯನಿರ್ವಹಿಸಲು ಬಿಜೆಪಿ ರಾಜ್ಯ ಸರ್ಕಾರ ಬಿಡುತ್ತಿಲ್ಲ. ಇದು ಸ್ಥಳಕ್ಕೆ ಭೇಟಿ ನೀಡಿ ಬಂದ ಸಿಪಿಐ(ಎಂ) ತಂಡಕ್ಕೆ ತಿಳಿದು ಬಂದ ಸಂಗತಿ.

ರಾಮ್‌ನಿವಾಸನ 'ಅವಮಾನ'ದ ನೆರಳಲ್ಲಿ

ಇದು ಮೇ 2ರ 'ಟೈಂಸ್ ಆಫ್ ಇಂಡಿಯಾ'ದಲ್ಲಿ ವರದಿಯಾದ ಘಟನೆ. ನಾಕ್‌ಸೌದಾ ರಾಜಸ್ತಾನದ ಧೌಲ್‌ಪುರ ಜಿಲ್ಲೆಯ ಒಂದು ಹಳ್ಳಿ. ಕೆಂಪು ಮರಳುಗಲ್ಲಿನ ಗಣಿಗಾರಿಕೆ ಇಲ್ಲಿಯ ಮುಖ್ಯ ಆರ್ಥಿಕ ಚಟುವಟಿಕೆ. ದಲಿತ ಜಾತಿಗೆ ಸೇರಿದ 25 ವರ್ಷದ ರಾಮೇಶ್ವರ್ ಒಂದು ಕಿರಾಣಿ ಅಂಗಡಿ ನಡೆಸಿಕೊಂಡು ಜೀವನ ನಡೆಸುವ ವ್ಯಕ್ತಿ. ಏಪ್ರಿಲ್ 25 ರಂದು ಅವನ ಮೂಗಿಗೆ ದಾರ ಹಾಕಿ ಊರಲೆಲ್ಲಾ ಮೆರವಣಿಗೆ ಮಾಡಿ ಅವಮಾನ ಮಾಡಲಾಯಿತು. ಏಕೆ? ಮೇಲ್ಜಾತಿ ಗಣಿ ಮಾಲಕನ ಮಗನೊಬ್ಬನಿಗೆ ಸಿಗರೇಟ್ ಸಾಲವಾಗಿ ನೀಡಲು ನಿರಾಕರಿಸಿ ಒಬ್ಬ ಕೀಳ್ಜಾತಿ ಜಾಟವ ಮೇಲ್ಜಾತಿ ಗುಜ್ಜರನಿಗೆ ಮಾಡಿದ ಅವಮಾನದ ಸೇಡು ತೀರಿಸಲು!

ಕೆಂಪು ಮರಳುಗಲ್ಲಿನ ಗಣಿಗಳ ಮಾಲಕ ಹಾಗೂ ಹಳ್ಳಿಯ ಶ್ರೀಮಂತರಲ್ಲಿ ಒಬ್ಬನಾದ ಉಮ್ಮೇದಿಯ ಮಗ ರಾಮ್‌ನಿವಾಸ್ ಒಂದು ಸಿಗರೇಟು ಕೇಳಿದ. ಆತನ ಬಾಕಿ 150 ರೂ. ನಷ್ಟು ಇದ್ದುದರಿಂದ ರಾಮೇಶ್ವರ್ ಸಿಗರೇಟು ಕೊಡಲು ನಿರಾಕರಿಸಿದ. ರಾಮ್‌ನಿವಾಸ್ ಮತ್ತೆ-ಮತ್ತೆ ಒತ್ತಾಯಿಸಿದ. ಆಗ ರಾಮೇಶ್ವರ್ ಆತನ ತಾಯಿ, ಹೆಂಡತಿ ಅವನನ್ನು ಥಳಿಸಿದರು. ಸುದ್ದಿ ಹರಡಿದ ಕೂಡಲೇ ಜಾತಿ ವೈಷಮ್ಯ ಭುಗಿಲೆದ್ದಿತು. ಆದರೆ ಊರಿನ ಸರಪಂಚ ಪಂಚಾಯ್ತಿಕೆ ನಡೆಸಿ 'ಆದದನ್ನು ಮರೆತುಬಿಡಿ' ಎಂದು ರಾಜಿ ಮಾಡಿಸಿದ.

ಆದರೆ ಉಮ್ಮೇದಿಗೆ ತನ್ನ ಮಗನಿಗಾದ 'ಅವಮಾನ'ವನ್ನು ಮರೆಯಲಾಗಲಿಲ್ಲ.

ಏಪ್ರಿಲ್ 25 ರಂದು ಉಮ್ಮೇದಿ ಮತ್ತು ಆತನ ಐವರು ಮಕ್ಕಳಾದ ರಾಮ್‌ನಿವಾಸ್, ಕಮಲೇಶ್, ಬಾಸ್‌ದೇವ್, ಹಲುಕಾ ಹಾಗೂ ಪಪ್ಪು ನಸುಕಿನಲ್ಲಿ ಗದ್ದೆಯ ಕಡೆಗೆ ಹೋಗುತ್ತಿದ್ದ ನನ್ನ ಮೇಲೆ ಎರಗಿದರು. ಈ ಐದು ಮಂದಿ ನನ್ನ ಕೈಕಾಲು ಕಟ್ಟಿ ತಮ್ಮ ಗಣಿಯ ಬಳಿಗೊಯ್ದು ನಿರ್ದಯವಾಗಿ ಹೊಡೆದರು. ಉಮ್ಮೇದಿ ಬಂದು ಉದ್ದ ಸೂಜಿ ತಗೊಂಡು ಒಂದು ನನ್ನ ಮೂಗಿನಲ್ಲಿ ತೂತು ಮಾಡಿದ" ಇದು ಪತ್ರಕರ್ತರು ಕೇಳಿದಾಗ ರಾಮೇಶ್ವರ್ ತಿಳಿಸಿದ ಸಂಗತಿ.

ನಂತರ ರಾಮೇಶ್ವರನನ್ನು ಉಮ್ಮೇದಿ ಮತ್ತು ಆತನ ಮಕ್ಕಳು ಊರೆಲ್ಲಾ ಸುತ್ತಿಸಿ, ಇನ್ನು ಮುಂದೆ ಇಂತಹ ಅವಮಾನ ಮಾಡಹೊರಟರೆ ಇದೇ ಗತಿ ಎಂದು ಆ ದಲಿತ ಜಾತಿಯ ಜನಗಳನ್ನು ಎಚ್ಚರಿಸಿದರು.

'ನೀನು ಒಂದು ಪ್ರಾಣಿಗಿಂತ ಯಾವ ರೀತಿಯಲ್ಲೂ ಮೇಲಲ್ಲ ಎಂದು ತೋರಿಸು ತ್ತೇನೆ" ಎಂದು ಉಮ್ಮೇದಿಯ ಮಗ ಹೇಳಿರು ವುದಾಗಿ ರಾಮೇಶ್ವರ್ ಹೇಳುತ್ತಾನೆ. 'ನಾವು ಬಡವರು, ಎಲ್ಲಾ ರೀತಿಯಲ್ಲಿ ಪ್ರಾಣಿಗಳ ಸಮಾನರು ಎಂದು ಗುಜ್ಜರರು ತೋರಿಸ ಬೇಕೆಂದಿದ್ದರು. ಮೂಗುದಾರ ಅದರ ಪ್ರತೀಕ' ಎನ್ನುತ್ತಾನೆ ನೋವಿನಿಂದ ರಾಮೇಶ್ವರ್.

ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ

ಕಲ್ಕತ್ತೆಯಲ್ಲಿ ವಿಚಾರಸಂಕಿರಣ

ಏಪ್ರಿಲ್ 25 ರಂದು ಕಲ್ಕತ್ತೆಯ ಶಿಶಿರ್ ಮಂಚ್‌ನಲ್ಲಿ ನಡೆದ ವಿಚಾರ ಸಂಕಿರಣ ವೊಂದರಲ್ಲಿ ಡಾ. ಬಿ.ಆರ್.ಅಂಬೇಡ್ಕರ್‌ರವರ ಜನ್ಮದಿನವನ್ನು ಆಚರಿಸಲಾಯಿತು. ರಾಜ್ಯ ಎಡರಂಗ ಸರಕಾರ ಇದನ್ನು ಏರ್ಪಡಿಸಿತ್ತು. ವಿಚಾರಸಂಕಿರಣದಲ್ಲಿ ಮಾತನಾಡಿದ ವಿವಿಧ ಭಾಷಣಕಾರರು ಡಾ. ಅಂಬೇಡ್ಕರ್ ಬಿಟ್ಟು ಹೋದ ಪರಂಪರೆಯ ವಿಶ್ಲೇಷಣೆ ನಡೆಸಿದರು.

ಸಭಿಕರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂಯೆಚೂರಿಯವರು ಛಿದ್ರಕಾರಿ ಜಾತಿ ಪರಿಗಣನೆಗಳನ್ನು ಕೊನೆಗೊಳಿಸಲು ಒಂದು ತೀವ್ರಗಾಮಿ ಸಾಮಾಜಿಕ ಬದಲಾವಣೆ ಅಗತ್ಯ ಎಂದರು. ನಿರ್ದಿಷ್ಟವಾಗಿ ದೇಶದ ಹೆಚ್ಚಿನ ಕಡೆ ಈಗಲೂ ದುಷ್ಟ ಸಾಮಾಜಿಕ ಪ್ರಭಾವ ಬೀರುತ್ತಿ ರುವ ಪಾಳೆಯಗಾರಿಯ ಉಳಿಕೆಗಳನ್ನು ಕೊನೆ ಗೊಳಿಸಬೇಕು ಎಂದು ಅವರು ಕರೆ ನೀಡಿದರು.

ದೇಶ ಬ್ರಿಟಿಶ್ ವಸಾಹತುಶಾಹಿ ಆಳ್ವಿಕೆಯಿಂದ ಸ್ವಾತಂತ್ರ್ಯದ 50ನೇ ವಾರ್ಷಿ ಕೋತ್ಸವವನ್ನು ಆಚರಿಸುತ್ತಿದ್ದರೂ ಸಾಮಾಜಿಕ ಮತ್ತು ರಾಜಕೀಯ ಉದ್ಧಾರ ಇನ್ನೂ ಬಂದಿಲ್ಲ. 1950 ರಷ್ಟು ಹಿಂದೆಯೇ ಡಾ. ಅಂಬೇಡ್ಕರ್ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸದಿದ್ದರೆ ಕೊನೆಗೆ ಇಡೀ ಸಂವಿಧಾನಿಕ ಚೌಕಟ್ಟು ಅನಿವಾರ್ಯವಾಗಿಯೇ ಕುಸಿದು ಬೀಳುತ್ತದೆ ಎಂದು ಸರಿಯಾಗಿಯೇ ಹೇಳಿದ್ದರು.

ಮುಂದುವರಿದು ಸೀತಾರಾಂ ಯೆಚೂರಿ ಯವರು ಜಾತಿ-ಮತದ ಒಟ್ಟಾರೆ ಪರಿಗಣನೆ ಯಲ್ಲಿ ವರ್ಗಭೇಧ ಕಾಣುತ್ತಿದೆ ಎಂದು ಹೇಳಿದರು. 'ಜಾತಿ ಮತ್ತು ವರ್ಗ ಪರಸ್ಪರ ವಿರೋಧ ಅಂಶಗಳಲ್ಲ' ಎಂದ ಅವರು ದಲಿತ ವರ್ಗಗಳಿಗೆ ಸೇರಿದವರು ಸಾಮಾಜಿಕವಾಗಿಯೂ ಅತ್ಯಂತ ದಮನಕ್ಕೊಳಗಾದವರು ಎಂಬುದನ್ನು ನಾವು ಕಾಣುತ್ತಿದ್ದೇವೆ ಎಂದರು. ಆದ್ದರಿಂದ ನಮ್ಮ ಮುಂದಿರುವ ದಾರಿಯೆಂದರೆ ತಮ್ಮ ಹೋರಾಟಗಳನ್ನು ಆಳುವ ವರ್ಗಗಳ ವಿರುದ್ಧ ಒಂದು ವಿಶಾಲ ವರ್ಗ ಸಂಘಟನೆಗಳನ್ನಾಗಿ ಬೆಳೆಸುವುದು ಜಾತಿ ಪರಿಗಣನೆಗಳು ಹುಟ್ಟಿಕೊಳ್ಳುವುದು ಪಾಳೆಯಗಾರಿ ಮೌಲ್ಯಗಳು ಇನ್ನೂ ಮುಂದುವರಿಯುತ್ತಿರುವ ಒಂದು ವಾತಾವರಣದಲ್ಲಿ ಎನ್ನುತ್ತಾ ಸೀತಾರಾಂ ಯೆಚೂರಿಯವರು ಇದನ್ನು ಕೊನೆಗೊಳಿಸು ವುದರಿಂದ ಮಾತ್ರವೇ ದುಷ್ಟ ಜಾತಿಪದ್ಧತಿ ಹೋಗುತ್ತದೆಯೇ ಹೊರತು ಇನ್ನೊಂದು ಸವಲತ್ತು ಭರಿತ ಜಾತಿಯನ್ನು ಸೃಷ್ಟಿಸುವುದ ರಿಂದಲ್ಲ ಎಂದು ತಮ್ಮ ಭಾಷಣವನ್ನು ಕೊನೆಗೊಳಿಸಿದರು.

(ಐಎನ್‌ಎನ್)

ಲೋಕಸಂಚಾರ

ಶರತ್ ಚಂದ್ರ

ಇಸ್ರೇಲಿಗೆ 50 ವರ್ಷಗಳು - ಅರಾಫತ್ ಮೇ 99 ರಲ್ಲಿ ಸ್ವತಂತ್ರ ಫ್ಯಾಲೆಸ್ಟೇನ್ ಘೋಷಣೆ

ಇಸ್ರೇಲಿಗೂ 50 ವರ್ಷಗಳಾಗಲಿದೆ. ಇಸ್ರೇಲಿನ 50 ವರ್ಷಗಳ ಆಚರಣೆ, ಹಲವಾರು ಹಳೆಯ ಪ್ರಶ್ನೆಗಳನ್ನು ಪುನಃ ಹಸಿರಾಗಿಸಿದೆ. ಬ್ರಿಟಿಶ್ ಹಾಗೂ ಇತರ ಪಾಶ್ಚಿಮಾತ್ಯ ದೇಶಗಳು ಕೃತಕವಾಗಿ ನಿರ್ಮಿಸಿದ ದೇಶ. ಅದೂ ಪ್ಯಾಲೆಸ್ಟೇನರನ್ನು ಓಡಿಸಿ ಅವರ ದೇಶವನ್ನು ಬಲಪ್ರಯೋಗ, ರಕ್ತಪಾತದಿಂದ ತಮ್ಮದಾಗಿಸಿದ ದೇಶ. ಧರ್ಮ ಬಿಟ್ಟರೆ ಯಾವುದೇ ಐಕ್ಯಗೊಳಿಸುವ ವಿಷಯವಿಲ್ಲದ ಈ ದೇಶ 50 ವರ್ಷಗಳ ನಂತರವೂ ಏಶ್ಯಾದ, ಅರಬ್ ದೇಶಗಳ ನೆರೆಹೊರೆಯಲ್ಲಿ ಒಂದೇ ಮಿತ್ರನನ್ನು ಹೊಂದಿಲ್ಲ. ತನ್ನ ನೆರೆಹೊರೆಯ ದೇಶಗಳೊಂದಿಗೆ ಸತತ ಯುದ್ಧದ ಸ್ಥಿತಿಯಲ್ಲಿದೆ. ಹೆಚ್ಚಿನ ನೆರೆಹೊರೆಯ ದೇಶಗಳು ಇದನ್ನು ಇನ್ನೂ ಮಾನ್ಯವೂ ಮಾಡಿಲ್ಲ. ದೇಶದೊಳಗೆ ಈ ಸತತ ಹಿಂಸಾತ್ಮಕ ಯುದ್ಧದ, ಆಂತರಿಕವಾಗಿ ಭಯೋತ್ಪಾದಕ ಹಿಂಸೆಯಿಂದ ಜನ ಬೇಸತ್ತಿದ್ದಾರೆ. ಇದೇ ಒಂದು ದೇಶದ 50 ವರ್ಷಗಳ ಸಾಧನೆಯೇ ಎಂದು ಕೇಳುತ್ತಾರೆ. ದೇಶದೊಳಗೂ ಪಾಶ್ಚಿಮಾತ್ಯ ದೇಶಗಳಿಂದ ಬಂದವರು, ಏಶ್ಯಾ-ಆಫ್ರಿಕಾದಿಂದ ಬಂದವರು ಹೀಗೆ ಹಲವಾರು ಭೇದಗಳು. ಈ ಎರಡು ಭಾಗಗಳ ನಡುವೆ ಇರುವ ಸಾಂಸ್ಕೃತಿಕ, ಜನಾಂಗೀಯ ವ್ಯತ್ಯಾಸದ ಕಂದಕ ದೊಡ್ಡದು. ಈ ಇಡೀ ದೇಶದ ಜನ ಬೇರೆ ಬೇರೆ ದೇಶಗಳಿಂದ ಬಂದಿರುವವರು. ಅವರ ದೇಶದ ಸಂಸ್ಕೃತಿ, ನಡವಳಿಕೆಯ ಭೇದಗಳು. ಇಸ್ರೇಲಿನ ಆಳುವ ವರ್ಗಗಳು ಅನುಸರಿಸುತ್ತಿರುವ ಮಿಲಿಟರಿ ನೀತಿ, ಅರಬರ ಮೇಲೆ ದ್ವೇಷ, ಧಾರ್ಮಿಕ ಸಾಂಪ್ರದಾಯಿಕತನವನ್ನು ದೇಶದ ದೊಡ್ಡ ವಿಭಾಗ ವಿರೋಧಿಸುತ್ತದೆ. 'ಶಾಂತಿಗಾಗಿ ನೆಲ ವಿನಿಮಯ' ದ ನೀತಿ ಬೆಂಬಲಿಸುತ್ತದೆ.

ನೇತನ್ಯಾಹು ಸರಕಾರ 50 ವರ್ಷಗಳ ಆಚರಣೆಗೆ ನೇಮಿಸಿದ ಸಮಿತಿ, ಆಚರಣೆ ನಡೆಸುತ್ತಿರುವ ರೀತಿ ಬಹಳ ವಿವಾದಾಸ್ಪದ ವಾಗಿತ್ತು. ಶಾಂತಿ ಚಳುವಳಿ, ಮಹಿಳೆಯರ ಗುಂಪುಗಳು ಆಚರಣೆ ಸಮಿತಿ ತಮ್ಮನ್ನು ಎಲ್ಲಾ ಕಾರ್ಯಕ್ರಮಗಳಿಂದ ಹೊರಗಿಟ್ಟಿದ್ದಾರೆ, ತಮ್ಮ ಧೋರಣೆ ಆಚರಣೆಯಲ್ಲಿ ಬಿಂಬಿತವಾಗಿಲ್ಲ ಎಂದು ದೂರಿವೆ. ಹಲವಾರು ದೂರುಗಳಿಂದಾಗಿ ನಾಲ್ಕು ಬಾರಿ ಆಚರಣೆ ಸಮಿತಿಯನ್ನು ನೇಮಿಸಬೇಕಾಯಿತು.

ಈ ನಡುವೆ ಅಮೆರಿಕದ ಒತ್ತಡದಿಂದ ಇನ್ನೂ ಮುಂದುವರಿಯುತ್ತಿರುವ ಇಸ್ರೇಲಿ-ಪ್ಯಾಲೆಸ್ಟೇನ್ ಶಾಂತಿ ಒಪ್ಪಂದ ಕೊನೆಯುಸಿರು ಎಳೆಯುತ್ತಿದೆ. ಆ ಒಪ್ಪಂದಕ್ಕೆ ಜೀವ ತರಲು ಅಮೆರಿಕ ಶ್ರಮ ಮೀರಿ ಪ್ರಯತ್ನಿಸುತ್ತಿದ್ದರೂ ಇಸ್ರೇಲಿ ಸರಕಾರದ ಹಠಮಾರಿತನದಿಂದ ಸಾಧ್ಯವಾಗಿಲ್ಲ. ಸದ್ಯಕ್ಕೆ ಇಂಗ್ಲೆಂಡಿನಲ್ಲಿ ನಡೆಯಲಿರುವ ಶಾಂತಿ ಮಾತುಕತೆ ಏನೂ ಫಲಕೊಡಲಾರದೆಂದು ಹಲವು ಅಮೆರಿಕದ ವಕ್ತಾರರೇ ಸಂಶಯ ವ್ಯಕ್ತಪಡಿಸಿದ್ದಾರೆ.

ಈ ನಡುವೆ ಇಸ್ರೇಲಿನ ಹಠಮಾರಿತನದ ಧೋರಣೆಯಿಂದ ಕುಪಿತರಾದ, ಶಾಂತಿ ಒಪ್ಪಂದವನ್ನು ಪಾಲಿಸದಿರುವ ಇಸ್ರೇಲಿ ಧೋರಣೆ ಹೀಗೆ ಮುಂದುವರೆದರೆ ಮೇ 99 ರ ಹೊತ್ತಿಗೆ ಸ್ವತಂತ್ರ ಪ್ಯಾಲೆಸ್ಟೇನ್ ಪ್ರಭುತ್ವದ ಘೋಷಣೆ ಮಾಡುವುದಾಗಿ ಬೆದರಿಸಿದ್ದಾರೆ.

ಅಫಘಾನ್ ಮಾತುಕತೆಗಳು ವಿಫಲ

ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಪಾಕಿಸ್ತಾನದ ಇಸ್ಲಾಮಾಬಾದಿನಲ್ಲಿ ಏರ್ಪಡಿಸಲಾಗಿದ್ದ ಅಫಘಾನ್ ಮಾತುಕತೆಗಳು ವಿಫಲವಾಗಿವೆ. ಮೊದಲ ಬಾರಿಗೆ 1996 ರಲ್ಲಿ ಕಾಬೂಲನ್ನು ವಶಪಡಿಸಿಕೊಂಡ ಪಾಕಿಸ್ತಾನ ಬೆಂಬಲಿತ ತಾಲಿಬಾನ್ ಹಾಗೂ ತಾಲಿಬಾನ್ ವಿರೋಧಿ ಒಕ್ಕೂಟದ ಪ್ರತಿನಿಧಿಗಳು ಶಾಂತಿ ಮಾತುಕತೆಯಲ್ಲಿ ಭಾಗವಹಿಸಿದ್ದರು. ಆದರೂ ಈ ಮಾತುಕತೆಗಳು ಬಿದ್ದು ಹೋಗಿವೆ, ಮುಂದಿನ ಮಾತುಕತೆಗಳ ಸಮಯ, ಜಾಗ ನಿರ್ಧಾರ ಸಹ ಮಾಡದೆ ಮಾತುಕತೆಗಳು ವಿಫಲವಾಗಿವೆ.

ಇದಕ್ಕಿಂತ ಮೊದಲು ಈ ಮಾತುಕತೆಗಳ ಫಲವಾಗಿ ಒಂದು ಕಮಿಷನ್ ನೇಮಿಸುವ ಒಪ್ಪಂದಕ್ಕೆ ಹತ್ತಿರವಾಗಿತ್ತು. ಎರಡೂ ಕಡೆಗಳಿಂದ ತಲಾ ಇಪ್ಪತ್ತು ಪಂಡಿತರನ್ನು (ಉಲೆಮಾ) ನೇಮಿಸುವುದು, ಈ ನಲ್ವತ್ತು ಜನರ ಕಮಿಷನ್ ಕದನ ವಿರಾಮ, ತಾತ್ಕಾಲಿಕ ಸರಕಾರದ ಸ್ವರೂಪ, ಅಂತರ್ರಾಷ್ಟ್ರೀಯ ಏಜೆನ್ಸಿಗಳಿಗೆ ಪರಿಹಾರ ಕಾರ್ಯ ನಡೆಸಲು ಅವಕಾಶ ಒದಗಿಸುವ ಬಗ್ಗೆ-ಇಸ್ಲಾಂ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಎಂದಾಗಿತ್ತು. ಮಾತುಕತೆಗಳಲ್ಲಿ ಬಹುಭಾಗ ಈ ಉಲೇಮ(ಪಂಡಿತರು) ಯಾರು ಎಂಬ ಬಗ್ಗೆ ಜಿಜ್ಞಾಸೆಗೆ ಮೀಸಲಾಗಿತ್ತು. ತಾಲಿಬಾನ್ ಉಲೇಮಾ ಎಂದರೆ ಧಾರ್ಮಿಕ ಮಠಗಳಲ್ಲಿ ತರಬೇತಿಯಾದವರು ಮಾತ್ರ ಅಂತ. ತಾಲಿಬಾನ್ ವಿರೋಧಿ ಒಕ್ಕೂಟ ಇಸ್ಲಾಮಿಕ್ ಹಿನ್ನೆಲೆ ಇರುವ ಯಾವುದೇ ಪಂಡಿತರನ್ನು ಉಲೇಮಾ ಎಂದು ಪರಿಗಣಿಸಬೇಕು ಎಂದು ವಾದಿಸಿದ್ದರು. ಈ ಬಗ್ಗೆ ಒಪ್ಪಂದ ಆದರೂ ಆಮೇಲೆ ಉಲೇಮ ಕಮಿಷನ್ ಸೇರುವ ಸ್ಥಿತಿಗೆ ತಲುಪಲಿಲ್ಲ. ಸ್ವಾಭಾವಿಕವಾಗಿಯೂ ಎರಡೂ ಬಣಗಳು ಮಾತುಕತೆ ವೈಫಲ್ಯಕ್ಕೆ ಪರಸ್ಪರ ದೋಷಾರೋಪಣೆಯಲ್ಲಿ ಮುಳುಗಿದ್ದಾರೆ.

ಅಫಘಾನಿಸ್ತಾನದ ಮುಕ್ಕಾಲು ಭಾಗ ಆಗಲೇ ಆಳುತ್ತಿರುವ ತಾಲಿಬಾನ್ ಅಮೆರಿಕ ತೈಲ ಕಂಪನಿಗಳು ಹಾಗೂ ಪಾಕಿಸ್ತಾನದ ಕೂಸು. ವಿಶ್ವಸಂಸ್ಥೆ ಮೇಲ್ವಿಚಾರಣೆ ಮಾತುಕತೆಗಳ ಮೂಲಕ ಇತರ ಗುಂಪುಗಳೊಂದಿಗೆ ಶಾಂತಿ ಖರೀದಿ ಮಾಡಿ, ತಾಲಿಬಾನ್ ಸರ್ಕಾರಕ್ಕೆ ಅಂತರ್ರಾಷ್ಟ್ರೀಯ ಮಾನ್ಯತೆ ಒದಗಿಸುವುದು ಇವರಿಗೆ ಬೇಕಾಗಿದೆ. ಮಾಜಿ ಸೋವಿಯತ್ ಒಕ್ಕೂಟದ ಮಧ್ಯ ಏಶ್ಯಾ ಗಣರಾಜ್ಯಗಳಲ್ಲಿ ಇರುವ ತೈಲ ಸಾಗಿಸಲು ಅಫಘಾನಿಸ್ತಾನದಲ್ಲೊಂದು ಕೈಗೊಂಬೆ ಸರ್ಕಾರ ಈ ತೈಲ ಕಂಪನಿಗಳಿಗೆ ತುಂಬ ಅಗತ್ಯ.

ಮೀನಾದಲ್ಲಿ ದುರಂತ

ಸೌದಿ ಅರೇಬಿಯಾದ ಮೀನಾ ಎಂಬ ಸ್ಥಳದಲ್ಲಿ ಹಜ್ ಯಾತ್ರಿಗಳ ಒಂದು ಧಾರ್ಮಿಕವಿಧಿಗಾಗಿ ನಡೆದ ನೂಕುನುಗ್ಗಲಲ್ಲಿ 118 ಜನ ಸತ್ತಿದ್ದಾರೆ. 24 ಜನ ಅದರಲ್ಲಿ ಭಾರತೀಯರು. ಮೀನಾದಲ್ಲಿ ಇರುವ 'ದುಷ್ಟಶಕ್ತಿ' ಪ್ರತಿಬಿಂಬಿಸುವ ಗೋಪುರ ವೊಂದಕ್ಕೆ ನಿರ್ದಿಷ್ಟ ಅವಧಿಯಲ್ಲಿ ಕಲ್ಲುಗಳನ್ನು ಹೊಡೆಯುವುದು ಈ ಧಾರ್ಮಿಕ ವಿಧಿ. ಇದಕ್ಕಾಗಿ ನೆರೆದಿದ್ದ ಸುಮಾರು 1 ಲಕ್ಷ ಜನರು ಈ ವಿಧಿ ನೆರವೇರಿಸುವ ಅವಸರದಲ್ಲಿ ಆದ ನೂಕುನುಗ್ಗಲಲ್ಲಿ ಈ ದುರಂತ ನಡೆದಿದೆ. ಹೆಚ್ಚು ಕಡಿಮೆ ಪ್ರತಿವರ್ಷ ಸೌದಿ ಅರೆಬಿಯಾದಲ್ಲಿ ದೊಡ್ಡ ಸಂಖ್ಯೆಗಳ ಹಜ್ ಯಾತ್ರಿಗಳು ಸೇರಿದಾಗ ಒಂದಿಲ್ಲೊಂದು ರೀತಿಯ ದುರಂತ ನಡೆದೇ ಇದೆ. ಕಳೆದ ವರ್ಷ ಹಜ್ ಯಾತ್ರಿಗಳು ವಾಸಿಸುತ್ತಿದ್ದ ಟೆಂಟ್‌ಗಳಿಗೆ ಬೆಂಕಿ ಬಿದ್ದು ಅರ್ಧ ದಷ್ಟು ಭಾರತೀಯರು ಸೇರಿದಂತೆ ಸುಮಾರು 300 ಜನ ಸತ್ತಿದ್ದರು. ಈ ಬಾರಿ ಅಗ್ನಿ-ನಿರೋಧಕ ಟೆಂಟ್‌ಗಳನ್ನು ಬಳಸಲಾಗಿತ್ತು.

ತನ್ನ ಗುಟ್ಟುಗಳನ್ನು ಬಿಡಲೊಲ್ಲದ ಸಿಐಎ

ಅಮೆರಿಕದ ಕಾನೂನು ಪ್ರಕಾರ 30 ವರ್ಷಗಳ ನಂತರ 'ರಹಸ್ಯ' ಎಂದು ಗುರುತಿಸಿರುವ ಎಲ್ಲಾ ಸರಕಾರಿ ದಾಖಲೆಗಳು, ಕಾಗದ ಪತ್ರಗಳನ್ನು ಸಂಶೋಧಕರ, ಸಾರ್ವಜನಿಕರ ಅವಗಾಹನೆಗೆ 'ಪತ್ರಾಗಾರ' ದಲ್ಲಿ ಇರಿಸಬೇಕು. ಆದರೆ ಸಿಐಎ ಈ ಕಾನೂನು ತನಗೆ ಅನ್ವಯವಾಗುವುದಿಲ್ಲವೋ ಎನ್ನುವಂತೆ 50 ರ ಮತ್ತು 60 ರ ದಶಕದ ಹಲವಾರು 'ರಹಸ್ಯ' ದಾಖಲೆಗಳನ್ನು, ಕಾಗದ ಪತ್ರಗಳನ್ನು ಪತ್ರಾಗಾರಕ್ಕೆ ಒಪ್ಪಿಸಲು ನಿರಾಕರಿಸುತ್ತಿದೆ. ಸಿಐಎಯ ಈ ನಿರಾಕರಣೆಯನ್ನು ಸರ್ಕಾರವೇ ನೇಮಿಸಿದ ಚರಿತ್ರಕಾರರ ಸಮಿತಿಯೊಂದು ತೀವ್ರವಾಗಿ ಖಂಡಿಸಿದೆ.

ಮುಖ್ಯವಾಗಿ 50, 60 ರ ದಶಕದಲ್ಲಿ ಸಿಐಎ ವಿದೇಶಗಳಲ್ಲಿ ನಡೆಸಿದ ಸರ್ಕಾರ ಉರುಳಿಸುವ ಕ್ಷಿಪ್ರ ಕ್ರಾಂತಿಗಳ ಬಗೆಗಿನ ದಾಖಲೆಗಳನ್ನು ಸಿಐಎ ಬಿಟ್ಟುಕೊಡಲು ಅಳುಕು ತೋರಿಸುತ್ತಿದೆ. ಕ್ಯೂಬಾದಲ್ಲಿ ಕ್ಯಾಸ್ಟ್ರೋ ಸರಕಾರ ಉರುಳಿಸಲು ನಡೆಸಿದ ಪ್ರಯತ್ನ, 1954 ರಲ್ಲಿ ಗ್ವಾಟೆಮಾಲದ ಕ್ಷಿಪ್ರಕ್ರಾಂತಿ, 1953 ರಲ್ಲಿ ಇರಾನ್‌ನಲ್ಲಿ ಷಾ ರನ್ನು ಅಧಿಕಾರಕ್ಕೆ ತಂದ ಕ್ಷಿಪ್ರಕ್ರಾಂತಿ, 1965 ರ ಇಂಡೋನೇಶ್ಯಾ ಕ್ಷಿಪ್ರಕ್ರಾಂತಿ - ಮುಂತಾದ ಸುಮಾರು 11 ಕುಖ್ಯಾತ ಚಟುವಟಿಕೆಗಳ ಬಗ್ಗೆ ಸಿಐಎ ದಾಖಲೆಗಳನ್ನು ಬಿಡುಗಡೆ ಮಾಡಿಲ್ಲ. ಈ ದಾಖಲೆಗಳನ್ನು ಸಿಐಎ ಈಗಾಗಲೇ ನಾಶಮಾಡಿರಬಹುದು ಎಂದು ಚರಿತ್ರಕಾರರು ಆತಂಕ ವ್ಯಕ್ತಪಡಿಸಿದ್ದಾರೆ.

ಮುಂದಿನ ವರ್ಷ 11 ದೇಶಗಳಲ್ಲಿ 'ಯುರೋ'

ಮುಂದಿನ ವರ್ಷ ಆರಂಭದ ಹೊತ್ತಿಗೆ ಯುರೋಪಿನ 11 ದೇಶಗಳಲ್ಲಿ 'ಯುರೋ' ಎಂಬ ಸಾಮಾನ್ಯ ನಾಣ್ಯವನ್ನು ಅಂಗೀಕರಿಸಲಿವೆ. ಈ ಬಗ್ಗೆ ಯುರೋಪಿ ಯನ್ ಪಾರ್ಲಿಮೆಂಟ್ ಇತ್ತೀಚಿನ ಒಂದು ನಿರ್ಣಯವನ್ನು ಮಂಜೂರು ಮಾಡಿದೆ. ನಿರ್ಣಯಕ್ಕೆ 467 ಪರ ಮತಗಳು ಬಿದ್ದರೆ, 65 ವಿರುದ್ಧ ಮತಗಳು ಮತ್ತು 24 ಗೈರು ಹಾಜರಿಯಾಗಿದ್ದರು. ಬೆಲ್ಜಿಯಂ ರಾಜಧಾನಿ ಬ್ರಸ್ಸೆಲ್ಸ್‌ನಲ್ಲಿ ಸೇರಿದ್ದ ಯುರೋಪಿನ ನಾಯಕರ ಶೃಂಗಸಭೆ ಸಹ ಈ ನಿರ್ಣಯವನ್ನು ಅನುಮೋದಿಸಿದೆ. ಈ ನಿರ್ಣಯದಿಂದ 'ಯುರೋ' ಆರಂಭ ವಾಗುವ ಬಗ್ಗೆ ಇದ್ದ ಅನಿಶ್ಚಿತತೆ ಇಲ್ಲವಾಗಿದೆ.

ಇತ್ತೀಚೆಗೆ ಜರ್ಮನಿಯ ಹಲವು ಬುದ್ಧಿಜೀವಿಗಳು ಕೋರ್ಟಿಗೆ ಹೋಗಿ 'ಯುರೋ' ನಾಣ್ಯ ಜರ್ಮನರ ಸಾಮಾನ್ಯ ಜನರ ಹಿತಾಸಕ್ತಿಗೆ ವಿರುದ್ಧ ಎಂಬ ಸಾರ್ವಜನಿಕ ಹಿತಾಸಕ್ತಿ ಕೇಸು ಹಾಕಿದ್ದರು. ಫ್ರಾನ್ಸ್‌ನಲ್ಲೂ ಇತ್ತೀಚೆಗೆ 'ಯುರೋ' ಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಫ್ರಾನ್ಸ್ ಮುಂದಿನ ಯುರೋಪಿಯನ್ ಕೇಂದ್ರೀಯ ಬ್ಯಾಂಕ್ ಅಧ್ಯಕ್ಷ ಫ್ರೆಂಚ್ ಆಗಿರಬೇಕು ಎಂದು ಹಠ ಹಿಡಿದಿತ್ತು. ಜರ್ಮನಿ ಇದನ್ನು ವಿರೋಧಿಸಿತ್ತು. ಕೊನೆಗೆ ಈ ಬಗ್ಗೆ ಒಪ್ಪಂದವಾಗಿದ್ದು ಡಚ್ ಬ್ಯಾಂಕರ್ ಡಯಸನ್ ಬರ್ಗ್ ಆ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಡಚ್ ಒತ್ತಡಕ್ಕೆ ಮಣಿದು, ಸಾಮಾನ್ಯವಾಗಿ 8 ವರ್ಷದ ಈ ಪದವಿಯನ್ನು 4 ವರ್ಷಕ್ಕೆ ಮೊಟಕು ಗೊಳಿಸಿದ್ದು, 2002 ರಲ್ಲಿ ಫ್ರೆಂಚ್ ಸರ್ಕಾರ ನೇಮಿಸಿದ ವ್ಯಕ್ತಿಯನ್ನು ಬ್ಯಾಂಕ್ ಅಧ್ಯಕ್ಷನಾಗಿ ನೇಮಿಸಲಾಗುವುದು.

'ಯುರೋ' ನಾಣ್ಯ ಮುಂದಿನ ವರ್ಷ ಅಂಗೀಕರಿಸುತ್ತಿರುವ ದೇಶಗಳೆಂದರೆ ಆಸ್ಟ್ರಿಯ, ಬೆಲ್ಜಿಯಂ, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಐರ್ಲೆಂಡ್, ಇಟಲಿ, ಲಕ್ಸಂಬರ್ಗ್, ನೆದರ್ ಲ್ಯಾಂಡ್ (ಹಾಲೆಂಡ್), ಪೋರ್ಚುಗಲ್ ಮತ್ತು ಸ್ಪೈನ್. ಬ್ರಿಟನ್, ಡೆನ್ಮಾರ್ಕ್ ಮತ್ತು ಸ್ವೀಡನ್ ಸದ್ಯಕ್ಕೆ 'ಯುರೋ' ನಾಣ್ಯ ಅಂಗೀಕರಿಸದಿರಲು ನಿರ್ಧರಿಸಿವೆ. ಗ್ರೀಸ್ 'ಯುರೋ' ನಾಣ್ಯ ಅಂಗೀಕರಿಸಲು ಹಾಕಿದ್ದ ಶರತ್ತುಗಳನ್ನು ಮುಟ್ಟಲಾಗಿಲ್ಲ. ಜುಲೈ 2002 ರ ಹೊತ್ತಿಗೆ ಈ 11 ದೇಶಗಳ ರಾಷ್ಟ್ರೀಯ ನಾಣ್ಯಗಳು, ಚಲಾವಣೆಯಿಂದ ಪೂರ್ಣವಾಗಿ ನಿಂತು ಹೋಗುತ್ತದೆ. ಅವರೆಗೆ 'ಯುರೋ' ಹಾಗೂ ರಾಷ್ಟ್ರೀಯ ನಾಣ್ಯಗಳು (ಜರ್ಮನಿಯಲ್ಲಿ ಮಾರ್ಕ್, ಫ್ರಾನ್ಸ್‌ನಲ್ಲಿ ಫ್ರಾಂಕ್ ಇತ್ಯಾದಿ) ಎರಡೂ ಬಳಕೆ ಯಲ್ಲಿರುತ್ತವೆ. 'ಯುರೋ' ಅಂಗೀರಿಸಿರುವ ದೇಶಗಳು 30 ಕೋಟಿ ಜನಸಂಖ್ಯೆ ಹೊಂದಿದ್ದು, ಅಮೆರಿಕದ ನಂತರ ಜಂಟಿಯಾಗಿ ಎರಡನೇದೊಡ್ಡ ಆರ್ಥಿಕ ಹೊಂದಿವೆ.

ಯುರೋಪಿಯನ್ ಒಕ್ಕೂಟ ಹಾಗೂ ಸಾಮಾನ್ಯ ನಾಣ್ಯ 'ಯುರೋ' ನಿಜ ವಾಗಿಯೂ ಯುರೋಪಿಯನ್ ಗುತ್ತೇದಾರಿ ಬಂಡವಾಳ ಯುರೋಪಿನ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಯನ್ನು ಕಾಪಾಡುವ ನಿರ್ಧಾರ. ಅಮೆರಿಕ ಹಾಗೂ ಜರ್ಮನಿ ಬಹುರಾಷ್ಟ್ರೀಯ ಕಂಪನಿಗಳ ಜತೆ ಪೈಪೋಟಿಗೆ ಹಾಗೂ ತನ್ನ ಆಂತರಿಕ ರಾಷ್ಟ್ರೀಯ ಗಡಿಗಳ ಅಡೆತಡೆ ಯುರೋಪಿಯನ್ ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳಕ್ಕೆ ಇರುವುದಿಲ್ಲ. ಇದು ಯುರೋಪಿಯನ್ ಜನತೆಗೆ ಏನೂ ಸವಲತ್ತು ಕೊಡುವುದಿಲ್ಲ. ಬದಲಾಗಿ ಯುರೋಪಿಯನ್ ಕಂಪನಿಗಳು ಪುನರ್ಸಂಘಟನೆಗೊಂಡು ಇನ್ನೂ ಹೆಚ್ಚಿನ ನಿರುದ್ಯೋಗಕ್ಕೆ ಕಾರಣವಾಗಬಹುದು. ಯುರೋಪಿನ ಹಿಂದುಳಿದ ಕೃಷಿ-ಪ್ರಧಾನ ದೇಶಗಳ ಜನ ಹೆಚ್ಚು ಹೆಚ್ಚು ವಾಣಿಜ್ಯಕ್ಕೆ ಪ್ರತಿಕೂಲ ವಾತಾವರಣ ಎದುರಿಸ ಬಹುದು. ಯುರೋಪಿನ ಸಣ್ಣ ದೇಶಗಳ ಸಣ್ಣ ಕಂಪನಿಗಳು ಮುಳುಗಿ ಹೋಗಿ ಜರ್ಮನಿ, ಫ್ರಾನ್ಸ್ ನಂತಹ ಅಭಿವೃದ್ಧ ದೇಶಗಳ ದೈತ್ಯ ಕಂಪನಿಗಳ ಬಲ ಇನ್ನಷ್ಟು ಹೆಚ್ಚಬಹುದು. ಯುರೋಪಿನ ಪ್ರಮುಖ ರಾಜಕೀಯ ಶಕ್ತಿಗಳಾದ ಬಲಪಂಥೀಯ ಹಾಗೂ ಸೋಶಿಯಲ್ ಡೆಮೋಕ್ರೆಟಿಕ್ ಪಕ್ಷಗಳು ಯುರೋಪಿನ ಕಂಪನಿಗಳ ಈ ಕಾರ್ಯಕ್ರಮಕ್ಕೆ ಬೆಂಬಲಿಸುತ್ತಿದ್ದರೆ, ಕಮ್ಯುನಿಸ್ಟರು ಮತ್ತು ಪರಿಸರವಾದಿಗಳು ಇದನ್ನು ವಿರೋಧಿಸುತ್ತಾ ಬಂದಿದ್ದಾರೆ, ಹೆಚ್ಚಿನ ದೇಶಗಳಲ್ಲಿ ನಡೆದ ಜನಮತ ಸಂಗ್ರಹಗಳಲ್ಲಿ ಹೆಚ್ಚಿನ ದೇಶಗಳಲ್ಲಿ, ಯುರೋಪಿನ ಒಕ್ಕೂಟಕ್ಕೆ ಸೇರುವ ನಿರ್ಧಾರಕ್ಕೆ ಹೆಚ್ಚು ಕಡಿಮೆ ಅರ್ಧದಷ್ಟು ಜನ ವಿರೋಧಿಸಿದ್ದರು. ರಾಷ್ಟ್ರೀಯ ವಿಶಿಷ್ಟತೆ, ಸಂಸ್ಕೃತಿಯನ್ನು ಈ ಯುರೋಪಿನ ಒಕ್ಕೂಟ ಹೊಸಕಿ ಹಾಕುತ್ತದೆ ಎಂಬ ಭಯವೂ ವ್ಯಾಪಕವಾಗಿದೆ. ಯುರೋಪಿನ ದೇಶಗಳು ಜನ ಗೆದ್ದುಕೊಂಡ ಪ್ರಜಾಸತ್ತಾತ್ಮಕ ಹಕ್ಕುಗಳು, ಸವಲತ್ತುಗಳು, ಸಾಮಾಜಿಕ ಕಲ್ಯಾಣ ಕ್ರಮಗಳು ಯುರೋಪಿಯನ್ ಒಕ್ಕೂಟದ ಹೆಸರಲ್ಲಿ ಜನ ಕಳೆದು ಕೊಳ್ಳುತ್ತಾರೆ. ಹಲವಾರು ರಾಷ್ಟ್ರೀಯ ಕಾನೂನುಗಳನ್ನು ಯುರೋ ಕಾನೂನುಗಳು ಸ್ಥಾನಬದ್ಧಗೊಳಿಸುತ್ತವೆ.

ಮಾಸ್ಕೋದಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ

ರಶ್ಯಾ ರಾಯಭಾರಿಗೆ ವಿದ್ಯಾರ್ಥಿ ಸಂಘಗಳ ಪ್ರತಿಭಟನೆ

ಎಸ್.ಎಫ್.ಐ, ಎ.ಐ.ಎಸ್.ಎಫ್., ಎ.ಐ.ಎಸ್.ಬಿ. ಮತ್ತು ಛಾತ್ರ ಜನತಾದಳದ ಮುಖಂಡರು ಏಪ್ರಿಲ್ 27 ರಂದು ರಶ್ಯನ್ ಒಕ್ಕೂಟದ ರಾಯಭಾರಿ ಕಚೇರಿಯಲ್ಲಿನ ಹಿರಿಯ ಅಧಿಕಾರಿ ಫಿಯೋಡೊರ್ ಯಾರಿಕೋವ್‌ರನ್ನು ಭೇಟಿ ಮಾಡಿ ಮಾಸ್ಕೋದಲ್ಲಿ ನವನಾಝಿಗಳೆನಿಸಿಕೊಂಡವರು ಭಾರತೀಯ ವಿದ್ಯಾರ್ಥಿಗಳ ಮೇಲೆ ನಡೆಸುತ್ತಿರುವ ಧಾಳಿಗಳ ಬಗ್ಗೆ ಆಘಾತ ಮತ್ತು ಆತಂಕವನ್ನು ದಾಖಲಿಸಿದರು.

ಈ ಕುಖ್ಯಾತ ನವನಾಝೀ ಗ್ಯಾಂಗ್‌ಗಳು ಹಿಟ್ಲರನ ಜನ್ಮದಿನದಿಂದ ಆರಂಭಿಸಿ ಒಂದುವಾರ ದಿನಕ್ಕೊಬ್ಬ ಏಶ್ಯನ್ನರನ್ನು ಕೊಲ್ಲುವುದಾಗಿ ಸಾರಿದ್ದಾರೆ. ಇಲ್ಲಿಯ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ಹುಡುಗಿಯರೂ ಸೇರಿದಂತೆ ಹಲವು ಭಾರತೀಯ ವಿದ್ಯಾರ್ಥಿಗಳ ಮೇಲೆ ಅವರು ಧಾಳಿ ಮಾಡಿದ್ದಾರೆ. ರಶ್ಯಾದಲ್ಲಿ ಸುಮಾರು 3000 ಭಾರತೀಯ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

ಈ ಬರ್ಬರ ಗೂಂಡಾಗಿರಿಯ ವಿರುದ್ಧ ತಮ್ಮ ಬಲವಾದ ಪ್ರತಿಭಟನೆಯನ್ನು ಪ್ರತಿನಿಧಿಗಳು ದಾಖಲಿಸಿದರು. ರಶ್ಯಾದ ಅಧಿಕಾರಿಗಳು ಈ ಘಟನೆಗಳ ಗಂಭೀರತೆಯ ಬಗ್ಗೆ ಆತಂಕಿತರಾಗಿದ್ದು ಪರಿಸ್ಥಿತಿಯನ್ನು ಹತೋಟಿಗೆ ತರಲು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿರುವುದಾಗಿ ರಶ್ಯನ್ ರಾಯಭಾರಿ ಆಶ್ವಾಸನೆ ನೀಡಿದರು. ಇದು ಕೆಲವು ವಿದೇಶಿ ಸಂಸ್ಥೆಗಳಿಂದ ಹಣ ಪಡೆದ ಪಟ್ಟಭದ್ರ ಹಿತಾಸಕ್ತಿಗಳು ಭಾರತೀಯ ಜನತೆ ಮತ್ತು ರಶ್ಯಾದ ಜನತೆಯ ನಡುವಿನ ಸಂಬಂಧಗಳನ್ನು ಕದಡಲು ಮಾಡಿರುವ ಒಂದು ಯೋಜಿತ ತಂತ್ರ ಎಂದೂ ಯಾರಿಕೋವ್ ತಿಳಿಸಿದರು.

ಈ ವಿದ್ಯಾರ್ಥಿ ನಿಯೋಗದಲ್ಲಿ ಎಸ್.ಎಫ್.ಐ.ನ ಪಿ.ಕೃಷ್ಣಪ್ರಸಾದ್, ಎ.ಐ.ಎಸ್.ಎಫ್.ನ ಡಾ. ರಾಹುಲ್ ಭಾಯೀಜಿ, ಎಐಎಸ್‌ಬಿ ನ ಜಿ.ದೇವರಾಜ್ ಹಾಗೂ ಛಾತ್ರ ಜನತಾದಳದ ಕುಂವರ್ ದಾನಿಷ್ ಅಲಿ ಇದ್ದರು. (ಐಎನ್‌ಎನ್)

ಫ್ರಾನ್ಸ್‌ನ 1968ರ ಕೆಂಪು ಮೇ

ಪುಟ 5 ರಿಂದ

ಫ್ರೆಂಚ್ ಕಮ್ಯುನಿಸ್ಟ್ ಪಕ್ಷ ಮೇ 68 ರ ಘಟನೆಗಳನ್ನು ನಿರೀಕ್ಷಿಸಿರದಿದ್ದರೂ, ಅಲ್ಪಾವಧಿಯಲ್ಲೇ ಅದರ ಕ್ರಾಂತಿಕಾರಿ ಸಾಧ್ಯತೆಗಳನ್ನು ಕಾರ್ಯಾಚರಣೆಗೆ ಇಳಿಸಿ ತನ್ನ ಕ್ರಾಂತಿಕಾರಿ ಪಾತ್ರ ವಹಿಸಿತು. ನವ ವಾಮಪಂಥ, ವಿದ್ಯಾರ್ಥಿ ನಾಯಕರ ದುಸ್ಸಾಹಸಿ ಕ್ರಮಗಳು ಕ್ರಾಂತಿ ಸಾಧ್ಯತೆಗಳನ್ನೂ ಹಾಳುಮಾಡುವಲ್ಲಿ ಗಣನೀಯ ಪಾತ್ರವಹಿಸಿದವು.

ಅಭಿವೃದ್ಧ ಬಂಡವಾಳಶಾಹಿ ದೇಶದಲ್ಲಿ ಕ್ರಾಂತಿ ಸುಲಭ ಸಾಧ್ಯವಾದುದಲ್ಲ. ನಾಟೋ ಕೂಟದ ದೇಶಗಳಿಂದ ಸುತ್ತುವರಿದಿರುವ, ಅತ್ಯಂತ ಪ್ರಬಲ ದಮನಕಾರಿ ಪ್ರಭುತ್ವ ಹೊಂದಿದ್ದ ಫ್ರಾನ್ಸ್‌ನಲ್ಲಿ ಸಿದ್ಧತೆ ಇಲ್ಲದೆ ಸಶಸ್ತ್ರ ದಂಗೆಗೆ ಕರೆ ಕೊಡುವ ದುಸ್ಸಾಹಸವಾದಿ ಕ್ರಮಗಳನ್ನು ಫ್ರೆಂಚ್ ಕಮ್ಯುನಿಸ್ಟ್ ಪಕ್ಷ ಸರಿಯಾಗಿಯೇ ಅಲ್ಲಗಳೆಯಿತು. ಆದರೆ ಅದೇ ಸಮಯದಲ್ಲಿ ಮೇ 68 ರ ಎಲ್ಲಾ ಕ್ರಾಂತಿಕಾರಿ ಸಾಧ್ಯತೆಗಳನ್ನು ಬಳಸಲಿಲ್ಲ. ಇದರಿಂದ ಸಾಧ್ಯವಿರುವ ಮುನ್ನಡೆಗಳನ್ನು ಸಾಧಿಸಲಿಲ್ಲ. ಅದರ ಕ್ರಾಂತಿಯ ರಣನೀತಿ, ಇಂತಹ ಘಟನೆಗಳನ್ನು ಪೂರ್ಣವಾಗಿ [illegible] ಯೋಗಿಸುವುದನ್ನು ಒಳಗೊಂಡಿ ರಲಿಲ್ಲ ಎಂದು ಹೇಳುವುದು ಅನುಚಿತವಾಗಿ ರಲಾರದು. ಮುಂದೆ ಪಕ್ಷ 'ಯುರೋಕಮ್ಯುನಿಸಂ' ನ ತಪ್ಪು ದಾರಿಯನ್ನು ಹಿಡಿದದ್ದು ಇದರ ಪರಿಣಾಮ.

ಮೇ 68 ರ ಇನ್ನೊಂದು ದೊಡ್ಡ ಗೆಲುವು ಎಂದರೆ ಅದು ಹಿಂದೆ ಅದರಿಂದ ದೂರವಿದ್ದ ವಿಶ್ವವಿದ್ಯಾಲಯಗಳು, ವಕೀಲರುಗಳು, ಡಾಕ್ಟರುಗಳು ಮತ್ತಿತರ ವಿಶೇಷ ತಜ್ಞರುಗಳನ್ನು ರಾಜಕೀಯಕ್ಕಿಳಿಸಿತು. ಸಾಮಾಜಿಕ ಅನ್ಯಾಯದಿಂದ ರೋಸಿದ್ದ ಬುದ್ಧಿಜೀವಿಗಳನ್ನು ರಾಜಕೀಯ ಕಾರ್ಯಾಚರಣೆಗೆ ಇಳಿಸಿತು. ಬಂಡವಾಳಶಾಹಿ ಜಗತ್ತಿನ ವರ್ಗ ಹೋರಾಟದಲ್ಲಿ ಮಧ್ಯೆ ಸಿಕ್ಕಿರುವ ಯುವಕ, ವಿಜ್ಞಾನಿಗಳು, ತಂತ್ರಜ್ಞರು ಇತರ ವಿಶೇಷಜ್ಞರನ್ನು ಕಾರ್ಮಿಕ ವರ್ಗದ ಕಡೆಗೆ ಸೆಳೆಯಿತು.

ಫ್ರಾನ್ಸಿನಲ್ಲಿ ಡಿಸೆಂಬರ್ 86 ರಲ್ಲಿ ಉಚ್ಚ ಶಿಕ್ಷಣಕ್ಕೆ ಅವಕಾಶಗಳಿಗೆ ಮಿತಿ ಹಾಕುವ ನೀತಿಯ ವಿರುದ್ಧ ನಡೆದ ಭಾರೀ ವಿದ್ಯಾರ್ಥಿ ಚಳುವಳಿ ಮತ್ತು ಅದರ ಸಫಲತೆ ಮೇ 68 ನ್ನು ಮೆಲುಕು ಹಾಕುವಂತಿತ್ತು. ಆದರೆ ಮೇ 68ರ ವಿದ್ಯಾರ್ಥಿ-ಯುವಜನ ದಂಗೆಗಳ ಪ್ರಮಾಣ, ಅದು ಕಾರ್ಮಿಕ ಮತ್ತಿತರ ವರ್ಗಗಳನ್ನೂ ಒಳಗೊಂಡ ರೀತಿ, ಅದರ 'ವಿಶ್ವ ಪ್ರಜ್ಞೆ' ನಿಜವಾಗಿಯೂ ಚಾರಿತ್ರಿಕವಾದದ್ದು. ನವ ವಾಮಪಂಥದ ಸೈದ್ಧಾಂತಿಕ ಕುರುಡು ಗಲ್ಲಿಗಳಲ್ಲಿ ಮರೆಯಾದರೂ ಅದರ ಸಕಾರಾತ್ಮಕ ಅಂಶ ಗಳು ಪ್ರಗತಿಪರ ವಿದ್ಯಾರ್ಥಿ- ಯುವಜನ ಚಳುವಳಿಗೆ ಕ್ರಾಂತಿ ಕಾರಿ ಕಾರ್ಮಿಕ ಚಳುವಳಿಗೆ ಸ್ಮರಣೀಯ. ○

ನರಸಿಂಹಂ ವರದಿಗೆ ಬ್ಯಾಂಕ್ ನೌಕರರ ಧಿಕ್ಕಾರ

ಸಂಯುಕ್ತ ಪ್ರತಿಭಟನೆಗೆ ಕರೆ

ನರಸಿಂಹಂ ವರದಿ ಬ್ಯಾಂಕ್ ವಲಯದ ಬಗ್ಗೆ ಮಾಡಿರುವ ಶಿಫಾರಸುಗಳನ್ನು ಬಲವಾಗಿ ಖಂಡಿಸಿರುವ ಸಂಯುಕ್ತ ಬ್ಯಾಂಕ್ ಸಂಘಗಳ ವೇದಿಕೆ ಮೇ 20 ರಂದು 'ಅಖಿಲ ಭಾರತ ಪ್ರತಿಭಟನಾ ದಿನ' ಆಚರಿಸಲು ನಿರ್ಧರಿಸಿದೆ. ಮೇ 27 ರಂದು ಬಜೆಟ್ ಅಧಿವೇಶನ ಆರಂಭವಾಗುವ ದಿನ ಎಲ್ಲಾ ಮಹಾನಗರಗಳಲ್ಲಿ, ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್-ಪ್ರತಿಭಟನಾ ಮತ ಪ್ರದರ್ಶನಗಳನ್ನು ನಡೆಸಲು, ಜೂನ್ ಮೊದಲ ವಾರ ಸಂಸತ್ತಿನೆದುರು ಮತ ಪ್ರದರ್ಶನ, ಬ್ಯಾಂಕ್ ರಾಷ್ಟ್ರೀಕರಣ ದಿನವಾದ ಜುಲೈ 19 ರಂದು 'ಸಾರ್ವಜನಿಕ ವಲಯ ಬ್ಯಾಂಕಿಂಗ್ ರಕ್ಷಿಸಿ ದಿನಾಚರಣೆ' ಹಾಗೂ ಜುಲೈ 1998 ರ ಅಂತ್ಯದಲ್ಲಿ ಅಖಿಲ ಭಾರತ ಬ್ಯಾಂಕ್ ಮುಷ್ಕರ ಬ್ಯಾಂಕ್ ನೌಕರರು ಸಂಯುಕ್ತವಾಗಿ ರೂಪಿಸಿರುವ ಪ್ರತಿಭಟನಾ ಕಾರ್ಯಕ್ರಮ ಗಳು. ಜೂನ್ ಅಂತ್ಯದ ವೇಳೆಗೆ ಈ ವಿಚಾರದ ಬಗ್ಗೆ ಒಂದು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಲಾಗುತ್ತಿದೆ.

ಸಂಯುಕ್ತ ಬ್ಯಾಂಕ್ ಸಂಘಗಳ ವೇದಿಕೆ(UFBU)ಯಲ್ಲಿ ಬ್ಯಾಂಕ್ ನೌಕರರ ಪ್ರಮುಖ ಸಂಘಟನೆಗಳಾದ ಬಿಇಎಫ್ಐ, ಎಐಬಿಬಿಸಿ, ಎನ್‌ಸಿಬಿಇ, ಎಐಬಿಬಿ, ಎನ್‌ಐಬಿಬಿಸಿ, ಐಎನ್‌ಬಿಇಎಫ್, ಎನ್‌ಒಬಿಡಬ್ಲ್ಯು ಹಾಗೂ ಎನ್‌ಒಬಿಓ ಸೇರಿವೆ.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸರಕಾರದ ಬಂಡವಾಳವನ್ನು 50% ಕ್ಕಿಂತ ಕೆಳಗಿಳಿಸಬೇಕೆಂಬ ವರದಿಯ ಶಿಫಾರಸು ಸಾರ್ವಜನಿಕ ವಲಯದ ವ್ಯಾಪಕ ಜಾಲ ಹಾಗೂ ಸಂಪನ್ಮೂಲಗಳನ್ನು ದೇಶೀ- ವಿದೇಶೀ ಖಾಸಗೀ ಕಂಪನಿ ವಲಯಕ್ಕೆ ವಹಿಸಿಕೊಡುವ ಗುರಿ ಹೊಂದಿದೆ. 1969 ರಲ್ಲಿ ಬ್ಯಾಂಕ್ ರಾಷ್ಟ್ರೀಕರಣವಾದಂದಿನಿಂದ ಸಾರ್ವಜನಿಕ ವಲಯದ ಬ್ಯಾಂಕುಗಳು ಕೃಷಿ ವಲಯಕ್ಕೆ ಸಾಲ ಒದಗಿಸುವಲ್ಲಿ, ಗ್ರಾಮೀಣ ಮತ್ತು ದುರ್ಬಲ ವಿಭಾಗಗಳಿಗೆ ಅಗತ್ಯವಾದ ಸಾಲಗಳ ಪೂರೈಕೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ನರಸಿಂಹಂ ಸಮಿತಿಯ ಶಿಫಾರಸುಗಳನ್ನು ಒಪ್ಪಿ ಬ್ಯಾಂಕುಗಳಲ್ಲಿ ಖಾಸಗೀ ವಲಯಕ್ಕೆ ಹೆಚ್ಚಿನ ಶೇರು ಸಿಗುವಂತಾದರೆ ಬ್ಯಾಂಕುಗಳ ವ್ಯಾಪಕ ಸಂಪನ್ಮೂಲ ಈ ಖಾಸಗಿಯವರ ವ್ಯಾಪಾರ-ವಹಿವಾಟುಗಳಿಗೇ ಹೋಗುತ್ತದೆಯೇ ಹೊರತು ದೇಶದ ಆರ್ಥಿಕಕ್ಕೆ ಸಿಗುವುದಿಲ್ಲ ಎಂದು ಬ್ಯಾಂಕ್ ನೌಕರರ ಸಂಘಟನೆಗಳು ಅಭಿಪ್ರಾಯ ಪಟ್ಟಿವೆ.

ಬ್ಯಾಂಕುಗಳನ್ನು 1. ಒಂದೆರಡು ಜಾಗತಿಕ ಬ್ಯಾಂಕುಗಳು, 2. ಕೆಲವು ರಾಷ್ಟ್ರೀಯ ಮಟ್ಟದ ಬ್ಯಾಂಕುಗಳು, 3. ಕೆಲವು ಪ್ರಾದೇಶಿಕ (ರಾಜ್ಯ ಮಟ್ಟದ ಬ್ಯಾಂಕುಗಳು ಹಾಗೂ 5. ದುರ್ಬಲ ಬ್ಯಾಂಕುಗಳು ಎಂದು ವಿಂಗಡಿಸಿರುವ ಇದು ಪ್ರಸಕ್ತ ಬ್ಯಾಂಕಿಂಗ್ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಎಂದೂ ಈ ಸಂಘಗಳು ಹೇಳಿವೆ.

'ಆಸ್ತಿ ಪುನರ್ರಚನಾ ನಿಧಿ' ಯ ಬಗ್ಗೆ ನೀಡಿರುವ ಶಿಫಾರಸು ಕೂಡಾ ದೊಡ್ಡ ಹಾಗೂ ಪ್ರಭಾವೀ ಉದ್ದಿಮೆ ಗುಂಪುಗಳು ಪಡೆದು ಹಿಂದಿರುಗಿಸದ ಸಾಲಗಳನ್ನು ಗುಪ್ತವಾಗಿ ಮನ್ನಾ ಮಾಡುವ ಒಂದು ಹುನ್ನಾರ. ಆದ್ದರಿಂದಲೇ ಈ ಹಿಂದೆ ಸರಕಾರ ಈ ಶಿಫಾರಸನ್ನು ತಿರಸ್ಕರಿಸಿತ್ತು ಎಂದು ಬ್ಯಾಂಕ್ ಸಂಘಗಳು ನೆನಪಿಸಿವೆ.

ಕೆಲವು ಬ್ಯಾಂಕುಗಳು ನಷ್ಟದಲ್ಲಿ ಏಕಿವೆ ಎಂಬ ಬಗ್ಗೆ ಮಾತ್ರ ಈ ಸಮಿತಿ ಚಕಾರವೆತ್ತಿಲ್ಲ. ಮರುಪಾವತಿಯಾಗದ ಸಾಲಗಳ ಮೊತ್ತ 45 ಸಾವಿರ ಕೋಟಿ ರೂ. ಗಳಷ್ಟು ಅಗಾಧವಾಗಲು ಬ್ಯಾಂಕುಗಳ ರಾಜಕೀಯ ದುರ್ಬಳಕೆ, ರಾಜಕಾರಣಿಗಳ ಒಂದು ವಿಭಾಗ, ಉದ್ದಿಮೆಗಾರರು, ವ್ಯಾಪಾರಸ್ಥರ ನಡುವೆ ಶಾಮೀಲೇ ಕಾರಣ. 'ಬ್ಯಾಂಕು ಸಾಲಗಳನ್ನು ಉದ್ದೇಶಪೂರ್ವಕ ವಾಗಿ ಮರುಪಾವತಿ ಮಾಡದಿರುವುದನ್ನು ಒಂದು ಕ್ರಿಮಿನಲ್ ಅಪರಾಧ ಎಂದು ಪರಿಗಣಿಸಬೇಕೆಂಬ, ಸಾಲ ಮರುಪಾವತಿ ಮಾಡದವರ ಪಟ್ಟಿಯನ್ನು ಪ್ರಕಟಿಸಬೇಕೆಂಬ ಕಾರ್ಮಿಕ ಸಂಘಗಳ ಸೂಚನೆ ಅದೇಕೋ ಈ ಸಮಿತಿಗೆ ರುಚಿಸಿಲ್ಲ!

1997 ರಲ್ಲಿ ನಷ್ಟ ತೋರಿಸಿರುವ 3 ಬ್ಯಾಂಕುಗಳಲ್ಲಿ ಸುಮಾರು 1 ಲಕ್ಷ ನೌಕರರು, ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರ ಭವಿಷ್ಯದ ಮುಂದೆ ಈ ಶಿಫಾರಸ್ಸು ಪ್ರಶ್ನೆ ಚಿಹ್ನೆಯಿಟ್ಟಿದೆ.

ಸಂಯುಕ್ತ ಬ್ಯಾಂಕ್ ಸಂಘಗಳ ವೇದಿಕೆ ಬ್ಯಾಂಕ್ ನೌಕರರು ಏನೇ ಬಂದರೂ ಈ ಶಿಫಾರಸುಗಳ ಜಾರಿಯಾಗದಿರುವಂತೆ ಹೋರಾಡಲು ಕಟಿಬದ್ಧರಾಗಿದ್ದಾರೆ ಎಂದಿದೆ. ಈ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಪ್ರತಿಭಟನಾ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಪ್ರಧಾನ ಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳ ಬಳಿ ನಿಯೋಗ ಒಯ್ಯಲು ಎಲ್ಲಾ ರಾಜಕೀಯ ಪಕ್ಷಗಳನ್ನು, ಸಂಸತ್ ಸದಸ್ಯರನ್ನೂ, ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ವೇದಿಕೆ ನಿರ್ಧರಿಸಿದೆ.

ವಿಮಾ ಖಾಸಗೀಕರಣದ ಪ್ರಯತ್ನಗಳನ್ನೂ ವಿರೋಧಿಸಿರುವ ಸಂಯುಕ್ತ ಬ್ಯಾಂಕ್ ನೌಕರರ ವೇದಿಕೆ ವಿಮಾ ನೌಕರರ ಸಂಘಗಳ ಜತೆಗೂಡಿ ಖಾಸಗೀಕರಣಕ್ಕೆ ಬಲವಾದ ಪ್ರತಿರೋಧವೊಡ್ಡಲು ನಿರ್ಧರಿಸಿದೆ.

ಎನ್ರಾನ್, ಕೊಜೆಂಟ್ರಿಕ್ಸ್‌ಗಳ ಸೂಪರ್‌ಲಾಭಕ್ಕಾಗಿ ವಿದ್ಯುತ್ ನಿಯಂತ್ರಣ ಆಯೋಗ ರಚನೆಗೆ ಸುಗ್ರೀವಾಜ್ಞೆ - ಸಿಐಟಿಯು ವಿರೋಧ

ತನ್ನ ಸಾರ್ವಜನಿಕ ವಲಯ-ವಿರೋಧಿ ಹಾಗೂ ಖಾಸಗೀಕರಣಕ್ಕೆ ಬದ್ಧತೆಯ ನೀತಿಗಳಿಗೆ ಅನುಗುಣವಾಗಿ ಬಿಜೆಪಿ ನೇತೃತ್ವದ ಸರ್ಕಾರ ಒಂದಾದ ಮೇಲೊಂದರಂತೆ ಖಾಸಗೀ ವಲಯ ಮತ್ತು ವಿದೇಶಿ ಗುತ್ತೇದಾರಿ ಬಂಡವಾಳಕ್ಕೆ ಅನುಕೂಲ ಮಾಡಿಕೊಡುವ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸಿಐಟಿಯು ಖಂಡಿಸಿದೆ.

ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ ಗಳನ್ನು ರಚಿಸಲು ಹೊರಡಿಸಿದ ಸುಗ್ರೀವಾಜ್ಞೆ ಐಎಂಎಫ್-ವಿಶ್ವಬ್ಯಾಂಕ್‌ನ ಉದಾರೀಕರಣ, ಖಾಸಗೀಕರಣ ನಿರ್ದೇಶನಗಳಿಗೆ ತಲೆಬಾಗಿರುವ ಮತ್ತೊಂದು ಕ್ರಮ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ನೀಡಿರುವ ಒಂದು ಹೇಳಿಕೆ ಬಲವಾಗಿ ಖಂಡಿಸಿದೆ. ಈ ಆಯೋಗಗಳಿಗೆ ವಿದ್ಯುತ್ ದರಗಳನ್ನು ನಿರ್ಧರಿಸುವ, ವಿದ್ಯುತ್ತಿನ ಉತ್ಪಾದನೆ, ರವಾನೆ ಹಾಗೂ ವಿತರಣೆಗೆ ಸಂಬಂಧ ಪಟ್ಟಂತೆ ಸಕಲ ಅಧಿಕಾರಗಳಿರುತ್ತವೆ. ಮುಂದಿನ ಸಂಸತ್ ಅಧಿವೇಶನದ ದಿನಾಂಕಗಳನ್ನು ಆಗಲೇ ಪ್ರಕಟಿಸಿರುವಾಗ ಸರ್ಕಾರ ಇಂತಹ ಒಂದು ಮಹತ್ವಪೂರ್ಣ ಮೂಲಭೂತ ರಾಷ್ಟ್ರೀಯ ಮಹತ್ವದ ನೀತಿಯ ಬಗ್ಗೆ ಸಂಸತ್ತನ್ನು ತಪ್ಪಿಸಲು ವಿಶೇಷಾಜ್ಞೆ ಹೊರಡಿಸಿರುವುದು ಆಶ್ಚರ್ಯಕರ ಎಂದು ಸಿಐಟಿಯು ಹೇಳಿದೆ.

ಸುಗ್ರೀವಾಜ್ಞೆಯಲ್ಲಿ ನಿಗದಿಪಡಿಸಿದ ವಿಧಿವಿಧಾನಗಳ ಫಲವಾಗಿ ವಿದ್ಯುತ್ ದರಗಳು ದೊಡ್ಡ ಪ್ರಮಾಣದಲ್ಲಿ ಏರಲಿವೆ. ಇದಕ್ಕೂ ಆತಂಕಕಾರಿ ವಿಷಯವೆಂದರೆ ಮುಂದಿನ ಮೂರು ವರ್ಷಗಳ ನಂತರ ಕೃಷಿವಲಯಕ್ಕೆ ನೀಡಿದ ರಿಯಾಯ್ತಿಯನ್ನು ಹಿಂದಕ್ಕೆ ಪಡೆಯಲಾಗುತ್ತದೆ, ಕೇಂದ್ರದಲ್ಲಿ ಈಗಾಗಲೇ ವಿದ್ಯುತ್ ರವಾನೆಯನ್ನು ಪ್ರತ್ಯೇಕಿಸಲಾಗಿತ್ತು. ವಿದ್ಯುತ್ ವಿತರಣೆ ಮತ್ತು ಉತ್ಪಾದನೆಯನ್ನು ಪ್ರತ್ಯೇಕಿಸಲು ಮುಂದಿನ ಸಂಸತ್ ಅಧಿವೇಶನದಲ್ಲಿ ಒಂದು ಮಸೂದೆ ತರುವುದಾಗಿಯೂ ಸರ್ಕಾರ ಪ್ರಕಟಿಸಿದೆ.

ಇವೆಲ್ಲಾ ಎನ್ರೋನ್, ಕೊಜೆಂಟ್ರಿಕ್ಸ್ ಮುಂತಾದವುಗಳ ಹಿತಾಸಕ್ತಿ ಈಡೇರಿಸಲು, ದೇಶದ ಜನಗಳ ಮೇಲೆ ವಿಪರೀತ ವಿದ್ಯುತ್ ದರಗಳ ಹೊರೆ ಹೇರಿ ಖಾಸಗಿಯವರಿಗೆ ಭಾರೀ ಲಾಭ ಒದಗಿಸಲು ಕೈಗೊಂಡಿರುವ ಕ್ರಮಗಳು ಎಂದು ಹಿಯಾಳಿಸಿರುವ ಸಿಐಟಿಯು, ಈ ವಿಶೇಷಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದೆ. ಕಾರ್ಮಿಕ ಸಂಘಗಳು ಯಾವುದೇ ಬೇಧ ಭಾವವಿಲ್ಲದೆ ಸರಕಾರದ ಇಂತಹ ಜನ- ವಿರೋಧಿ ನೀತಿಗಳ ವಿರುದ್ಧ ಸಂಯುಕ್ತ ಆಂದೋಲನ ಕಟ್ಟಬೇಕು ಎಂದು ಕರೆ ನೀಡಿದೆ.

ಬಿಜೆಪಿ ಸರಕಾರ ವಿಶ್ವಬ್ಯಾಂಕ್ - ಐಎಂಎಫ್ ನೀತಿಗಳನ್ನು ಪಾಲಿಸುತ್ತಿದೆ

ಸಿಐಟಿಯು ಆರೋಪ

ಏಪ್ರಿಲ್ 24 ರಂದು ಹಣಕಾಸು ಮಂತ್ರಿಗಳು ಮತ್ತು ಕಾರ್ಮಿಕ ಸಂಘಗಳ ನಡುವೆ ನಡೆದ ಬಜೆಟ್ ಪೂರ್ವ ಚರ್ಚೆಗಳಲ್ಲಿ ಸಿಐಟಿಯು ಪ್ರತಿನಿಧಿಗಳು ಬಿಜೆಪಿ ನೇತೃತ್ವದ ಸಮ್ಮಿಶ್ರ ಸರಕಾರ ಐಎಂಫ್-ವಿಶಬ್ಯಾಂಕ್ ಹೇರಿದ ನೀತಿಗಳನ್ನೇ ಅನುಸರಿಸುತ್ತಿದೆ ಎಂದು ಸಿಟ್ಟಿನಿಂದ ನುಡಿದರು.

ಹಣಕಾಸು ವಲಯುವನ್ನು ದೇಶೀ ಖಾಸಗಿಯವರಿಗೂ ತೆರೆಯಬಾರದು, ಶೇರು ಮಾರಾಟ ಆಯೋಗದ ಶಿಫಾರಸುಗಳನ್ನು ತಿರಸ್ಕರಿಸಬೇಕು, ಆಯೋಗವನ್ನೇ ರದ್ದು ಮಾಡಬೇಕು ಎಂದು ಸಿಐಟಿಯು ಈ ಸಭೆಯಲ್ಲಿ ಆಗ್ರಹಿಸಿತು.

ರೋಗಗ್ರಸ್ತ ಘಟಕಗಳ ಪುನರುಜ್ಜೀವನದ ಬಗ್ಗೆ ಒಂದು ವ್ಯಾಪಕ ಕಾರ್ಯತಂತ್ರ ರೂಪಿಸಲು ಪ್ರಧಾನ ಮಂತ್ರಿಗಳು ಕಾರ್ಮಿಕ ಸಂಘಗಳ ಹಾಗೂ ಸಂಬಂಧಪಟ್ಟ ಮಂತ್ರಿಗಳ ಒಂದು ಸಭೆ ಕರೆಯಬೇಕು ಎಂದು ಸಿಐಟಿಯು ಸೂಚನೆಯಿತ್ತಿತ್ತು. ಸಂಸತ್ತಿನಲ್ಲಿ ಈಗ ಇರುವ ರೋಗಗ್ರಸ್ತ ಕೈಗಾರಿಕಾ ಕಂಪನಿಗಳ (ತಿದ್ದುಪಡಿ) ಮಸೂದೆಯನ್ನು ರದ್ದು ಮಾಡಿ ಕಾರ್ಮಿಕ ಸಂಘಗಳ ಅಭಿಪ್ರಾಯಗಳನ್ನು ಪರಿಗಣಿಸಿ ಹೊಸ ಮಸೂದೆ ತಯಾರಿಸಬೇಕು ಎಂದು ಸಿಐಟಿಯು ಒತ್ತಾಯಿಸಿದೆ.

ರೋಗಗ್ರಸ್ತ ಸಾರ್ವಜನಿಕ ವಲಯದ ಘಟಕಗಳ ಕಾರ್ಮಿಕರಿಗೆ ನಿಯಮಿತ ಸಂಬಳ ಪಾವತಿ, ವೇತನ ಪರಿಷ್ಕರಣೆ, 1992 ರಿಂದ ಬಾಕಿ ಉಳಿದಿರುವ ಡಿ.ಎ. ಇತ್ಯಾದಿಗಳನ್ನು ಬಿಡುಗಡೆ ಮಾಡಬೇಕು ಎಂದೂ ಸಿಐಟಿಯು ನಿಯೋಗ ಆಗ್ರಹ ಪಡಿಸಿತು.

ಕೃಷಿ ಕಾರ್ಮಿಕರ ಶಾಸನ ತರಬೇಕು, ಸಾರ್ವಜನಿಕ ವಲಯದ ಘಟಕಗಳ ಆಡಳಿತದ ಪ್ರಜಾಪ್ರಭುತ್ವೀಕರಣ, ಬೋನಸ್ ಪಾವತಿ ಶಾಸನದಲ್ಲಿನ ಮಿತಿಗಳ ರದ್ದತಿ, ಗ್ರಾಚ್ಯುಟಿ ಕನಿಷ್ಟ ಮಿತಿಯನ್ನು 3.5 ಲಕ್ಷ ರೂ. ಸೇರಿಸುವುದು, ಆದಾಯ ತೆರಿಗೆ ವಿನಾಯ್ತಿ ಮಿತಿಯನ್ನು 1 ಲಕ್ಷ ರೂಗೇರಿಸುವುದು ಇತ್ಯಾದಿ ತನ್ನ ಬೇಡಿಕೆಗಳನ್ನು ಸಿಐಟಿಯು ಪ್ರತಿನಿಧಿ ಪುನರುಚ್ಛರಿಸಿದರು. ಕಾರ್ಯದರ್ಶಿ ಸ್ವದೇಶ್ ದೇ ರಾಯ್ ಸಿಐಟಿಯು ಪ್ರತಿನಿಧಿಯಾಗಿದ್ದರು.

(ಐಎನ್‌ಎನ್)

ಅಣಕ

ಶರತ್ ಚಂದ್ರ

ಹೊಸ ಯುದ್ಧ ಸಂಪುಟ.......

ನಕ್ಷತ್ರಕ ಒಂದು ಸ್ಕೂಪ್ ಕಳಿಸಿದ್ದಾನೆ. ಇದು ವಾಜಪೇಯಿ ಸಚಿವ ಸಂಪುಟ ಪುನರ್ರಚನೆ ಬಗ್ಗೆ. ಆ ಬಗ್ಗೆ ಹೊರಡಿಸಲಾಗುವ ಪತ್ರಿಕಾ ಹೇಳಿಕೆಯ ಅಡ್ವಾನ್ಸ್ ಕಾಪಿ ಕಳಿಸಿದ್ದಾನೆ.

ವಾಜಪೇಯಿ ಸಂಪುಟ ಪುನರ್ರಚನೆ: ಪ್ರಧಾನಿ ವಾಜಪೇಯಿ ಸಂಪುಟವನ್ನು ವಿನೂತನ ರೀತಿಯಲ್ಲಿ ಪುನರ್ರಚಿಸಿದ್ದಾರೆ. ಕಳೆದ ಹಲವು ವಾರಗಳ ಅನುಭವದ ಮೇಲೆ ಎಲ್ಲಾ ಖಾತೆಗಳ ಹೆಸರುಗಳನ್ನು ಬದಲಾಯಿಸಲಾಗಿದೆ. ದೇಶದ ಸಮಸ್ಯೆಗಳನ್ನು ಬಗೆಹರಿಸಲು ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕು ಪ್ರತಿಯೊಂದು ಮಂತ್ರಿ ದೇಶದ ಮುಂದಿರುವ ಒಂದು ಸಮಸ್ಯೆ ವಿರುದ್ಧ ಹೋರಾಡಬೇಕು. ಯಾವುದಾದರೂ ಮಂತ್ರಿ ಖಾತೆಗೆ ಹೋರಾಡಲು ಶತ್ರು ಸಿಕ್ಕಿಲ್ಲವೋ ಅವರಿಗೆ ಶತ್ರುಗಳನ್ನು ಹುಡುಕಿದಮೇಲೆ ಖಾತೆ ಪ್ರಕಟಿಸಲಾಗುವುದು. ಇದು ಯುದ್ಧ ಸಂಪುಟದ ಮಂತ್ರಿಗಳು ಮತ್ತು ಅವರ ಹೊಸ ಖಾತೆಗಳು. ಸಂಪುಟದ ಹೊರಗಿದ್ದು ಹೋರಾಟ ಮಾಡುತ್ತಿದ್ದ ಕೆಲವರನ್ನು ಸೇರಿಸಲಾಗಿದೆ.

ವಾಜಪೇಯಿ: ಮಂತ್ರಿಗಳು ತಮ್ಮ ಶತ್ರು ಗಳ ವಿರುದ್ಧ ಮಾತ್ರ ಹೋರಾಡುವಂತೆ ಪರಸ್ಪರ ಹರಿಹಾಯದಂತೆ ತಡೆಯುವ ಖಾತೆ.

ಅಡ್ವಾಣಿ - ದೇಶದಲ್ಲಿ ಇನ್ನೂ ಉಳಿದಿರುವ ಹುಟ್ಟುತ್ತಿರುವ ವಿದೇಶಿ-ವಿರೋಧಿ ಖಾತೆ

ಜಾರ್ಜ್ ಫರ್ನಾಂಡೀಸ್- ಚೀಣ-ವಿರೋಧಿ ಖಾತೆ,

ಬಾಳಾ ಠಾಕ್ರೆ - ಪಾಕಿಸ್ತಾನಿ ಆಟಗಾರರು, ಕಲಾವಿದರ-ವಿರೋಧಿ ಖಾತೆ.

ಮುರಳಿ ಮನೋಹರ ಜೋಷಿ - ಅಣ್ವಸ್ತ್ರ -ವಿರೋಧಿಗಳನ್ನು ವಿರೋಧಿಸುವ ಖಾತೆ

ಜೇತ್ಮಲಾನಿ - ಡಾ|| ಸುಬ್ರಹ್ಮಣ್ಯ ಸ್ವಾಮಿ - ವಿರೋಧಿ ಖಾತೆ

ಸುಖರಾಂ - ಭ್ರಷ್ಟಾಚಾರ - ವಿರೋಧಿ ಖಾತೆ

ನಿತಿಶ್ ಕುಮಾರ್ - ಲಲ್ಲೂ ಪ್ರಸಾದ್ ಯಾದವ್ - ವಿರೋಧಿ ಖಾತೆ.

ರಾಮಮೂರ್ತಿ - ಕರುಣಾನಿಧಿ-ವಿರೋಧಿ ಖಾತೆ

ಮಮತಾ ಬ್ಯಾನರ್ಜಿ-ಜ್ಯೋತಿ ಬಸು-ವಿರೋಧಿ ಖಾತೆ.

ರಾಮಕೃಷ್ಣ ಹೆಗಡೆ-ದೇವೇಗೌಡ - ವಿರೋಧಿ ಖಾತೆ

ಕುಮಾರ ಮಂಗಳಂ-ರಾಜ್ಯ ವಿದ್ಯುತ್ ಬೋರ್ಡ್-ಪಂಪ್ ಸೆಟ್ ರೈತರ-ವಿರೋಧಿ ಖಾತೆ

ಪ್ರಮೋದ್ ಮಹಾಜನ್ - ವಿರೋಧಿಗಳು ಇಲ್ಲದ ಸಚಿವರಿಗೆ, ಖಾತೆಗಳಿಗೆ ವಿರೋಧಿ ಗಳನ್ನು ಹುಡುಕುವುದಕ್ಕೆ, ಹಂಚುವುದಕ್ಕೆ ಮತ್ತು ವಿಶ್ವಾಸ ಮತ ಗೊಳಿಸುವ ಬಗ್ಗೆ ವಿಶೇಷ ಸಲಹೆಗಾರ.

ರಾಷ್ಟ್ರೀಯ ಅಜೆಂಡಾದಲ್ಲಿ ಕೃಷಿ ಕೂಲಿಕಾರರ ಶಾಸನದ ಪ್ರಸ್ತಾಪವೂ ಇಲ್ಲ

ಕೃಷಿ ಕೂಲಿಕಾರ ಸಂಘದ ಆತಂಕ

ಬಿಜೆಪಿ ಸರಕಾರದ ರಾಷ್ಟ್ರೀಯ ಅಜೆಂಡಾದಲ್ಲಿ ಕೃಷಿ ಕೂಲಿಕಾರರಿಗೆ ಕನಿಷ್ಟ ಸವಲತ್ತುಗಳನ್ನು ಒದಗಿಸುವ ಒಂದು ಕೇಂದ್ರೀಯ ಶಾಸನದ ಪ್ರಸ್ತಾಪ ಕೂಡಾ ಇಲ್ಲ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರ ಕಾರ್ಯದರ್ಶಿ ಸಮಿತಿ ಗಂಭೀರ ಆತಂಕ ವ್ಯಕ್ತಪಡಿಸಿದೆ. ಸಂಯುಕ್ತ ರಂಗ ಸರಕಾರ ಅಧಿಕಾರದಲ್ಲಿದ್ದಾಗ ಈ ಮಸೂದೆ ತಯಾರಿಸುವತ್ತ ಕೆಲವು ಕ್ರಮಗಳನ್ನಾದರೂ ಕೈಗೊಳ್ಳಲಾಗಿತ್ತು. ಅದನ್ನೀಗ ಸಂಸತ್ತಿನ ಮುಂದೆ ಇಡಬೇಕಿತ್ತು. ಆದರೆ ದುರದೃಷ್ಟವಶಾತ್ ಬಿಜೆಪಿ ಮಂತ್ರಿಗಳು ಇಂತಹ ಒಂದು ಕ್ರಮ ರೈತರು ಮತ್ತು ಕೃಷಿಕೂಲಿಕಾರರ ನಡುವಿನ ಒಗ್ಗಟ್ಟನ್ನು ಮುರಿಯುತ್ತದೆ, ಆದ್ದರಿಂದ ಇದು ಬೇಡ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಅಂದರೆ ಗ್ರಾಮೀಣ ಜನಸಂಖ್ಯೆಯ 5% ರಷ್ಟಿರುವ ಭೂಮಾಲಕರ ಪರವಾದ ಪಕ್ಷಪಾತವನ್ನು ಮರೆಮಾಡುವ ಪ್ರಯತ್ನ ಇದು ಎಂದು ಏಪ್ರಿಲ್ 22, 23 ರಂದು ಸಭೆ ಸೇರಿದ ಕೇಂದ್ರ ಕಾರ್ಯಕಾರಿ ಸಮಿತಿ ಹೇಳಿದೆ.

ಈ ಸರಕಾರ ತಂದ ಆಮದು ರಫ್ತು ನೀತಿ ನಾವು ಸಾಧಿಸಿದ ಅಲ್ಪಸ್ವಲ್ಪ ಆಹಾರ ಭದ್ರತೆಯನ್ನೂ ನಾಶಮಾಡಿ ಆಹಾರ ಸಾಮಗ್ರಿಗಳ ಬೆಲೆಗಳನ್ನು ಅಂತರ್ರಾಷ್ಟ್ರೀಯ ಮಟ್ಟಕ್ಕೇರಿಸುತ್ತದೆ. ಆದರೆ ಕೃಷಿ ಕೂಲಿಕಾರರ ಕೂಲಿ ಅದೇ ಮಟ್ಟಕ್ಕೇರುವುದಿಲ್ಲ. ವಿಶ್ವ ವ್ಯಾಪಾರ ಸಂಸ್ಥೆ ಹೇರುತ್ತಿರುವ ಪೇಟೆಂಟ್ ವ್ಯವಸ್ಥೆ ನಮ್ಮ ಗ್ರಾಮೀಣ ಆರ್ಥಿಕವನ್ನು ನಾಶಪಡಿಸುತ್ತದೆ ಮಾತ್ರವಲ್ಲ, ವಿದೇಶಿ ಲಾಯರುಗಳಿಗೆ ಭಾರಿ ದುಡ್ಡು ಮಾಡಿಕೊಡುವ ನಿರುಪಯುಕ್ತ ವೆಚ್ಚದ ಕಾನೂನು ಕಟ್ಲೆಗಳಿಗೆ ಅವಕಾಶ ಮಾಡಿಕೊಡುತ್ತದೆ ಎಂದು ಕೃಷಿಕೂಲಿಕಾರರ ಸಂಘ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಮೇ, ಜೂನ್ ತಿಂಗಳಲ್ಲಿ ದೇಶಾದ್ಯಂತ ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಶಾಸನಕ್ಕಾಗಿ ಒತ್ತಾಯಿಸಿ ಒಂದು ಬೃಹತ್ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ. ಜುಲೈ ತಿಂಗಳಲ್ಲಿ ಜಿಲ್ಲಾ ಮಟ್ಟಗಳಲ್ಲಿ ಸಾಮೂಹಿಕ ಸಮಾವೇಶಗಳು ನಡೆಯಲಿವೆ. **ಈ ವರ್ಷದ ಕೊನೆಯಲ್ಲಿ ನವದೆಹಲಿಯಲ್ಲಿ ಈ ಸಂಘ ಒಂದು ಅಭೂತಪೂರ್ವ ಸಮರಧೀರ ಕಾರ್ಯಕ್ರಮವನ್ನು ಸಂಘಟಿಸಲು ನಿರ್ಧರಿಸಿದೆ.**

ಉತ್ತರ ಭಾರತದಲ್ಲಿ, ವಿಶೇಷವಾಗಿ ಉತ್ತರ ಪ್ರದೇಶ, ಹರ್‍ಯಾಣ, ರಾಜಸ್ತಾನ, ಬಿಹಾರ, ಮಧ್ಯಪ್ರದೇಶಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳನ್ನು ಖಂಡಿಸಿದ ಸಂಘದ ಕಾರ್ಯಕಾರಿ ಸಮಿತಿಯ ಸಭೆ ಈ ಬಗ್ಗೆ ಪ್ರತ್ಯೇಕ ಸಮಾವೇಶಗಳನ್ನು ನಡೆಸಿ ಈ ಅತ್ಯಾಚಾರಗಳ ವಿರುದ್ಧ ಸಂಘದ ಬಾವುಟದಡಿ ಸ್ವತಂತ್ರವಾಗಿ, ಒಂದು ವರ್ಗ ಆಂದೋಲನವಾಗಿ ಪ್ರತಿರೋಧವನ್ನು ಸಂಘಟಿಸಲು ನೆರವಾಗಬೇಕೆಂದು ನಿರ್ಧರಿಸಿದೆ.

ಸಂಘದ ಕಾರ್ಯಕಾರಿ ಸಮಿತಿ ಇತರ ಕೃಷಿ ಕೂಲಿಕಾರರ ಹಾಗೂ ರೈತ ಸಂಘಗಳ ಜತೆಗೂಡಿ ವಿಶ್ವ ಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಸ್ಥೆ ಉಪದೇಶಿಸಿ ಕೃಷಿ ನೀತಿಗಳಿಗೆ ಪರ್ಯಾಯವಾದ ಕೃಷಿ ಅಭಿವೃದ್ಧಿ ನೀತಿಗಳನ್ನು ರೂಪಿಸಿ, ಜಾರಿ ಮಾಡುವ ಬಗ್ಗೆ ಒಂದು ಜಂಟಿ ವಿಚಾರ ಸಂಕಿರಣವನ್ನು ನಡೆಸಲು ನಿರ್ಧರಿಸಿದೆ. ಈ ಎಲ್ಲಾ ಕನಿಷ್ಟ ಕ್ರಮಗಳಿಲ್ಲದೆ ದೇಶದಲ್ಲಿ ಬಡತನ, ನಿರುದ್ಯೋಗ, ಸಾರ್ವತ್ರಿಕ ಅಸಂತೃಪ್ತಿ ಖಂಡಿತಾ ತಲೆಯೆತ್ತುತ್ತದೆ ಹಾಗೂ ದೇಶವನ್ನು ಮತ್ತೆ ಪಾಳೆಯಗಾರಿ ಮತ್ತು ವಸಾಹತುಶಾಹಿ ಆಚರಣೆಗಳತ್ತ ಒಯ್ಯುತ್ತದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಎಚ್ಚರಿಸಿದೆ.



ವಾರದ ವ್ಯಂಗ್ಯಚಿತ್ರ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ. ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27